
ಸಂಪುಟ: 05 ಸಂಚಿಕೆ: 192 ಪುಟಗಳು: 08 ಗುರುವಾರ 25 ಸೆಪ್ಟೆಂಬರ್ 2025 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com


ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5



- ಸುರಸಂಪೂರ್ಣಕಲಶಂ
ರುಧಿರಾಪ್ಲುತಮೇವ ಚ|
ದಧಾನಾ ಹಸ್ತಪದ್ಮಾಭ್ಯಾಂ
ಕೂಷ್ಮಾಂಡಾ ಶುಭದಾಸ್ತು ಮೇ||


# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಕನ್ನಡ ಸಾಹಿತ್ಯ ಲೋಕದಲ್ಲಿ ಡಾ. ಎಸ್. ಎಲ್. ಭೈರಪ್ಪನವರ ಹೆಸರು ಚಿರಪರಿಚಿತ. ತಮ್ಮ ತೀಕ್ಷ್ಣ ಮತ್ತು ತಾತ್ವಿಕ ವಿಚಾರಗಳಿಂದ ಕೂಡಿದ ಕಾದಂಬರಿಗಳ ಮೂಲಕ ಅವರು ಓದುಗರ ಮನಸ್ಸಿನಲ್ಲಿ ಅಳಿಸಲಾಗದ ಛಾಪನ್ನು ಮೂಡಿಸಿದ್ದಾರೆ. ಮಾನವ ಸಂಬಂಧಗಳ ಸಂಕೀರ್ಣತೆ, ತಲೆಮಾರುಗಳ ಸಂಘರ್ಷ, ಸಾಮಾಜಿಕ ಮೌಲ್ಯಗಳ ಸ್ಥಿತ್ಯಂತರ ಹಾಗೂ ಭಾರತೀಯ ಪರಂಪರೆಯ ಆಳವಾದ ವಿಶ್ಲೇಷಣೆಯನ್ನು ತಮ್ಮ ಕೃತಿಗಳಲ್ಲಿ ಕಟ್ಟಿಕೊಡುವ ಅವರ ಶೈಲಿ ಅನನ್ಯ.**



**ಕನ್ನಡ ಸಾಹಿತ್ಯಕ್ಕೆ 20ಕ್ಕೂ ಹೆಚ್ಚು ಕಾದಂಬರಿ**

# ಪರ್ವಯಾನ ಗಗನಯಾನ

## ಸಾರಸ್ವತ ಲೋಕಕ್ಕೆ ತುಂಬಲಾರದ ನಷ್ಟ



"ಕನ್ನಡ ಸಾರಸ್ವತ ಲೋಕದ ಹಿರಿಯ ಬರಹಗಾರರಾದ ಎಸ್.ಎಲ್.ಭೈರಪ್ಪನವರ ನಿಧನವಾರ್ತೆ ನೋವು ತಂದಿದೆ. ಭೈರಪ್ಪನವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ತಮ್ಮ ಆಪ್ತವೆನಿಸುವ ಬರಹ ಶೈಲಿಯಿಂದಾಗಿ ಅಪಾರ ಓದುಗರನ್ನು ಹೊಂದಿದ್ದ ಭೈರಪ್ಪನವರ ನಿಧನದಿಂದ ಸಾಹಿತ್ಯಲೋಕ ಬಡವಾಗಿದೆ. ಅವರ ಕುಟುಂಬವರ್ಗ ಮತ್ತು ಓದುಗ ಬಳಗಕ್ಕೆ ನನ್ನ ಸಂತಾಪಗಳು

-ಸಿದ್ದರಾಮಯ್ಯ, ಸಿಎಂ



"ಕನ್ನಡದ ಸುಪ್ರಸಿದ್ಧ ಕಾದಂಬರಿಕಾರರು, ಪದ್ಮವಿಭೂಷಣ ಪುರಸ್ಕೃತ, ಸರಸ್ವತಿ ಸಮ್ಮಾನ್ ಡಾ. ಎಸ್.ಎಲ್ ಭೈರಪ್ಪ ದೈವಾಧೀನರಾದರು ಎಂಬ ಸುದ್ದಿ ತಿಳಿದು ಮನಸ್ಸು ಭಾರವಾಗಿದೆ. ಶ್ರೀಯುತರು ತಮ್ಮ ಕೊನೆಯ ದಿನಗಳವರೆಗೂ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದರು. ಅವರು ಬರೆದ ವಂಶವೃಕ್ಷ, ಗೃಹಭಂಗ, ಆವರಣ, ನಾಯಿ ನೆರಳು, ಸಾಕ್ಷಿ, ಅನ್ವೇಷಣೆ ಸೇರಿದಂತೆ ಹತ್ತಾರು ಕಾದಂಬರಿಗಳು ಈಗಲೂ ಜನಪ್ರಿಯವಾಗಿದ್ದು ಯುವ ಸಮುದಾಯದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಿಗೊಳಿಸುತ್ತಿವೆ. ಭಗವಂತ ಶ್ರೀಯುತರ ಆತ್ಮಕ್ಕೆ ಸದ್ಗತಿ ಕರುಣಿಸಲಿ, ಅವರ ಕುಟುಂಬವರ್ಗ, ಅಪಾರ ಓದುಗ ಬಂಧುಗಳಲ್ಲಿ ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ

-ವಿ.ಸೋಮಣ್ಣ, ಕೇಂದ್ರ ಸಚಿವ



"ಇಹದ ''ಯಾನ'' ಅಂತ್ಯ.. ಕನ್ನಡದ ಶ್ರೇಷ್ಠ ಕಾದಂಬರಿಕಾರ, ಪದ್ಮಭೂಷಣ ಪುರಸ್ಕೃತ, ಕನ್ನಡ ಸಾರಸ್ವತ ಲೋಕಕ್ಕೆ ಮೊದಲ ಸರಸ್ವತಿ ಸಮ್ಮಾನ್ ಪ್ರಶಸ್ತಿಯ ಗೌರವವನ್ನು ತಂದುಕೊಟ್ಟ ಡಾ. ಎಸ್.ಎಲ್. ಭೈರಪ್ಪನವರು ಇಂದು ವಿಧಿವಶರಾಗಿದ್ದು ಬಹಳ ನೋವು ತಂದಿದೆ. ಅವರ ಕುಟುಂಬಸ್ಥರಿಗೆ ಈ ದುಃಖವನ್ನು ಭರಿಸುವ ಶಕ್ತಿ ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ

-ಡಿ.ಕೆ.ಶಿವಕುಮಾರ್ , ಡಿಸಿಎಂ



"ಶ್ರೀಯುತರು ತಮ್ಮ ಕೊನೆಯ ದಿನಗಳವರೆಗೂ ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದರು. ಅವರು ಬರೆದ ವಂಶವೃಕ್ಷ, ಗೃಹಭಂಗ, ಆವರಣ, ನಾಯಿ ನೆರಳು, ಸಾಕ್ಷಿ, ಅನ್ವೇಷಣೆ ಸೇರಿದಂತೆ ಹತ್ತಾರು ಕಾದಂಬರಿಗಳು ಈಗಲೂ ಜನಪ್ರಿಯವಾಗಿದ್ದು ಯುವ ಸಮುದಾಯದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಿಗೊಳಿಸುತ್ತಿವೆ. ದುಃಖ ಭರಿಸುವ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ

-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

• **ಉದಯವಾಹಿನಿ, ಬೆಂಗಳೂರು**

ಭೈರಪ್ಪ ಅವರು ಕಾದಂಬರಿಯನ್ನು ಬರೆಯುವ ಮೊದಲು ದಶಕಗಳವರೆಗೆ ಸಂಶೋಧನೆ ನಡೆಸಿದರೆಂಬುದು ವಿಶಿಷ್ಟ ಸಂಗತಿ. ಅವರ ಪ್ರತಿಯೊಂದು ಕೃತಿ ಗಟ್ಟಿಯಾದ ಆಧಾರಗಳನ್ನು ಹೊಂದಿದೆ. ಮಾನವ ಸಂಬಂಧಗಳು, ಸಂಸ್ಕೃತಿಯ ಸಂಘರ್ಷಗಳು, ಧಾರ್ಮಿಕ ಆಳತೆ, ರಾಜಕೀಯ ಪರಿಸ್ಥಿತಿಗಳು ಮತ್ತು ಇತಿಹಾಸದ ಅಂಶಗಳು ಅವರ ಬರವಣಿಗೆಯ ಕೇಂದ್ರಬಿಂದುಗಳಾಗಿವೆ. ಇದರಿಂದ ಅವರ ಕೃತಿಗಳು ಕೇವಲ ಸಾಹಿತ್ಯಪ್ರಿಯರಲ್ಲದೆ ಸಾಮಾನ್ಯ ಓದುಗರಿಗೂ ಆಕರ್ಷಕವಾಗುತ್ತವೆ. ಅದರಂತೆ, ಎಸ್. ಎಲ್. ಭೈರಪ್ಪ ಅವರು ಕನ್ನಡ ಸಾಹಿತ್ಯಕ್ಕೆ 20ಕ್ಕೂ ಹೆಚ್ಚು ಕಾದಂಬರಿಗಳನ್ನು ನೀಡಿದ್ದಾರೆ. ಅವುಗಳಲ್ಲಿ ಅನೇಕ ಕೃತಿಗಳು ಜನಪ್ರಿಯತೆಯನ್ನು ಗಳಿಸಿವೆ ಮತ್ತು ಹಲವು ಭಾಷೆಗಳಿಗೆ ಅನುವಾದಗೊಂಡಿವೆ.

**ವಂಶವೃಕ್ಷ ಪಸರಿಸಿದ ಮಂದ್ರದ ಧರ್ಮಶ್ರೀ**

ಬೆರಗುಗೊಳಿಸುತ್ತದೆ. ಯುದ್ಧದ ಭೀಕರತೆ, ರಾಜಕೀಯದ ಕುತಂತ್ರ ಮತ್ತು ಸಂಬಂಧಗಳ ಸೂಕ್ಷ್ಮತೆಯನ್ನು ವಾಸ್ತವಿಕ ನೆಲೆಯಲ್ಲಿ ಚಿತ್ರಿಸಿರುವ 'ಪರ್ವ' ಕನ್ನಡ ಸಾಹಿತ್ಯದ ಒಂದು ಹೆಗ್ಗುರುತಾಗಿದೆ.

**ವಂಶವೃಕ್ಷ:** ಪರಂಪರೆ ಮತ್ತು ಆಧುನಿಕತೆಯ ಸಂಘರ್ಷ: 'ವಂಶವೃಕ್ಷ' ಕಾದಂಬರಿಯು ಭಾರತೀಯ ಸಮಾಜದ ಮೂಲಾಧಾರವಾದ ಕುಟುಂಬ ವ್ಯವಸ್ಥೆ ಮತ್ತು ತಲೆಮಾರುಗಳ ನಡುವಿನ ಮೌಲ್ಯಗಳ ಸಂಘರ್ಷವನ್ನು ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಶ್ರೋತ್ರಿಯ ಮನೆತನದ ಕಥೆಯ ಮೂಲಕ ಪರಂಪರೆಯ ಬೇರುಗಳನ್ನು ಮತ್ತು ಆಧುನಿಕತೆಯ ಗಾಳಿಯನ್ನು ಎದುರಿಸುವ ಸವಾಲನ್ನು ಈ ಕೃತಿ ಅನಾವರಣಗೊಳಿಸುತ್ತದೆ. ಸಂಪ್ರದಾಯ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ನಡುವಿನ

**ಇತಿಹಾಸದ ಮರು ಓದು** 'ಆವರಣ' ಭೈರಪ್ಪನವರ ಅತ್ಯಂತ ಚರ್ಚಾತ್ಮಕ ಮತ್ತು ವಿವಾದಾತ್ಮಕ ಕಾದಂಬರಿಗಳಲ್ಲಿ ಒಂದು. ಭಾರತದ ಇತಿಹಾಸವನ್ನು, ವಿಶೇಷವಾಗಿ ಮಧ್ಯಕಾಲೀನ ಇತಿಹಾಸವನ್ನು ಹೇಗೆ ಬರೆಯಲಾಗಿದೆ ಮತ್ತು ಹೇಗೆ ಅರ್ಥೈಸಿಕೊಳ್ಳಲಾಗಿದೆ ಎಂಬುದರ ಕುರಿತು ಈ ಕೃತಿ ಪ್ರಶ್ನೆಗಳನ್ನು ಎತ್ತುತ್ತದೆ.

**ಮೈಸೂರಿನಲ್ಲೂ ದರ್ಶನಕ್ಕೆ ವ್ಯವಸ್ಥೆ**

ಭೈರಪ್ಪನವರ ಅಂತಿಮ ದರ್ಶನಕ್ಕೆ ಗುರುವಾರ ಬೆಳಗ್ಗೆ 8ರಿಂದ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುವುದು. ಎಲ್ಲಾ ಅಭಿಮಾನಿಗಳು ರವೀಂದ್ರ ಕಲಾಕ್ಷೇತ್ರಕ್ಕೆ ಬಂದು ಅಂತಿಮ ದರ್ಶನ ಪಡೆಯಬೇಕೆಂದು ಕುಟುಂಬದವರು ವಿನಂತಿಸಿದ್ದಾರೆ. ಮಧ್ಯಾಹ್ನದ ತರುವಾಯ ಪಾರ್ಥಿವ ಶರೀರವನ್ನು ಮೈಸೂರಿಗೆ ಗೌರವಪೂರ್ವಕವಾಗಿ ಕರೆದೊಯ್ಯಲಾಗುವುದು. ಮೈಸೂರಿನಲ್ಲಿಯೂ ಸಾರ್ವಜನಿಕ ದರ್ಶನ ವ್ಯವಸ್ಥೆ ಇರುತ್ತದೆ.

**ಮಹಾಭಾರತದ ಮರುಸೃಷ್ಟಿ :** ಭೈರಪ್ಪನವರ ಕೃತಿಗಳಲ್ಲಿ 'ಪರ್ವ'ಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಇದು ಮಹಾಭಾರತದ ಕಥೆಯನ್ನು ಅಲೌಕಿಕ ಅಂಶಗಳನ್ನು ಬದಿಗಿರಿಸಿ, ಸಂಪೂರ್ಣ ಮಾನವೀಯ ದೃಷ್ಟಿಕೋನದಿಂದ ಕಟ್ಟಿಕೊಟ್ಟಿರುವ ಮೇರುಕೃತಿ. ಇಲ್ಲಿ ಪಾಂಡವರು, ಕೌರವರು, ಕೃಷ್ಣ, ದ್ರೌಪದಿ ಎಲ್ಲರೂ ದೈವಾಂಶ ಸಂಭೂತರಲ್ಲ, ಬದಲಾಗಿ ತಮ್ಮೆಲ್ಲಾ ರಾಗ, ದ್ವೇಷ, ಆಸೆ, ನಿರಾಸೆಗಳೊಂದಿಗೆ ಬದುಕುವ ಸಾಮಾನ್ಯ ಮನುಷ್ಯರು. ಪಾತ್ರಗಳ ಮನಸ್ಸಿನ ಆಳಕ್ಕಿಳಿದು ಅವರ ಮಾನಸಿಕ ತುಮುಲಗಳನ್ನು ಅನಾವರಣಗೊಳಿಸುವ ರೀತಿ ಓದುಗರನ್ನು

ಜಿಜ್ಞಾಸೆಯನ್ನು ಪಾತ್ರಗಳ ಮೂಲಕ ಕಟ್ಟಿಕೊಡುವ ಭೈರಪ್ಪನವರ ಜಾಣ್ಮೆ ಇಲ್ಲಿ ಎದ್ದು ಕಾಣುತ್ತದೆ. ವಿಧವಾ ವಿವಾಹ, ಪ್ರೀತಿ, ತ್ಯಾಗ ಮತ್ತು ಕರ್ತವ್ಯಗಳ ಕುರಿತಾದ ಚರ್ಚೆ ಇಂದಿಗೂ ಪ್ರಸ್ತುತವೆನಿಸುತ್ತದೆ.

**ಗೃಹಭಂಗ (2002):** 'ನಾಯಿ ನೆರಳು' ಕಾದಂಬರಿಯನ್ನು ಸಿನಿಮಾ ಮಾಡಿದ್ದ ಗಿರೀಶ್ ಕಾಸರವಳ್ಳಿ ಅವರು ನಂತರ ಎಸ್ ಎಲ್ ಭೈರಪ್ಪ ಅವರ 'ಗೃಹಭಂಗ' ಕಾದಂಬರಿಗೆ ಧಾರಾವಾಹಿ ರೂಪ ನೀಡಿದ್ದರು.

**ಓದುಗರ ಮನಸ್ಸಿನಲ್ಲಿ ಅಳಿಸಲಾಗದ ಹೆಸರು**

**ತಬ್ಬಲಿಯು ನೀನಾದೆ ಮಗನೆ**

ಗಿರೀಶ್ ಕಾರ್ನಾಡ್ ಮತ್ತು ಬಿ. ವಿ. ಕಾರಂತ ಜೋಡಿಯು ಎಸ್ ಎಲ್ ಭೈರಪ್ಪ ಅವರು ಬರೆದಿದ್ದ 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯನ್ನು ಅದೇ ಹೆಸರಿನಲ್ಲಿ ಸಿನಿಮಾ ಮಾಡಿದ್ದರು. 1977ರಲ್ಲಿ ತೆರೆಕಂಡಿದ್ದ ಈ ಸಿನಿಮಾವು 'ಗೋಧೂಳಿ' ಹೆಸರಿನಲ್ಲಿ ಹಿಂದಿಯಲ್ಲೂ ರಿಲೀಸ್ ಆಗಿತ್ತು. ನಾಸಿರುದ್ದೀನ್ ಶಾ, ಓಂ ಪುರಿ, ಟಿ ಎಸ್ ನಾಗಾಭರಣ ಮುಂತಾದವರು ನಟಿಸಿದ್ದರು.

**ಜಾತಿ ವ್ಯವಸ್ಥೆಯ ಸಂಕೀರ್ಣತೆ**

ಭಾರತೀಯ ಸಮಾಜದ ಅತಿ ದೊಡ್ಡ ಪಿಡುಗುಗಳಲ್ಲಿ ಒಂದಾದ ಜಾತಿ ವ್ಯವಸ್ಥೆಯ ಆಳ-ಅಗಲಗಳನ್ನು 'ದಾಟು' ಕಾದಂಬರಿ ಶೋಧಿಸುತ್ತದೆ. ಬ್ರಾಹ್ಮಣ ಯುವತಿ ಮತ್ತು ಕೆಳಜಾತಿಯ ಯುವಕನ ನಡುವಿನ ಪ್ರೇಮದ ಮೂಲಕ ಸಮಾಜದಲ್ಲಿ ಬೇರೂರಿರುವ ಜಾತಿ ಪದ್ಧತಿಯ ಕ್ರೌರ್ಯ ಮತ್ತು ಅದರ ಮಾನಸಿಕ ಪರಿಣಾಮಗಳನ್ನು ಈ ಕೃತಿ ಸೂಕ್ಷ್ಮವಾಗಿ ತೆರೆದಿಡುತ್ತದೆ. ಜಾತಿಯನ್ನು 'ದಾಟಲು' ಪ್ರಯತ್ನಿಸುವ ಪಾತ್ರಗಳು ಎದುರಿಸುವ ಸವಾಲುಗಳು, ಸಾಮಾಜಿಕ ಬಹಿಷ್ಕಾರ ಮತ್ತು ಆಂತರಿಕ ಸಂಘರ್ಷಗಳನ್ನು ಓದುಗರ ಮುಂದಿಡುವಲ್ಲಿ ಭೈರಪ್ಪನವರು ಯಶಸ್ವಿಯಾಗಿದ್ದಾರೆ. ಇದು ಕೇವಲ ಒಂದು ಪ್ರೇಮಕಥೆಯಲ್ಲ, ಬದಲಾಗಿ ಸಾಮಾಜಿಕ ವ್ಯವಸ್ಥೆಯ ಒಂದು ಕಠೋರ ವಿಮರ್ಶೆಯಾಗಿದೆ.

**ಮತದಾನ**

1965ರಲ್ಲಿ ಎಸ್ ಎಲ್ ಭೈರಪ್ಪ ಬರೆದ ಮತದಾನ ಕಾದಂಬರಿಯನ್ನು ಟಿ. ಎನ್. ಸೀತಾರಾಮ್ ಅವರು ಸಿನಿಮಾ ಮಾಡಿದ್ದರು. ಅನಂತ್ ನಾಗ್, ದೇವರಾಜ್, ಅವಿನಾಶ್, ತಾರಾ, ಸುಂದರ ರಾಜ್, ಪ್ರಕಾಶ್ ಬೆಳವಾಡಿ ಮುಂತಾದವರು ನಟಿಸಿದ್ದ 'ಮತದಾನ' ಸಿನಿಮಾಕ್ಕೆ ರಾಷ್ಟ್ರ ಪ್ರಶಸ್ತಿ ಲಭಿಸಿತ್ತು.

# 55 ಲಕ್ಷ ಶಾಲಾ ಮಕ್ಕಳಿಗೆ ದಸರಾ ಉಡುಗೊರೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯದ ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 1 ರಿಂದ 10ನೇ ತರಗತಿವರೆಗೆ ಓದುತ್ತಿರುವ ಸುಮಾರು 55 ಲಕ್ಷ ಮಕ್ಕಳಿಗೆ 'ರಾಗಿ ಹೆಲ್ತ್ ಮಿಕ್ಸ್ ಪುಡಿ' ಮಿಶ್ರಿತ ಬಿಸಿ ಹಾಲು ನೀಡುವ ಕಾರ್ಯಕ್ರಮವನ್ನು ವಾರದಲ್ಲಿ ಐದು ದಿನಗಳಿಗೆ ವಿಸ್ತರಿಸಿ ಸರಕಾರ ಇದೀಗ ಅಧಿಕೃತ ಆದೇಶ ಹೊರಡಿಸಿದೆ.



**ವಾರದಲ್ಲಿ 5 ದಿನ ರಾಗಿ ಮಾಲ್ಟ**

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದಂತೆ ಶಾಲಾ ಮಕ್ಕಳಿಗೆ ವಾರದಲ್ಲಿ ಐದು ದಿನ ಕ್ಷೀರಭಾಗ್ಯ ಹಾಲಿನ ಜತೆ ಐದು ದಿನ ರಾಗಿ ಹೆಲ್ತ್ ಮಿಕ್ಸ್ ಪುಡಿ ನೀಡಲು ಇತ್ತೀಚಿನ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿತ್ತು.

ಅದರಂತೆ ಈಗ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಶಾಲಾ ಶಿಕ್ಷಣ ಆಯುಕ್ತರಿಗೆ ಅನುಮತಿ ನೀಡಿ ಆದೇಶಿಸಿದೆ. ಸರಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿನ ಮಕ್ಕಳಿಗೆ ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆ ಮುದ್ದೇನಹಳ್ಳಿಯ ಶ್ರೀಸತ್ಯ ಸಾಯಿ ಅನ್ನಪೂರ್ಣ ಟ್ರಸ್ಟ್‌ನಿಂದ ವಾರದಲ್ಲಿ ಮೂರು ದಿನ ಕ್ಷೀರಭಾಗ್ಯ ಯೋಜನೆಯ ಬಿಸಿ ಹಾಲಿನ ಜತೆಗೆ ಸಾಯಿ ಶ್ಯೂರ್ ರಾಗಿ ಹೆಲ್ತ್ ಮಿಕ್ಸ್ ಪುಡಿಯನ್ನು ವಿತರಿಸಲಾಗುತ್ತಿದೆ. ಇದನ್ನು ಇನ್ನು ಮುಂದೆ ವಾರದಲ್ಲಿ ಐದು ದಿನಕ್ಕೆ ವಿಸ್ತರಿಸಲು ಆ ಸಂಸ್ಥೆಯೊಂದಿಗೆ ಸೂಕ್ತ ಒಪ್ಪಂದ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

ಯೋಜನೆಗೆ ತಗಲುವ 100 ಕೋಟಿ ರೂ.ಗಳಲ್ಲಿ ಶೇ.25ರಷ್ಟನ್ನು ರಾಜ್ಯ ಸರಕಾರದಿಂದ ಭರಿಸಲು ಅಗತ್ಯ ಕ್ರಮ ವಹಿಸಬೇಕು ಎಂದು ಸೂಚಿಸಲಾಗಿದೆ.

ಯೋಜನೆ ಅನುಷ್ಠಾನ ಸಂಬಂಧ ರಾಗಿ ಹೆಲ್ತ್ ಮಿಕ್ಸ್ ಪುಡಿಯ ಸಾಗಾಣಿಕೆ ಮಾಡುವ ವೆಚ್ಚವನ್ನು ಜಿಲ್ಲಾ ಹಂತದಲ್ಲಿ ಜಿಪಂ ಸಿಇಒಗಳ ಮೂಲಕ ಕರ್ನಾಟಕ ಹಾಲು ಮಹಾಮಂಡಳಿಗೆ ಪಾವತಿಸಲು ಆದೇಶಿಸಲಾಗಿದೆ. ಪ್ರತಿ ಕೆಜಿ ರಾಗಿ ಹೆಲ್ತ್ ಮಿಕ್ಸ್ ಪುಡಿಗೆ 182.50 ರೂ. ದರವನ್ನು ನಿಗದಿಪಡಿಸಿದೆ.

# ಮಹೇಶ್ ಶೆಟ್ಟಿ ತಿಮರೋಡಿ ನಾಪತ್ತೆ

## ಗಡಿಪಾರು ನೋಟಿಸ್ ನೀಡಲು ಪೊಲೀಸರ ಹುಡುಕಾಟ

• **ಉದಯವಾಹಿನಿ, ಬೆಳ್ತಂಗಡಿ (ದಕ್ಷಿಣ ಕನ್ನಡ)**



ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆ ಅಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿಯನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ಗಡಿಪಾರು ಮಾಡಿರುವ ಕುರಿತು ಪುತ್ತೂರು ಎಸಿ ಸ್ಟೆಲ್ಲಾ ವರ್ಗಿಸ್ ಹೊರಡಿಸಿರುವ ಗಡಿಪಾರು ಆದೇಶದ ನೋಟಿಸ್ ನೀಡಲು ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಗಡಿಪಾರು ಆದೇಶದ ಮಾಹಿತಿ ಸಿಕ್ಕ ತಕ್ಷಣ ಮಹೇಶ್ ಶೆಟ್ಟಿ ಮನೆಯಿಂದ ನಾಪತ್ತೆಯಾಗಿದ್ದು, ಬೆಂಗಳೂರು ಅಥವಾ ಚಿಕ್ಕಮಗಳೂರು ಭಾಗದಲ್ಲಿತ ಲೆಮರೆಸಿಕೊಂಡಿರುವ ಸಾಧ್ಯತೆ ಇರುವ ಬಗ್ಗೆ ಪೊಲೀಸರಿಗೆ ಮಾಹಿತಿ ಲಭಿಸಿದೆ. ಈ ಹಿನ್ನೆಲೆಯಲ್ಲಿ ಪೊಲೀಸರ ತಂಡ ನೋಟಿಸ್ ನೀಡಲು ಹುಡುಕಾಟಕ್ಕೆ ಮುಂದಾಗಿದೆ. ಸೆ.25ರಂದು ಮಹೇಶ್ ಶೆಟ್ಟಿ ತಿಮರೋಡಿಗೆ ಶಸ್ತ್ರಾಸ್ತ್ರ ಕಾಯಿದೆ ಕೇಸ್‌ನಲ್ಲಿ ಬೆಳ್ತಂಗಡಿ ಠಾಣೆಗೆ ಹಾಜರಾಗಲು ಈಗಾಗಲೇ ನೋಟಿಸ್ ನೀಡಲಾಗಿದೆ. ಮಹೇಶ್ ಶೆಟ್ಟಿ ತಿಮರೋಡಿ ಮನೆಯಲ್ಲಿ ಆಗಸ್ಟ್ 26ರಂದು ಎಸ್‌ಐಟಿ ಶೋಧದ ವೇಳೆ ಎರಡು ತಲವಾರು ಹಾಗೂ ಒಂದು ಬಂದೂಕು ಪತ್ತೆಯಾದ ಹಿನ್ನೆಲೆಯಲ್ಲಿ ಸೆಪ್ಟೆಂಬರ್ 16ರಂದು ಬೆಳ್ತಂಗಡಿ ಠಾಣೆಯಲ್ಲಿ ದೂರು ದಾಖಲಾಗಿತ್ತು.

# ಮಹಿಷಾ ದಸರಾ ಆಚರಣೆ

## ಚಾಮುಂಡಿ ಬೆಟ್ಟದಲ್ಲಿ ನಿಷೇಧಾಜ್ಞೆ

• **ಉದಯವಾಹಿನಿ, ಮೈಸೂರು**

ನಗರದಲ್ಲಿಂದು ಮಹಿಷಾ ದಸರಾ ಆಚರಣೆ ಹಿನ್ನೆಲೆಯಲ್ಲಿ ಚಾಮುಂಡಿ ಬೆಟ್ಟದ ಮಹಿಷಾಸುರ ಪ್ರತಿಮೆಯ ಬಳಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಬೆಳಿಗ್ಗೆ 6 ಗಂಟೆವರೆಗೆ ಚಾಮುಂಡಿ ಬೆಟ್ಟದಲ್ಲಿರುವ ಮಹಿಷಾಸುರ ಪ್ರತಿಮೆಯ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದ ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಟ್ಕರ್ ಆದೇಶ ಹೊರಡಿಸಿದ್ದಾರೆ. ಪುರಭವನದ ಬಳಿ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬೆಟ್ಟದ ಮೇಲಿರುವ ಮಹಿಷಾಸುರ ಪ್ರತಿಮೆಗೂ ಸಹ ಮಾಲಾರ್ಪಣೆ ಮಾಡಲಾಗುವುದು ಎಂದು ತಿಳಿದುಬಂದ ಹಿನ್ನೆಲೆಯಲ್ಲಿ ಕೆಲ ಸಂಘಟನೆಗಳು ವಿರೋಧವನ್ನು ವ್ಯಕ್ತಪಡಿಸುವ ಸಾಧ್ಯತೆಯಿದ್ದು, ಮಹಿಷಾ ದಸರಾ ಆಚರಣೆ ವಿಚಾರದಲ್ಲಿ ಪರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

# ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ: ವಿಚಾರಣೆ ಮತ್ತೆ ಮುಂದಕ್ಕೆ

## ● ಜಾತಿವಾರು ಅಂಕಿ ಅಂಶಗಳನ್ನು ಸಂಗ್ರಹಿಸದೇ ಯೋಜನೆಗಳನ್ನು ರೂಪಿಸಲು ಸಾಧ್ಯವಿಲ್ಲ

• **ಉದಯವಾಹಿನಿ, ಬೆಂಗಳೂರು**

ಹಿಂದುಳಿದ ವರ್ಗಗಳ ಶಾಶ್ವತ ಆಯೋಗದಿಂದ ನಡೆಸಲಾಗುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಪ್ರಶ್ನಿಸಲಾದ ಅರ್ಜಿಗಳ ವಿಚಾರಣೆ ಬುಧವಾರವೂ ಅಪೂರ್ಣಗೊಂಡಿದ್ದು, ಪುನಃ ಮುಂದುವರಿಯಲಿದೆ.

ಸರ್ಕಾರದ ನಡೆಯನ್ನು ಪ್ರಶ್ನಿಸಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್, ಅಖಿಲ ಭಾರತ ವೀರಶೈವ ಮಹಾಸಭೆಯ ಬಿ.ಆರ್.ಉದಯಶಂಕರ್ ಸೇರಿದಂತೆ 9 ಜನರು, ರಾಜ್ಯ ಒಕ್ಕಲಿಗರ ಸಂಘ ಮತ್ತು ಕೆ.ಎನ್.ಸುಬ್ಬಾರೆಡ್ಡಿ ಸೇರಿದಂತೆ ನಾಲ್ವರು ಸಲ್ಲಿಸಿರುವ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮುಂದುವರಿಸಿತು.

ರಾಜ್ಯ ಸರ್ಕಾರದ ಪರ ವಾದ ಮುಂದುವರಿಸಿದ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, 'ಅರ್ಜಿದಾರರು, ಸಂವಿಧಾನದ 342 ಎ(3)ನೇ ವಿಧಿಯನ್ನು ಪ್ರಶ್ನಿಸಿಲ್ಲ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಕಾಯ್ದೆ–1995ರ ಕಲಂ 9 ಮತ್ತು 11ಕ್ಕೆ ತಡೆ ನೀಡುವಂತೆಯೂ ಕೋರಿಲ್ಲ. ಸಮೀಕ್ಷೆಯಲ್ಲಿ ಯಾವ ತಪ್ಪಿದೆ ಎಂಬುದನ್ನು ಸಹಾ ಕಾಣಿಸಿಲ್ಲ. ಹೀಗಾಗಿ, ಸಮೀಕ್ಷೆಗೆ ಮಧ್ಯಂತರ ತಡೆ ನೀಡಬಾರದು' ಎಂದು ಮನವಿ ಮಾಡಿದರು. 'ಕೇಂದ್ರ ಸರ್ಕಾರ ಜಾತಿ ಗಣತಿ ನಡೆಸಲು ಐದಾರು ವರ್ಷಗಳೇ ಬೇಕಾಗಬಹುದು. ಅಲ್ಲಿಯವರೆಗೆ ರಾಜ್ಯಗಳು ಜಾತಿಗಳ ಸಮೀಕ್ಷೆ



**ಸಮೀಕ್ಷೆಯಲ್ಲಿ ಯಾವ ತಪ್ಪಿದೆ**

**ನ್ಯಾಯಾಂಗದ ಪರಾಮರ್ಶೆ ವ್ಯಾಪ್ತಿಗೆ**

'ಜನಗಣತಿಗೂ, ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಗೂ ವ್ಯತ್ಯಾಸವಿದೆ. ಜನ ಗಣತಿಗಿಂತ ಸಮೀಕ್ಷೆಯಲ್ಲಿ ವಿವರಗಳನ್ನು ಸಾದ್ಯಂತವಾಗಿ ಪಡೆಯಲಾಗುತ್ತದೆ. ಸರ್ವೆಯಲ್ಲಿ ಸ್ವಯಂ ಪ್ರೇರಣೆಯಿಂದ ಉತ್ತರ ನೀಡಬಹುದು. ಇಲ್ಲಿ ಸಂಗ್ರಹಿಸುವ ದತ್ತಾಂಶ ನ್ಯಾಯಾಂಗ ಪರಾಮರ್ಶೆಗೆ ಒಳಪಡಬಹುದು. ಆದರೆ, ಜನಗಣತಿಯ ದತ್ತಾಂಶ ನ್ಯಾಯಾಂಗದ ಪರಾಮರ್ಶೆ ವ್ಯಾಪ್ತಿಗೆ ಬರುವುದಿಲ್ಲ. ಜನಗಣತಿಯಲ್ಲಿ ವಿವರ ನೀಡುವುದು ಕಡ್ಡಾಯ' ಎಂದರು.

**ನೀಡುವ ಉತ್ತರವನ್ನಷ್ಟೇ ಬರೆದುಕೊಳ್ಳಲು ಸೂಚನೆ**

'ವ್ಯಕ್ತಿಯ ಗುರುತಿಗಾಗಿ ಮಾತ್ರವೇ ಆಧಾರ್ ನಂಬರ್ ಪಡೆಯಲಾಗುತ್ತಿದೆ. ಬೇರೆ ರಾಜ್ಯದವರನ್ನು ಪರಿಗಣಿಸದೇ ಇರಲು ಈ ಆಧಾರ್ ಸಂಖ್ಯೆ ಸಹಾಯವಾಗುತ್ತದೆ. ಅರವತ್ತೂ ಪ್ರಶ್ನೆಗಳಿಗೆ ಉತ್ತರಿಸುವಂತೆ ಯಾರನ್ನೂ ಒತ್ತಾಯ ಮಾಡುವುದಿಲ್ಲ. ಮಾಹಿತಿ ನಿರಾಕರಿಸಲಾಗಿದೆ ಎಂಬುದನ್ನು ನಮೂದಿಸಲು ಕಾಲಂ 10ರಲ್ಲಿ ಅವಕಾಶ ಮಾಡಿಕೊಡಲಾಗಿದೆ. ನೀಡುವ ಉತ್ತರವನ್ನಷ್ಟೇ ಬರೆದುಕೊಳ್ಳಲು ಸೂಚಿಸಲಾಗಿದೆ' ಎಂದು ಸ್ಪಷ್ಟಪಡಿಸಿದರು.

ನಡೆಸಬಾರದು ಎಂದೇನಿಲ್ಲ. ಹಿಂದುಳಿದ ಜನರಿಗೆ ಸವಲತ್ತು ನೀಡಲು ಈ ಸಮೀಕ್ಷೆ ನಡೆಸಲಾಗುತ್ತಿದೆ. ಇದಕ್ಕಾಗಿ ಮಾಹಿತಿಗಳನ್ನು ಸಂಗ್ರಹಿಸುವುದು ಹಕ್ಕಿನ ಉಲ್ಲಂಘನೆಯಾಗುವುದಿಲ್ಲ. ಜಾತಿವಾರು ಅಂಕಿ ಅಂಶಗಳನ್ನು ಸಂಗ್ರಹಿಸದೇ ಯೋಜನೆಗಳನ್ನು ರೂಪಿಸಲು ಸಾಧ್ಯವಿಲ್ಲ. ಅಂಕಿ ಅಂಶಗಳನ್ನು ಸಂಗ್ರಹಿಸುವ ಮುನ್ನವೇ ತಪ್ಪು ಹುಡುಕಲಾಗದು. ಸಮೀಕ್ಷೆ ನಡೆದ ಬಳಿಕ ಅದರಲ್ಲಿ ಲೋಪವಿದ್ದರೆ ಪ್ರಶ್ನಿಸಲಿ. ಆದರೆ, ಸಮೀಕ್ಷೆಯ ಆರಂಭಕ್ಕೂ ಮೊದಲೇ ಪ್ರಶ್ನಿಸಲಾಗಿದೆ' ಎಂದು ಪ್ರತಿಪಾದಿಸಿದರು.

ಹಿಂದುಳಿದ ವರ್ಗಗಳ ಆಯೋಗದ ಪರ ಪದಾಂಕಿತ ಹಿರಿಯ ವಕೀಲ ರವಿವರ್ಮ ಕುಮಾರ್, 'ಸಮೀಕ್ಷೆಯ ಅನುಕೂಲಕ್ಕಾಗಿ ಮಾತ್ರವೇ 1,561 ಜಾತಿಗಳನ್ನು ಗುರುತಿಸಲಾಗಿದೆ. ನಮ್ಮ ಜಾತಿ ಸೇರಿಸಿಲ್ಲವೆಂಬ ಕೆಲವರ ಮನವಿ ಮೇರೆಗೆ ಹೊಸ ಜಾತಿಗಳನ್ನು ಸೇರ್ಪಡೆ ಮಾಡಲಾಗಿದೆ. ಸಮಾಲೋಚನೆ ನಡೆಸಿ ಈ ಮನವಿಗಳನ್ನು ಪರಿಗಣಿಸಲಾಗಿದೆ. ಸಮೀಕ್ಷೆಯಲ್ಲಿ ಜನರು ಹೇಳುವ ಜಾತಿಗಳನ್ನು ನಮೂದಿಸಿಕೊಳ್ಳುತ್ತೇವೆ' ಎಂದರು.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹11,537/Gram24ct ₹10,575/Gram22ct | ಬೆಳ್ಳಿ: ₹142.60/Gram

## ಸರ್ಕಾರಿ ನೌಕರರು, ಕುಟುಂಬ ಸದಸ್ಯರಿಗೆ ಆರೋಗ್ಯ ಸಂಜೀವಿನಿ ಯೋಜನೆ ಜಾರಿ

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ನೌಕರರಿಗೆ ಗುಡ್‌ನ್ಯೂಸ್ ಸಿಕ್ಕಿದೆ. ಸರ್ಕಾರಿ ನೌಕರರು ಹಾಗೂ ಕುಟುಂಬ ಸದಸ್ಯರಿಗೆ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೊಳಿಸಲಾಗಿದೆ. ಅಕ್ಟೋಬರ್ 1 ರಿಂದ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ಬರಲಿದೆ. ಬಹಳ ವರ್ಷಗಳಿಂದ ಈ ಯೋಜನೆ ಮರುಜಾರಿಗೆ ಒತ್ತಾಯ ಕೇಳಿಬಂದಿತ್ತು. ಈ ಯೋಜನೆಯಡಿ ನಗದು ರಹಿತ ವೈದ್ಯಕೀಯ ಚಿಕಿತ್ಸೆ ಸಿಗಲಿದೆ. ನೋಂದಾಯಿತ ಖಾಸಗಿ ಆಸ್ಪತ್ರೆಯಲ್ಲಿಯೂ ನಗದು ರಹಿತ ಉಚಿತ ಚಿಕಿತ್ಸೆ ಸಿಗಲಿದೆ.

## ಬಿಕ್ಲು ಶಿವ ಕೊಲೆ ಕೇಸ್:ಮಾಜಿ ಸಚಿವ ಬೈರತಿ ಬಸವರಾಜ್‌ಗೆ ಬಂಧನ ಭೀತಿ!

• ಉದಯವಾಹಿನಿ, ಬೆಂಗಳೂರು

ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಮಾಜಿ ಸಚಿವ, ಹಾಲಿ ಶಾಸಕ ಬೈರತಿ ಬಸವರಾಜ್‌ಗೆ ಬಂಧನ ಭೀತಿ ಎದುರಾಗಿದೆ. ಬೈರತಿ ಬಸವರಾಜ್ ಅವರ ಬಂಧನ ಅಗತ್ಯವಿದೆ. ಈ ಹಿಂದಿನ ಆದೇಶ ತೆರವು ಮಾಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಕೆಯಾಗಿದೆ. ವಿಚಾರಣೆ ವೇಳೆ ಬೈರತಿ ಬಸವರಾಜ್ ಸುಳ್ಳು ಮಾಹಿತಿ ನೀಡಿದ್ದಾರೆ. ಈ ಪ್ರಕರಣದಲ್ಲಿ ಹಲವು ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ. ಈಗ ಬೈರತಿ ಬಸವರಾಜ್ ಬಂಧಿಸಿ ವಿಚಾರಣೆಗೊಳಪಡಿಸಬೇಕಿದೆ ಎಂದು ಪ್ರಾಸಿಕ್ಯೂಷನ್ ಪರ ಎಸ್‌ಪಿಪಿ ಬಿ.ಎನ್.ಜಗದೀಶ್‌ವಾದ ಮಂಡಿಸಿದ್ದಾರೆ. ಸಿಐಡಿ ಪೊಲೀಸರ ಅರ್ಜಿಗೆ ಬೈರತಿ ಬಸವರಾಜ್ ವಕೀಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪೊಲೀಸರು ಕಳೆದ ಒಂದು ತಿಂಗಳಿನಿಂದ ವಿಚಾರಣೆಗೇ ಕರೆದಿಲ್ಲ. ಈ ಹಿಂದೆ ಪೊಲೀಸರು ಕರೆದಾಗಲೆಲ್ಲಾ ವಿಚಾರಣೆಗೆ ಸಹಕರಿಸಿದ್ದಾರೆ. ಈಗ ಬಂಧನದ ಅಗತ್ಯವಿದೆ ಎಂದು ಹೇಳುತ್ತಿದ್ದಾರೆ ಎಂದು ಅರ್ಜಿಗೆ ಆಕ್ಷೇಪಣೆ ಸಲ್ಲಿಸುವುದಾಗಿ ಹಿರಿಯ ವಕೀಲ ಸಂದೇಶ್ ಚೌಟ ವಾದಿಸಿದ್ದಾರೆ. ರಾಜಕೀಯ ದೃಷ್ಟಿಯಿಂದ ಕಿರುಕುಳ ನೀಡಬಾರದು. ಎಷ್ಟು ದಿನಗಳ ಕಸ್ಟಡಿ ಬೇಕೆಂದು ಕೋರ್ಟ್‌ಗೆ ತಿಳಿಸಿ ಎಸ್‌ಪಿಪಿಗೆ ನ್ಯಾ. ಎಂ.ಐ.ಅರುಣ್ ಅವರಿದ್ದ ಪೀಠ ಕೇಳಿದೆ. ಅ.8 ರೊಳಗೆ ಆಕ್ಷೇಪಣೆ ಸಲ್ಲಿಸಲು ಅರ್ಜಿದಾರರಿಗೆ ಹೈಕೋರ್ಟ್ ಸೂಚನೆ ನೀಡಿದೆ.

## ಕಳ್ಳತನ ಪ್ರಕರಣದಲ್ಲಿ ಇಬ್ಬರ ಬಂಧನ; 82.5 ಗ್ರಾಂ ಚಿನ್ನಾಭರಣ ವಶ

• ಉದಯವಾಹಿನಿ, ಬೆಂಗಳೂರು

ಮನೆಗಳಲ್ಲಿ ಸರಣಿ ಕಳ್ಳತನ ಮಾಡಿದ ಪ್ರಕರಣದಲ್ಲಿ ಇಬ್ಬರನ್ನು ಬಂಧಿಸಲಾಗಿದ್ದು, ಅವರಿಂದ 8.25 ಲಕ್ಷ ರೂ. ಮೌಲ್ಯದ 82.5 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾಡುಗೋಡಿಯ ಪಟಾಲಮ್ಮ ಲೇಔಟ್‌ನಲ್ಲಿರುವ ವ್ಯಕ್ತಿಯೊಬ್ಬರು ಆ.24 ರಂದು ತಮ್ಮ ಮನೆಯ ಬೀಗ ಮುರಿದು 27 ಗ್ರಾಂ ತೂಕದ ಚಿನ್ನಾಭರಣ ಕದ್ದಿದ್ದಾರೆ ಎಂದು ದೂರು ನೀಡಿದ ನಂತರ ಈ ಪ್ರಕರಣ ಬೆಳಕಿಗೆ ಬಂದಿದೆ ಎಂದು ಅವರು ಹೇಳಿದ್ದಾರೆ.

ಪ್ರಕರಣಗಳಲ್ಲಿ ಬಂಧಿಸಲಾದ ಆರೋಪಿಯ ಗುರುತನ್ನು ಪೊಲೀಸರು ಬಹಿರಂಗಪಡಿಸಿಲ್ಲ. ತನಿಖೆಯ ಸಮಯದಲ್ಲಿ, ಸೆ. 16 ರಂದು ಸೊರಹುಣಸೆ ಗ್ರಾಮದಲ್ಲಿ ಒಬ್ಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದರು. ವಿಚಾರಣೆ ವೇಳೆ ಆರೋಪಿ ತನ್ನ ಕೃತ್ಯವನ್ನು ಒಪ್ಪಿಕೊಂಡಿದ್ದು, ಈ ಹಿಂದೆ ಅದೇ ಪ್ರದೇಶದಲ್ಲಿ ಒಬ್ಬ ಸಹಚರನೊಂದಿಗೆ ಮನೆ ಕಳ್ಳತನ ಮಾಡಿರುವುದಾಗಿ ತಿಳಿಸಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ತರುವಾಯ, ವರ್ತೂರಿನ ಆರೋಪಿಯ ನಿವಾಸದ ಬಳಿ ಅದೇ ದಿನ ಆತನ ಸಹಚರನನ್ನು ಬಂಧಿಸಲಾಯಿತು. ಈ ಪ್ರಕರಣ ಮತ್ತು ಹಿಂದಿನ ಕಳ್ಳತನ ಪ್ರಕರಣಗಳಲ್ಲಿ ಕದ್ದ ಆಭರಣಗಳನ್ನು ತಮ್ಮ ಸ್ನೇಹಿತರೊಬ್ಬರಿಗೆ ನೀಡಿರುವುದಾಗಿ ಮತ್ತಷ್ಟು ವಿಷಯ ಬಹಿರಂಗಪಡಿಸಿದರು. ಇದರ ಆಧಾರದ ಮೇಲೆ, ಸೆಪ್ಟೆಂಬರ್ 17 ರಂದು, ಪೊಲೀಸರು ಸ್ನೇಹಿತನ ಬಳಿಯಿಂದ ಒಟ್ಟು 82.5 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಂಡಿದ್ದು, ಇದರ ಮೌಲ್ಯ 8.25 ಲಕ್ಷ ರೂ. ಆಗಿದೆ. ಈ ಆರೋಪಿಗಳ ಬಂಧನದೊಂದಿಗೆ, ಒಂಬತ್ತು ಕಳ್ಳತನ ಪ್ರಕರಣಗಳು ಬಗೆಹರಿದಿವೆ ಎಂದು ಅವರು ಹೇಳಿದರು. ಇಂತಹ ಮತ್ತೊಂದು ಪ್ರಕರಣದಲ್ಲಿ, ಆಗಸ್ಟ್ 29 ರಂದು ಇಲ್ಲಿನ ಕೊಡಿಗೇಹಳ್ಳಿ ಪ್ರದೇಶದಲ್ಲಿ ವರದಿಯಾದ ಮನೆ ಕಳ್ಳತನಕ್ಕೆ ಸಂಬಂಧಿಸಿದಂತೆ ಒಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಂಧಿತ ಆರೋಪಿಯಿಂದ 5.80 ಲಕ್ಷ ರೂ. ಮೌಲ್ಯದ 58 ಗ್ರಾಂ ಚಿನ್ನಾಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು.

## ಬಿಜೆಪಿ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಹಗರಣಗಳ ತನಿಖೆಗೆ ರಚಿಸಿದ್ದ ಆಯೋಗ ದಿಢೀರ್ ರದ್ದು

• ಉದಯವಾಹಿನಿ, ಬೆಂಗಳೂರು

ಹಿಂದಿನ ಬಿಜೆಪಿ ಸರ್ಕಾರದ ಅವಧಿಯ ಹಲವು ಹಗರಣಗಳ ತನಿಖೆಗೆಂದು ರಚಿಸಿದ್ದ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಏಕಸದಸ್ಯ ಆಯೋಗವನ್ನು ಸರ್ಕಾರ ದಿಢೀರನೆ ರದ್ದುಗೊಳಿಸಿದೆ. ಸೆ.30 ರ ವರೆಗೆ ತಮ್ಮ ಅಧಿಕಾರ ಅವಧಿ ವಿಸ್ತರಿಸುವಂತೆ ಆಯೋಗ ಮನವಿ ಮಾಡಿತ್ತು. ಅದನ್ನು ಸರ್ಕಾರ ಪರಿಗಣಿಸಿಲ್ಲ ಎನ್ನಲಾಗಿದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯ 40% ಕಮಿಷನ್ ಆರೋಪ ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರದ ತನಿಖೆ ಜವಾಬ್ದಾರಿಯನ್ನು ಈ ಆಯೋಗಕ್ಕೆ ವಹಿಸಲಾಗಿತ್ತು.

ಆಯೋಗಕ್ಕೆ ನೀಡಲಾಗಿದ್ದ ವಾಹನ ಹಾಗೂ ಸಿಬ್ಬಂದಿಯನ್ನು ಸರ್ಕಾರ ನಿನ್ನೆ ಸಂಜೆಯಿಂದ ವಾಪಸ್ ಪಡೆದಿದೆ. ಅಧ್ಯಕ್ಷರ ಸೂಚನೆ ಮೇರೆಗೆ ಆಯೋಗದ ಕಾರ್ಯಚಟುವಟಿಕೆ ಅಧಿಕೃತವಾಗಿ ಮುಕ್ತಾಯಗೊಳಿಸಲಾಗಿದೆ ಎಂದು ಪ್ರಕಟಣೆ ಹೊರಡಿಸಲಾಗಿದೆ ಎಂದು ಕೇಳಿಬಂದಿದೆ. ಬೆಂಗಳೂರು ಅಕ್ರಮ ಕಾಮಗಾರಿ ತನಿಖೆ ನಡೆಸಿದ ಆಯೋಗ ಆ.30 ರಂದು ಸರ್ಕಾರಕ್ಕೆ 8,900 ಪುಟಗಳ ಬೃಹತ್ ತನಿಖಾ ವರದಿಯನ್ನು ಸಲ್ಲಿಸಿತ್ತು. 761 ಕಾಮಗಾರಿಗಳನ್ನ ಪರಿಶೀಲಿಸಿ ಹಲವು ನ್ಯೂನತೆಗಳನ್ನು ಪತ್ತೆಹಚ್ಚಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕ್ಕೆ ಶಿಫಾರಸು ಮಾಡಿತ್ತು. ಏಕ ಸದಸ್ಯ ಆಯೋಗದ ಕೆಲಸ ಮುಗಿದಿದ್ದರೂ ಕೆಲವು ಆಡಳಿತಾತ್ಮಕ ಕಾರ್ಯ ಹಾಗೂ ದಾಖಲೆ ನಿರ್ವಹಣೆಗಾಗಿ ಸೆ.30ರವರೆಗೆ ಅವಧಿ ವಿಸ್ತರಿಸುವಂತೆ ಸರ್ಕಾರಕ್ಕೆ ಮನವಿ ಮಾಡಿತ್ತು ಎನ್ನಲಾಗಿದೆ.

ಆದರೆ, ಸರ್ಕಾರ ನಿನ್ನೆ ಏಕಾಏಕಿ ಆಯೋಗಕ್ಕೆ ನೀಡಿದ್ದ ಎಲ್ಲಾ ಸವಲತ್ತು ವಾಪಸ್ ಪಡೆದಿದೆ ಎನ್ನಲಾಗುತ್ತಿದೆ.

## GST ಕಡಿತದ ಮತ್ತೆ ಬಸ್ ದರ ಏರಿಕೆ ಶಾಕ್ ಕೊಡಲು ರಾಜ್ಯ ಸರ್ಕಾರ ಸಜ್ಜು!

• ಉದಯವಾಹಿನಿ, ಬೆಂಗಳೂರು

ಒಂದೆಡೆ ಕೇಂದ್ರ ಸರ್ಕಾರ GST ಸ್ಲ್ಯಾಬ್ ಗಳನ್ನು ಇಳಿಕೆ ಮಾಡುವ ಮೂಲಕ ಜನರಿಗೆ ತೆರಿಗೆ ಹೊರೆ ಕಡಿಮೆ ಮಾಡಿದ್ದರೆ, ರಾಜ್ಯ ಸರ್ಕಾರ ಮತ್ತೊಂದು ಸುತ್ತಿನ ಬೆಲೆ ಏರಿಕೆ ಶಾಕ್ ಕೊಡಲು ಸಿದ್ಧತೆ ನಡೆಸಿದೆ. ದೇಸಿ ಹಾಲಿನ ಪ್ಯಾಕೆಟ್ ದರ ಏರಿಕೆ ಆಗಿರುವುದರ ನಡುವೆ ಈಗ ಪ್ರಯಾಣಿಕರಿಗೆ ಶಾಕಿಂಗ್ ಸುದ್ದಿ ಬಂದಿದೆ. ವಿದ್ಯುತ್ ದರ ಏರಿಕೆಯ ಮಾದರಿಯಲ್ಲೇ ಇನ್ನು ಮುಂದಿನ ದಿನಗಳಲ್ಲಿ ಪ್ರತಿ ವರ್ಷ ಸಾರಿಗೆ ಸಂಸ್ಥೆಗಳ ದರ ಪರಿಷ್ಕರಣೆ ಮಾಡಲು ರಾಜ್ಯ ಸರ್ಕಾರ ಸಮಿತಿ ರಚನೆ ಮಾಡಿದೆ.



**ಸಾರಿಗೆ ದರ ನಿಯಂತ್ರಣ ಸಮಿತಿ:** KERC ಮಾದರಿಯಲ್ಲೇ ಮುಂದಿನ ದಿನಗಳಲ್ಲಿ ಸಾರ್ವಜನಿಕ ಸಾರಿಗೆ ದರ ನಿಯಂತ್ರಣ ಸಮಿತಿ ಅಸ್ತಿತ್ವಕ್ಕೆ ಬರಲಿದೆ. ಕರ್ನಾಟಕ ಮೋಟಾರು ವಾಹನ ನಿಯಮ 1989ರ ಅಡಿಯಲ್ಲಿ ದರ ನಿಯಂತ್ರಣ ಸಮಿತಿಯನ್ನ ರಾಜ್ಯ ಸರ್ಕಾರ ರಚನೆ ಮಾಡಿದೆ. ಈ ಸಮಿತಿ ಪ್ರತಿ ವರ್ಷ ರಸ್ತೆ ಸಾರಿಗೆ ದರ ಹೆಚ್ಚಿಸುವ ನಿರ್ಧಾರ ತೆಗೆದುಕೊಳ್ಳಲಿದೆ.

# ಅರ್ಧ ಗುಂಡಿ ಮುಚ್ಚಿದ ಮೇಲೆ ಉಗ್ರ ಪ್ರತಿಭಟನೆ

## ಬಸವನಗುಡಿ ವ್ಯಾಪ್ತಿಯಲ್ಲಿ ವಿಪಕ್ಷದ ನಾಯಕ ಆರ್.ಅಶೋಕ, ಶಾಸಕ ರವಿ ಸುಬ್ರಮಣ್ಯ ನೇತೃತ್ವದಲ್ಲಿ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ನಡೆಸುವ ಪ್ರತಿಭಟನೆಯ ಬಿಸಿ ಹೇಗಿರಬೇಕೆಂದರೆ, ಕೂಡಲೇ ಆಡಳಿತ ಪಕ್ಷ ಎಚ್ಚೆತ್ತುಕೊಳ್ಳುವಂತಿರಬೇಕು. ಕರ್ನಾಟಕ ಬಿಜೆಪಿ ಘಟಕವು, ರಾಜ್ಯದಲ್ಲಿ ರಸ್ತೆಗಳು ಸರಿಯಿಲ್ಲ, ಅದರಲ್ಲೂ ಪ್ರಮುಖವಾಗಿ, ಬೆಂಗಳೂರಿನಲ್ಲಿ ಗುಂಡಿಗಳು ಹೆಚ್ಚಿವೆ ಎನ್ನುವ ಕಾರಣಕ್ಕಾಗಿ ಪ್ರತಿಭಟನೆ ಆರಂಭಿಸಿದೆ.

ಬೆಂಗಳೂರಿನ ಬಸವನಗುಡಿ ವ್ಯಾಪ್ತಿಯಲ್ಲಿ ವಿಪಕ್ಷದ ನಾಯಕ ಆರ್.ಅಶೋಕ ಮತ್ತು ಶಾಸಕ ರವಿ ಸುಬ್ರಮಣ್ಯ ನೇತೃತ್ವದಲ್ಲಿ ಪ್ರತಿಭಟನೆಯನ್ನು ನಡೆಸಿದ್ದಾರೆ. 'ಗ್ಯಾರಂಟಿಯಿಂದಾಗಿ, ರಾಜ್ಯ ಸರ್ಕಾರ ದಿವಾಳಿಯಾಗಿದೆ. ಹಾಗಾಗಿ, ಎಲ್ಲೆಲ್ಲಿ ರಸ್ತೆಗುಂಡಿಗಳು ಇದ್ದಾವೋ, ಅಲ್ಲೇ ನಾವೇ ಮುಂದೆ ನಿಂತು ಮುಚ್ಚೋಣ ಎಂದು ಸಾರ್ವಜನಿಕರಲ್ಲಿ ಅಶೋಕ್ ಮನವಿ ಮಾಡಿದ್ದಾರೆ.

ಅಸಲಿಗೆ, ಬೆಂಗಳೂರಿನಲ್ಲಿ ರಸ್ತೆಗುಂಡಿ ಸಮಸ್ಯೆ ಇರುವುದು ಇಂದು ನಿನ್ನೆಯದಲ್ಲ. ಉದ್ಯಮಿಯೊಬ್ಬರು, ಇಲ್ಲಿ ರಸ್ತೆಯ ಪರಿಸ್ಥಿತಿಗೆ ಬೇಸತ್ತು, ನಗರ ಬಿಟ್ಟು ಹೋಗುವುದಾಗಿ ಟ್ವೀಟ್ ಮಾಡಿದ್ದರು. ಇದು, ರಾಷ್ಟ್ರ ಮಟ್ಟದಲ್ಲಿ ದೊಡ್ಡ ಸುದ್ದಿಯಾದ



ಉದಯವಾಹಿನಿ ಚಿತ್ರ

ಮೇಲೆ ಸರ್ಕಾರ ಎಚ್ಚೆತ್ತುಕೊಂಡಿತ್ತು.

ಉದ್ಯಮಿಯು, ಮಾಡಬೇಕಾಗಿದ್ದ ಕೆಲಸವನ್ನು ವಿಪಕ್ಷಗಳಾದ ಬಿಜೆಪಿ, ಜೆಡಿಎಸ್ ಮಾಡಬೇಕಿತ್ತು. ಅಸಲಿಗೆ, ಬೆಂಗಳೂರು ರಸ್ತೆಗಳು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗುತ್ತಿದ್ದ ಸಂದರ್ಭದಲ್ಲಿ, ಸರ್ಕಾರದ ಕಿವಿಹಿಂಡಿದವರು ಖುದ್ದು ಕಾಂಗ್ರೆಸ್ ನಾಯಕರೇ. ಹೌದು, ಎಐಸಿಸಿ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು, ತುರ್ತಾಗಿ ರಸ್ತೆ ರಿಪೇರಿ ಕೆಲಸಕ್ಕೆ ಮುಂದಾಗಿ ಎಂದು ಸರ್ಕಾರಕ್ಕೆ ಸೂಚನೆಯನ್ನು ನೀಡಿದ್ದರು. ಕೂಡಲೇ, ಸಿಎಂಗಳು ಸಭೆ ಕರೆದು, ಗುಂಡಿ ಮುಚ್ಚಲು ಅ. 31ರ ಗಡುವನ್ನು ನೀಡಿದ್ದರು. ಆಗಲೂ

> ಕರ್ನಾಟಕದ ರಸ್ತೆಯ ಗುಂಡಿಗಳನ್ನು ದೊಡ್ಡದಾಗಿ ಬಿಂಬಿಸಲಾಗುತ್ತಿದೆ. ದೆಹಲಿಯಲ್ಲಿ ಪ್ರಧಾನಿಯವರ ನಿವಾಸ ಇರುವ ರಸ್ತೆಯಲ್ಲಿ ಎಷ್ಟು ಗುಂಡಿಗಳಿವೆ ಎನ್ನುವುದನ್ನು ಮಾಧ್ಯಮದವರು ತೋರಿಸಲಿ. ಜಿಬಿಎ ವ್ಯಾಪ್ತಿಯಲ್ಲಿ ದಿನವೊಂದಕ್ಕೆ, ಪಾಲಿಕೆವಾರು ಸುಮಾರು ಇನ್ನೂರು ಗುಂಡಿಗಳಂತೆ ಪ್ರತೀದಿನ ಸಾವಿರ ಗುಂಡಿಯನ್ನು ಮುಚ್ಚಲಾಗುತ್ತಿದೆ ಎಂದು ಡಿಸಿಎಂ ಶಿವಕುಮಾರ್ ಹೇಳಿದ್ದಾರೆ.

ಬಿಜೆಪಿಯವರಿಂದ ಯಾವುದೇ ಪ್ರತಿಭಟನೆ ಆರಂಭವಾಗಿರಲಿಲ್ಲ.

ಸಿಎಂ ಸೂಚನೆಯ ಬೆನ್ನಲ್ಲೇ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಸಮರೋಪಾದಿಯಲ್ಲಿ ಗುಂಡಿ ಮುಚ್ಚುವ ಕೆಲಸಕ್ಕೆ ಮುಂದಾಯಿತು. ಒಂದೆರಡು ದಿನ ಖುದ್ದಾಗಿ, ಬೆಂಗಳೂರು ಉಸ್ತುವಾರಿಯೂ ಆಗಿರುವ ಡಿಸಿಎಂ ಡಿಕೆ ಶಿವಕುಮಾರ್, ಸಿಟಿರೌಂಡ್ ಹೊಡೆದು ಕಾಮಗಾರಿಯನ್ನು ಪರಿಶೀಲಿಸಿದರು.

**ಸರ್ಕಾರದ ವಿರುದ್ಧ ಮಾಧ್ಯಮಗಳ ಮುಂದೆ ಕಿಡಿ**

ಬೆಂಗಳೂರಿನ ಅರ್ಧದಷ್ಟು ಗುಂಡಿ ಮುಚ್ಚಿದ ನಂತರ, ಬಿಜೆಪಿ ಪ್ರತಿಭಟನೆಯನ್ನು ಆರಂಭಿಸಿದೆ. ಒಂದಷ್ಟು ಜಾಗಕ್ಕೆ ಆರ್. ಅಶೋಕ, ಸಿಮೆಂಟ್ ಮಿಶ್ರಿತ ಜಲ್ಲಿಯನ್ನು ಸುರಿದಿದ್ದಾರೆ. ಸರ್ಕಾರದ ವಿರುದ್ಧ ಮಾಧ್ಯಮಗಳ ಮುಂದೆ ಕಿಡಿಕಾರಿದ್ದಾರೆ.

ಇವರ ಈ 'ಉಗ್ರ' ಪ್ರತಿಭಟನೆ ಇಷ್ಟಕ್ಕೇ ಮುಗಿಯುತ್ತಾ ಅಥವಾ ಬೆಂಗಳೂರು ಮತ್ತು ರಾಜ್ಯದ ರಸ್ತೆಗಳನ್ನು ಸರಿಮಾಡುವ ತನಕ ಈ ಹೋರಾಟ ತಾರ್ಕಿಕ ಅಂತ್ಯ ಕಾಣುತ್ತಾ ಎನ್ನುವುದು ಗೊತ್ತಾಗಬೇಕಿದೆ.

ದಿನವೊಂದಕ್ಕೆ ಎಷ್ಟು ಗುಂಡಿಯನ್ನು ಮುಚ್ಚಲಾಗಿದೆ, ಯಾವ ವ್ಯಾಪ್ತಿಯಲ್ಲಿ ಎಷ್ಟು ಗುಂಡಿಗಳು ಮುಚ್ಚಲು ಬಾಕಿಯಿದೆ ಎನ್ನುವ ಮಾಹಿತಿಯನ್ನು ಅಧಿಕಾರಿಗಳಾದ ಮಹೇಶ್ವರ್ ರಾವ್, ರಾಜೇಂದ್ರ ಚೋಳನ್ ನೀಡುತ್ತಿದ್ದರು ಇಷ್ಟೆಲ್ಲಾ ಆದ ಮೇಲೆ, ಬಿಜೆಪಿಯು ಪ್ರತಿಭಟನೆಯನ್ನು ಆರಂಭಿಸಿದೆ.

## ಬಾಕಿ ಉಳಿದ ನಿರ್ಮಾಣ ಸಾಮಾಗ್ರಿಗಳನ್ನು ಕೂಡಲೇ ತೆರವುಗೊಳಿಸಿ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ದಟ್ಟಣೆಯನ್ನು ಕಡಿಮೆ ಮಾಡಲು ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡ ಕೂಡಲೇ ಅವಶೇಷಗಳನ್ನು ತೆರವುಗೊಳಿಸುವಂತೆ ಬೆಂಗಳೂರು ಮೆಟ್ರೋ ರೈಲು ನಿಗಮ ಲಿಮಿಟೆಡ್ (ಬಿಎಂಆರ್ ಸಿಎಲ್) ಎಲ್ಲಾ ಗುತ್ತಿಗೆದಾರರು ಮತ್ತು ಯೋಜನಾ ಮೇಲ್ವಿಚಾರಕರಿಗೆ ಸೂಚನೆ ನೀಡಿದೆ.

ನಿರ್ಮಾಣ ಕಾರ್ಯ ಮುಗಿದ ನಂತರ, ಅವಶೇಷಗಳು, ತಾತ್ಕಾಲಿಕ ಬ್ಯಾರಿಕೇಡ್‌ಗಳು ಮತ್ತು ಇತರೆ ವಸ್ತುಗಳನ್ನು ವಿಳಂಬವಿಲ್ಲದೆ ತೆರವುಗೊಳಿಸಬೇಕೆಂದು ಸುತ್ತೋಲೆಯಲ್ಲಿ ಬಿಎಂಆರ್‌ಸಿಎಲ್ ಹೇಳಿದೆ.

ನೀರು ನಿಲ್ಲುವುದನ್ನು ತಡೆಗಟ್ಟಲು ಮತ್ತು ವಾಹನಗಳು ಪಾದಚಾರಿಗಳಿಗೆ ಸುಗಮ ಸಂಚಾರವನ್ನು ಖಚಿತಪಡಿಸಿಕೊಳ್ಳಲು ಗುತ್ತಿಗೆದಾರರ ಅಗತ್ಯವಿದೆ.



ಉದಯವಾಹಿನಿ ಚಿತ್ರ

ಸ್ಥಳೀಯ ಎಂಜಿನಿಯರ್‌ಗಳು ಮತ್ತು ನಿರೀಕ್ಷಕರು ತೆರವು ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುವ ಕಾರ್ಯವನ್ನು ವಹಿಸಲಾಗಿದೆ. ಸುರಕ್ಷತಾ ಅಧಿಕಾರಿಗಳು ಕೆಲಸದ ಸಮಯದಲ್ಲಿ, ನಂತರ ವಾಹನಗಳು ಮತ್ತು ಪಾದಚಾರಿಗಳಿಗೆ ಸುರಕ್ಷಿತ ಮಾರ್ಗವನ್ನು ಖಚಿತ ಪಡಿಸಿಕೊಳ್ಳಬೇಕು. ಪ್ರಭಾರ ಎಂಜಿನಿಯರ್ ಈ ಕೆಲಸಗಳನ್ನು ಕಟ್ಟುನಿಟ್ಟಾಗಿ ಮೇಲ್ವಿಚಾರಣೆ ಮಾಡಬೇಕು.

> ಮೆಟ್ರೋ ಕೆಲಸದ ಸಮಯದಲ್ಲಿ ಕಂಡುಬರುವ ಗುಂಡಿಗಳನ್ನು ತಕ್ಷಣವೇ ಸರಿಪಡಿಸಬೇಕು. ಅವಶೇಷಗಳನ್ನು ಸಹ ವಿಳಂಬವಿಲ್ಲದೆ ತೆರವುಗೊಳಿಸಬೇಕು. ಸಾಧ್ಯವಾದಲ್ಲೆಲ್ಲಾ, ಜನದಟ್ಟಣೆ ಇಲ್ಲದ ಸಮಯದಲ್ಲಿ ಕೆಲಸ ಮತ್ತು ತೆರವುಗೊಳಿಸುವಿಕೆಯನ್ನು ನಿಗದಿಪಡಿಸಬೇಕು, ಯಾವುದೇ ಬದಲಾವಣೆಗಳ ಸಂದರ್ಭದಲ್ಲಿ ಸಂಚಾರ ಪೊಲೀಸರಿಗೆ ಮುಂಚಿತವಾಗಿ ತಿಳಿಸಬೇಕು.

ಭಾರೀ ಮಳೆಯಂತಹ ಅನಿವಾರ್ಯ ಸಂದರ್ಭಗಳಲ್ಲಿ ಮತ್ತು ಲಿಖಿತ ಅನುಮೋದನೆಯೊಂದಿಗೆ ಮಾತ್ರ ವಿನಾಯಿತಿಗಳನ್ನು ಅನುಮತಿಸಲಾಗುತ್ತದೆ ಎಂದು ತಿಳಿಸಿದೆ.

## ಇಬ್ಬರು ಸರ್ಕಾರಿ ವೈದ್ಯರು ಸೇರಿ ಐವರ ಬಂಧನ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ನಕಲಿ ವೈದ್ಯಕೀಯ ದಾಖಲೆಗಳನ್ನು ಸಲ್ಲಿಸಿ, ಅಂಗವಿಕಲ ಕೋಟಾದ ಮೀಸಲಾತಿ ಅಡಿ ಸರ್ಕಾರಿ ವೈದ್ಯಕೀಯ ಸೀಟು ಪಡೆಯಲು 21 ವಿದ್ಯಾರ್ಥಿಗಳಿಗೆ ನಕಲಿ ಪ್ರಮಾಣಪತ್ರಗಳನ್ನು ಸೃಷ್ಟಿಸಿದ ಆರೋಪ ಮೇಲೆ ಇಬ್ಬರು ಸರ್ಕಾರಿ ವೈದ್ಯರು ಸೇರಿ ಐವರನ್ನು ಪೊಲೀಸರ ಬಂಧನಕ್ಕೊಳಪಡಿಸಿದ್ದಾರೆ,

ಮಲ್ಲೇಶ್ವರಂ ಪೊಲೀಸರು ಇಬ್ಬರು ಸರ್ಕಾರಿ ವೈದ್ಯರು, ಇಬ್ಬರು ಶಿಕ್ಷಕರು ಮತ್ತು ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಸೇರಿದಂತೆ ಐದು ಜನರನ್ನು ಬಂಧಿಸಿದ್ದಾರೆ.

ಆರೋಪಿಗಳನ್ನು ಬೆಂಗಳೂರಿನ ನಂದಿನಿ ಲೇಔಟ್‌ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಭರ್ಮಪ್ಪ ಕೆಬಿ (50) ವಿಜಯನಗರ ಜಿಲ್ಲೆಯ ಹೊಸಪೇಟೆಯ ಸರ್ಕಾರಿ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಕೊಪ್ಪಳ ಮೂಲದ ಡಿಜೆ ಸುಧಾಕರ್, ಹೊಸಪೇಟೆಯ ಎಫ್‌ಡಿಎ ಉಮೇಶ್ ನಾಗಪ್ಪ ಚೌಧರಿ, ಆಡಳಿತ ವೈದ್ಯಾಧಿಕಾರಿ (ಎಎಂಒ) ಡಾ. ಹರಿಪ್ರಸಾದ್ ಹೊಸಪೇಟೆಯ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿರುವ ಮಕ್ಕಳ ತಜ್ಞ ಡಾ. ಶ್ರೀನಿವಾಸ್ ಎಂದು ಗುರುತಿಸಲಾಗಿದೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವ್ಯತ್ಯಾಸಗಳನ್ನು ಗಮನಿಸಿದ ನಂತರ ನಕಲಿ ಪ್ರಮಾಣಪತ್ರ ದಂಧೆ ಬೆಳಕಿಗೆ ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ. ಆರೋಪಿಗಳು ಪ್ರಮಾಣಪತ್ರಗಳನ್ನು ನೀಡಲು ಅವರು ಪ್ರತಿ ಅಭ್ಯರ್ಥಿಗೆ 5–10 ಲಕ್ಷ ರೂ. ಶುಲ್ಕ ವಿಧಿಸಿದ್ದಾರೆಂದು ತಿಳಿದುಬಂದಿದೆ.

ಅಭ್ಯರ್ಥಿಗಳು ವೈದ್ಯಕೀಯ ಸೀಟುಗಳಿಗೆ ಅರ್ಜಿ ಸಲ್ಲಿಸುವಾಗ ಅಂಗವಿಕಲ ಕೋಟಾ ಆಯ್ಕೆ ಮಾಡದಿದ್ದರೂ, ಆನ್‌ಲೈನ್ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಶ್ರವಣದೋಷವಿದೆ





ಎಂದು ಹೇಳಿಕೊಂಡು ಅರ್ಜಿ ಸಲ್ಲಿಸಿದ್ದಾರೆ.

ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ಕೆಇಎ ನಿಯಮಗಳಂತೆ ಜು.17 ರಂದು ವಿಕ್ಟೋರಿಯಾ ಆಸ್ಪತ್ರೆ ಮತ್ತು ನಿಮ್ಹಾನ್ಸ್‌ಗೆ ಆಡಿಯೋಗ್ರಾಮ್ ಮತ್ತು ಬೆರಾ ಬ್ರೈನ್‌ಸ್ಟೆಮ್ ಆಡಿಟರಿ ಎವೋಕ್ಡ್ ರೆಸ್ಪಾನ್ಸ್‌ಪರೀಕ್ಷೆಗೆ ಒಳಪಡಿಸಲು ಕಳುಹಿಸಲಾಯಿತು. ಈ ವೇಳೆ ವೈದ್ಯರು ಅಭ್ಯರ್ಥಿಗಳು ಸಲ್ಲಿಸಿದ ಆಡಿಯೋಲಾಜಿಕಲ್ ಮೌಲ್ಯಮಾಪನ ವರದಿಗಳು ಅಧಿಕೃತವಲ್ಲ ಎಂಬುದನ್ನು ದೃಢಪಡಿಸಿದ್ದಾರೆ. ಇದರ ನಂತರ, 21 ಅಭ್ಯರ್ಥಿಗಳಿಗೆ ದಾಖಲೆಗಳನ್ನು ಸಲ್ಲಿಸಲು ನೋಟಿಸ್ ಜಾರಿ ಮಾಡಲಾಗಿದೆ. ನೋಟಿಸ್ ಬೆನ್ನಲೇ ಮೂವರು ವಿದ್ಯಾರ್ಥಿಗಳ ಪೋಷಕರು ವಿಚಾರಣೆಗೆ ಹಾಜರಾಗಿದ್ದು, ನಕಲಿ ಪ್ರಮಾಣಪತ್ರ ಕುರಿತು ಮಾಹಿತಿ ನೀಡಿದ್ದಾರೆ. ಇದರ ಆಧಾರದ ಮೇಲೆ, ಕೆಇಎ ಆಡಳಿತ ಅಧಿಕಾರಿಯೊಬ್ಬರು ಸೆಪ್ಟೆಂಬರ್ 8 ರಂದು 21 ವಿದ್ಯಾರ್ಥಿಗಳು ಸೇರಿದಂತೆ 24 ಜನರ ವಿರುದ್ಧ ದೂರು ದಾಖಲಿಸಿದ್ದಾರೆ. ದೂರು ಬೆನ್ನಲ್ಲೇ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಆರ್. ಜಗದೀಶ್ ಮತ್ತು ಅವರ ತಂಡ ತನಿಖೆಯನ್ನು ಪ್ರಾರಂಭಿಸಿದ್ದು, ಭರ್ಮಪ್ಪ ಈ ದಂಧೆಯ ಪ್ರಮುಖ ಆರೋಪಿ ಎಂದು ಗುರ್ತಿಸಿದೆ. ಚಿತ್ರದುರ್ಗದ ಮೂಲದವನಾದ ಈತ ಸುಧಾಕರ್, ಉಮೇಶ್ ಜೊತೆ ಸಂಪರ್ಕ ಹೊಂದಿದ್ದ, ಒಟ್ಟಾಗಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಕಮಿಷನ್ ಆಧಾರದ ಮೇಲೆ, ನಕಲಿ ಪ್ರಮಾಣಪತ್ರಗಳಿಗಾಗಿ ವೈದ್ಯರ ಸಹಿಯನ್ನು ಪಡೆಯುತ್ತಿದ್ದ.

# ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ

• ಉದಯವಾಹಿನಿ, ಬೆಂಗಳೂರು

ಭಾವೈಕ್ಯತೆ, ಸಹಬಾಳ್ವೆ, ಸೇವಾ ಮನೋಭಾವವನ್ನು ರೂಢಿಸಿಕೊಂಡರೆ ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ ಎಂದು ಶೇಷಾದ್ರಿಪುರಂ ಕಾಲೇಜಿನ ಗೌರ್ನಿಂಗ್ ಕೌನ್ಸಿಲ್ ಛೇರ್ಮನ್ ಎಂ.ಎಸ್. ನಟರಾಜ್ ತಿಳಿಸಿದರು.

ನಗರದ ಶೇಷಾದ್ರಿಪುರಂ ಪದವಿ ಕಾಲೇಜಿನ ಎನ್.ಎಸ್.ಎಸ್ ವಿದ್ಯಾರ್ಥಿಗಳಿಂದ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಹಾಗೂ 2025–26ನೇ ಸಾಲಿನ ಚಟುವಟಿಕೆಗಳ ಪ್ರಾರಂಭೋತ್ಸವಯನ್ನು ಹಮ್ಮಿಕೊಂಡಿದರು.

ರಾಷ್ಟ್ರೀಯ ಸೇವಾ ಯೋಜನಾ ಎಂಬುದು ಮಹಾತ್ಮ ಗಾಂಧೀಜಿ ಅವರ ಪರಿಕಲ್ಪನೆ. ಗ್ರಾಮಗಳ ಸ್ವರಾಜ್ಯಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಎನ್‌ಎಸ್‌ಎಸ್ ಎಂಬ ಪರಿಕಲ್ಪನೆಯಡಿ ಯುವಕರು ಸ್ವಯಂ ಸೇವಕರಾಗಿ ಗ್ರಾಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲಾಗುತ್ತಿದೆ ಎಂದು ಹೇಳಿದರು.

ಮಿಡಿತ ಫೌಂಡೇಶನ್ ಅಧ್ಯಕ್ಷ ಪರಿಸರ ಮಂಜುನಾಥ್ ಮಾತನಾಡಿ, ವಿದ್ಯಾರ್ಥಿಗಳು ಪರಿಸರ ರಕ್ಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಪರಿಸರ ಸ್ನೇಹಿ ಜೀವನ ಶೈಲಿಯನ್ನು ರೂಪಿಸಿಕೊಳ್ಳಲು ಸಲಹೆ ನೀಡಿದರು.

ಈ ವೇಳೆ ಶೇಷಾದ್ರಿಪುರಂ ಶಿಕ್ಷಣ ಟ್ರಸ್ಟಿನ ಡಬ್ಲ್ಯೂಡಿ ಅಶೋಕ್, ಎನ್‌ಎಸ್ ಕಾರ್ಯಕ್ರಮ ಅಧಿಕಾರಿ ಮಂಜುನಾಥ ಎಚ್. ಸೇರಿದಂತೆ ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

> ಯುವಕರಲ್ಲಿ ಸೇವಾ ಮನೋಭಾವನೆ, ರಾಷ್ಟ್ರೀಯತೆ, ಶಿಸ್ತು, ಸಮಯಪಾಲನೆ, ಬದ್ಧತೆ ಮುಂತಾದ ಜೀವನ ಮೌಲ್ಯಗಳನ್ನು ಕಲಿಸಿಕೊಡುತ್ತದೆ. ಒಂದು ದೇಶದ ಮೌಲ್ಯವನ್ನು ಅಳೆಯುವುದು ಹಣದಿಂದಲ್ಲ, ಬದಲಿಗೆ ಆ ದೇಶದ ಪ್ರಾಮಾಣಿಕ ಯುವಜನರ ಆಧಾರದ ಮೇಲೆ ಈ ನಿಟ್ಟನಲ್ಲಿ ಯುವಕರನ್ನು ಸನ್ಮಾರ್ಗದಲ್ಲಿ ಕರೆದುಕೊಂಡು ಹೋಗುವುದು ಎಲ್ಲರ ಜವಾಬ್ದಾರಿ ಎಂದು ನುಡಿದರು.
>
> ಕಾಲೇಜಿನ ಪ್ರಾಂಶುಪಾಲರಾದ ಮೇಜರ್ ಡಾ.ಅನಂದಪ್ಪ

## ಶೀಘ್ರವೇ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಕೆರೆಗಳ ಹಸ್ತಾಂತರ!

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಕೆರೆ ಸಂರಕ್ಷಣಾ ಅಭಿವೃದ್ಧಿ ಪ್ರಾಧಿಕಾರ ಕೆಟಿಸಿಡಿಎ ಶೀಘ್ರದಲ್ಲೇ ಬೆಂಗಳೂರಿನ ಹೊರವಲಯದದಲ್ಲಿರುವ ತನ್ನ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಅಡಿಯಲ್ಲಿ ಹೊಸದಾಗಿ ರೂಪುಗೊಂಡ ಐದು ನಗರ ನಿಗಮಗಳಿಗೆ ಹಸ್ತಾಂತರಿಸಲಿದೆ.

ನಗರದ ಹೊರವಲಯದಲ್ಲಿರುವ 46 ಕೆರೆಗಳನ್ನು ಕೆಟಿಸಿಡಿಎ ನಿರ್ವಹಿಸುತ್ತದೆ. ಆದರೆ ಈ ಜಲಮೂಲಗಳು ಸಣ್ಣ ನೀರಾವರಿ ಇಲಾಖೆಯ ಅಡಿಯಲ್ಲಿವೆ. ಈಗ, ಬೆಂಗಳೂರಿನಲ್ಲಿ 246 ಎಕರೆ ಮತ್ತು 36.4 ಗುಂಟೆಗಳಷ್ಟು ವಿಸ್ತೀರ್ಣದಲ್ಲಿರುವ 167 ಕೆರೆಗಳು ಜಿಬಿಎ ಅಡಿಯಲ್ಲಿ ಬರುತ್ತವೆ. ಕೆಟಿಸಿಡಿಎಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಕೆ. ಪವಿತ್ರಾ, ಮಾತನಾಡಿ ಹಲವಾರು ಹೊಸ ಪ್ರದೇಶಗಳನ್ನು ಜಿಬಿಎ ಅಡಿಯಲ್ಲಿ ತರಲಾಗಿದೆ ಎಂದು ತಿಳಿಸಿದರು. ಅದರಂತೆ, ಈ

> ಈ ಜಲಮೂಲಗಳ ಗಾತ್ರ ಕಡಿಮೆಯಾಗಿದೆ. ಹೆಸರಘಟ್ಟ ಸರೋವರ ಅಥವಾ ಯಲಹಂಕ ಪುಟ್ಟೇನಹಳ್ಳಿ ಪಕ್ಷಿ ಸಂರಕ್ಷಣಾ ಮೀಸಲು ಪ್ರದೇಶವನ್ನು ಜಿಬಿಎಗೆ ಹಸ್ತಾಂತರಿಸಲು ನಾವು ಉತ್ಸುಕರಾಗಿಲ್ಲ. ಏಕೆಂದರೆ ಈಗ ಅನುಸರಿಸುತ್ತಿರುವ ಕಪ್-ಅಂಡ್-ಸಾಸರ್ ಪುನರುಜ್ಜೀವನ ವಿಧಾನದ ಅಡಿಯಲ್ಲಿ, ನೈಸರ್ಗಿಕ ಜೀವವೈವಿಧ್ಯತೆಯು ಸಂಪೂರ್ಣವಾಗಿ ಕಳೆದುಹೋಗಿದೆ. ಜಲಚರ ಪ್ರಭೇದಗಳು, ವಲಸೆ ಹಕ್ಕಿಗಳು ಹಾನಿಗೊಳಗಾಗಿವೆ ಎಂದು ಅರಣ್ಯ ಅಧಿಕಾರಿಯೊಬ್ಬರು ಹೇಳಿದರು.





ಉದಯವಾಹಿನಿ ಚಿತ್ರ

ಪ್ರದೇಶಗಳ ಜಲಮೂಲಗಳು, ಒಳಚರಂಡಿ ವ್ಯವಸ್ಥೆಗಳು, ಇತರ ಉಪಯುಕ್ತತೆಗಳು ಸಹ ಜಿಬಿಎ ಅಡಿಯಲ್ಲಿ ಬರುತ್ತವೆ.

ಆದ್ದರಿಂದ, ಪ್ರತಿ ನಿಗಮದ ಗಡಿಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಿದ ನಂತರ ನಿರ್ವಹಣೆಗಾಗಿ ಜಲಮೂಲಗಳನ್ನು ಜಿಬಿಎಗೆ ಹಸ್ತಾಂತರಿಸಲಾಗುವುದು.

ಹೊಸ ನಿಗಮಗಳು ಜಲಮೂಲಗಳನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊಂದಿರುತ್ತವೆ ಎಂದು ಅವರು ಹೇಳಿದರು.

ಬೆಂಗಳೂರು ಮತ್ತು ಸುತ್ತಮುತ್ತಲಿನ ಕೆಲವು ಸರೋವರಗಳನ್ನು ಹೊಂದಿರುವ ಅರಣ್ಯ ಇಲಾಖೆಯು ಅವುಗಳನ್ನು ಜಿಬಿಎಗೆ ಹಸ್ತಾಂತರಿಸಲು ಉತ್ಸುಕವಾಗಿಲ್ಲ. ನಾವು ಹೆಬ್ಬಾಳ, ಮಡಿವಾಳ ಮತ್ತು ನಾಗವಾರ ಕೆರೆಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಿದ್ದೇವೆ. ಆದರೆ ಅವುಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ.

## ಸಾಮಾಜಿಕ ಮಾಧ್ಯಮಗಳ ಮೇಲೆ ನಿಯಂತ್ರಣ ಅಗತ್ಯ: ಅರ್ಜಿ ವಜಾಗೊಳಿಸಿದ ಹೈಕೋರ್ಟ್

• ಉದಯವಾಹಿನಿ, ಬೆಂಗಳೂರು

ಮಾಹಿತಿ ತಂತ್ರಜ್ಞಾನ ಕಾಯ್ದೆ 2000 ರ ಸೆಕ್ಷನ್ 79(3)(b) ಅಡಿ ಟ್ವೀಟ್‌ಗಳನ್ನು ನಿರ್ಬಂಧಿಸುವಂತೆ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ಪ್ರಶ್ನಿಸಿ ಎಕ್ಸ್ ಸಂಸ್ಥೆ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ವಜಾಗೊಳಿಸಿದೆ. ನಿರ್ಬಂಧಿಸುವ ಆದೇಶ ನೀಡುವ ಕೇಂದ್ರ ಸರ್ಕಾರದ ಸೆನ್ಸಾರ್‌ಶಿಪ್ (ಸಹಯೋಗ್) ಪೋರ್ಟಲ್, ತನ್ನ ವಿರುದ್ಧ ಬಲವಂತದ ಅಥವಾ ಪೂರ್ವಾಗ್ರಹ ಪೀಡಿತ ಕ್ರಮ ಕೈಗೊಳ್ಳದಂತೆ ತಡೆಯುವಂತೆ ಎಕ್ಸ್ ಕಾರ್ಪ್ ನ್ಯಾಯಾಲಯವನ್ನು ಕೋರಿತ್ತು.

ಸಾಮಾಜಿಕ ಮಾಧ್ಯಮವನ್ನು ನಿಯಂತ್ರಿಸುವುದು ಅಗತ್ಯ. ವಿಶೇಷವಾಗಿ ಮಹಿಳೆ ಮತ್ತು ಮಕ್ಕಳ ಗೌರವ ಕಾಪಾಡಲು ಸಾಮಾಜಿಕ ಮಾಧ್ಯಮಗಳ ಮೇಲೆ ನಿಯಂತ್ರಣ ಅಗತ್ಯ. ಇಲ್ಲದಿದ್ದರೆ ಸಂವಿಧಾನದಲ್ಲಿ ನಿಗದಿಪಡಿಸಲಾದ ಘನತೆಯ ಹಕ್ಕನ್ನು ಹಳಿತಪ್ಪಿಸಲಾಗುತ್ತದೆ ಎಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಹೇಳಿದೆ. ಮಾಹಿತಿ ಮತ್ತು ಸಂವಹನ, ಅದರ ಹರಡುವಿಕೆ





ಅಥವಾ ವೇಗವನ್ನು ಯಾವತ್ತೂ ನಿಯಂತ್ರಿಸದೆ ಬಿಟ್ಟಿಲ್ಲ. ಇದು ನಿಯಂತ್ರಣದ ವಿಷಯವಾಗಿದೆ. ತಂತ್ರಜ್ಞಾನವು ಸಂದೇಶವಾಹಕರಿಂದ ಅಂಚೆ ಸಾಧನಗಳವರೆಗೆ, ವಾಟ್ಸಾಪ್, ಇನ್‌ಸ್ಟಾಗ್ರಾಮ್, ಸ್ನ್ಯಾಪ್‌ಚಾಟ್‌ಗಳ ಯುಗದವರೆಗೆ ಅಭಿವೃದ್ಧಿ ಹೊಂದಿದಾಗ, ಎಲ್ಲವನ್ನೂ ಜಾಗತಿಕವಾಗಿ ಮತ್ತು ಸ್ಥಳೀಯವಾಗಿ ಆಡಳಿತಗಳಿಂದ ನಿಯಂತ್ರಿಸಲಾಗಿದೆ. ಸಾಮಾಜಿಕ ತಾಣಗಳ ಮೇಲೆ ನಿಯಂತ್ರಣ ಹೇರುವುದು ಈ ಕಾಲದ ಅತ್ಯಂತ ಅವಶ್ಯವಾಗಿದೆ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ತಿಳಿಸಿದೆ. ದೇಶದ ನಾಗರಿಕರು ಮತ್ತು ಟ್ವೀಟರ್ ಮಧ್ಯೆ ಸಹಯೋಗ್ ಪೋರ್ಟಲ್ ಭರವಸೆ ಬೆಳಕಾಗಿ ಕೆಲಸ ಮಾಡಲಿದೆ ಎಂದು ಹೈಕೋರ್ಟ್ ಹೇಳಿದೆ.

# ಅ.1ರಿಂದ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆ – ಕಾರಣವೇನು?

## ವರ್ಕ್ ಫ್ರಂ ಹೋಮ್ ಸಂಪೂರ್ಣ ನಿಲ್ಲಿಸಲು ಹಲವು ಖಾಸಗಿ ಕಂಪೆನಿಗಳ ನಿರ್ಧಾರ

• ಉದಯವಾಹಿನಿ, ಬೆಂಗಳೂರು

ರಾಜಧಾನಿಯ ಮಳೆ, ಇಲ್ಲಿನ ಮೂಲಭೂತ ಸೌಕರ್ಯ ಎಷ್ಟರ ಮಟ್ಟಿಗೆ ರಾಷ್ಟ್ರ ಮಟ್ಟದಲ್ಲಿ ಸದ್ದು ಮಾಡುತ್ತೋ, ಬೆಂಗಳೂರಿನ ಟ್ರಾಫಿಕ್ ಕೂಡಾ ಅಷ್ಟೇ ಕುಖ್ಯಾತಿಯನ್ನು ಪಡೆದಿದೆ. ಅದರಲ್ಲೂ ಪ್ರಮುಖವಾಗಿ, ಐಟಿ ಕಂಪೆನಿಗಳು ಹೆಚ್ಚಿರುವ ಪ್ರದೇಶಗಳಲ್ಲಂತೂ ಟ್ರಾಫಿಕ್ ಸಮಸ್ಯೆ ಹೇಳತೀರದು.

ಬೆಂಕಿಗೆ ತುಪ್ಪ ಸುರಿಯುವುದು ಎನ್ನುವ ಮಾತಿನಂತೆ, ಅಕ್ಟೋಬರ್ ಒಂದನೇ ತಾರೀಕಿನಿಂದ ಈ ಟ್ರಾಫಿಕ್ ಸಮಸ್ಯೆ ಇನ್ನಷ್ಟು ಉಲ್ಬಣಗೊಳ್ಳಲಿದೆ. ಬೆಂಗಳೂರು ನಿವಾಸಿಗಳು ಇದಕ್ಕೆ ಸಜ್ಜಾಗಬೇಕಿದೆ. ಯಾಕೆಂದರೆ, ಹೆಚ್ಚಿನ ಖಾಸಗಿ ಸಂಸ್ಥೆಗಳು ವರ್ಕ್ ಫ್ರಂ ಹೋಮ್ ಪದ್ದತಿಯನ್ನು ಹಿಂದಕ್ಕೆ ಪಡೆದಿದೆ. ನಗರದ ಐಟಿ ಕಂಪೆನಿಗಳು ಹೆಚ್ಚಾಗಿರುವ ಹೊರ ವರ್ತುಲ ರಸ್ತೆಯಲ್ಲಿ ಇರುವ ದೊಡ್ಡದೊಡ್ಡ ಖಾಸಗಿ ಕಂಪೆನಿಗಳು ಈಗಿರುವ ಹೈಬ್ರಿಡ್ ಪದ್ದತಿಯನ್ನು ಹಿಂದಕ್ಕೆ ಪಡೆದುಕೊಂಡಿದೆ. ವಾರಕ್ಕೆ ಎರಡು ಅಥವಾ ಮೂರು ದಿನ ಕಚೇರಿಗೆ ಬರುವ ಸೌಲಭ್ಯಗಳಿದ್ದವು. ಅದನ್ನು ಈಗ ರದ್ದು ಪಡಿಸಿದೆ. ಉದ್ಯೋಗಿಗಳು ಕಡ್ಡಾಯವಾಗಿ ಕಚೇರಿಗೆ (ಸೋಮವಾರದಿಂದ ಶುಕ್ರವಾರದವರೆಗೆ) ಬರಲೇ



ಉದಯವಾಹಿನಿ ಚಿತ್ರ

- ಉದ್ಯೋಗಿಗಳನ್ನು ಕಡ್ಡಾಯವಾಗಿ ಕಚೇರಿಗೆ ಬರಲು ಸೂಚಿಸುರುವ ಪ್ರೈವೇಟ್ ಕಂಪೆನಿಗಳು
- ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ರಾಜಧಾನಿ ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗಳು

ಬೇಕು ಎನ್ನುವ ಆದೇಶವನ್ನು ಮಾನವ ಸಂಪನ್ಮೂಲ ಇಲಾಖೆ ಹೊರಡಿಸಿರುವುದು, ಉದ್ಯೋಗಿಗಳು ಮತ್ತು ಬೆಂಗಳೂರು

> ಬೆಂಗಳೂರು ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ನೀಡಿರುವ ಮಾಹಿತಿಯನ್ವಯ, ORR ಆಸುಪಾಸಿನಲ್ಲಿ 26 ಪ್ರಮುಖ ಟೆಕ್ ಪಾರ್ಕ್‌ಗಳಿವೆ. ಕಳೆದ, ಜೂನ್ ತಿಂಗಳಲ್ಲಿ, ವಾಹನಗಳ ಸಂಚಾರವು, ಕಳೆದ ವರ್ಷದ (2024) ಜೂನ್‌ಗಿಂತ ಶೇ. 45ರಷ್ಟು ಜಾಸ್ತಿಯಾಗಿದೆ. ಬುಧವಾರದಂದು ಸಾಮಾನ್ಯವಾಗಿ, ಬೆಂಗಳೂರಿನಲ್ಲಿ ಹೆಚ್ಚಿನ ಟ್ರಾಫಿಕ್ ಸಂಚಾರವಿರುತ್ತದೆ. ಅಂದು, ಬೇರೆ ದಿನಕ್ಕಿಂತ ಸುಮಾರು 1.20 ಲಕ್ಷ ಹೆಚ್ಚಿನ ವಾಹನಗಳು ರಸ್ತೆಗೆ ಇಳಿದಿರುತ್ತವೆ.

ಟ್ರಾಫಿಕ್ ಪೊಲೀಸರ ತಲೆಬಿಸಿಗೆ ಕಾರಣವಾಗಿದೆ. ಉತ್ಪಾದನೆ ಹೆಚ್ಚಿಸಲು ಈ ಕ್ರಮ ಅನಿವಾರ್ಯ ಎಂದು ಖಾಸಗಿ ಸಂಸ್ಥೆಗಳು ಹೇಳಿವೆ. ಕಳೆದ ತಿಂಗಳು ಬೆಂಗಳೂರು ಟ್ರಾಫಿಕ್ ಪೊಲೀಸ್ ಅಧಿಕಾರಿಗಳು, ಔಟರ್ ರಿಂಗ್ ರೋಡ್ ನಲ್ಲಿರುವ ಸಂಸ್ಥೆಗಳ ಜೊತೆ ಸಭೆಯನ್ನು ನಡೆಸಿದ್ದರು. ಈ ಸಭೆಯಲ್ಲಿ ಕಚೇರಿಯ ಸಮಯವನ್ನು ಬದಲಾಯಿಸಲು, ಅಂದರೆ ಬೆಳಗ್ಗೆ ಒಂದು ಗಂಟೆ ಬೇಗನೇ ಕಚೇರಿ ಆರಂಭಿಸಲು, ಟ್ರಾಫಿಕ್ ಅಧಿಕಾರಿಗಳು ಮನವಿಯನ್ನು ಮಾಡಿದ್ದರು. ಖಾಸಗಿ ಸಂಸ್ಥೆಗಳು ಇನ್ನಷ್ಟೇ ಈ ವಿಚಾರದಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕಿದೆ.

ಅ. ಒಂದರಿಂದ, ವರ್ಕ್ ಫ್ರಂ ಹೋಮ್ ಪದ್ದತಿಯನ್ನು ಹಿಂದಕ್ಕೆ ಪಡೆದಿರುವುದು ಟ್ರಾಫಿಕ್ ಇಲಾಖೆಯ ಗಮನಕ್ಕೆ ತರಲಾಗಿದೆಯೇ ಎನ್ನುವ ಪ್ರಶ್ನೆಯನ್ನು ಹಲವು ಐಟಿ ಉದ್ಯೋಗಿಗಳು ಎತ್ತಿದ್ದಾರೆ. ಆದರೆ, ಅಮೆರಿಕಾದ ಆಡಳಿತದಲ್ಲಿ ಆಗುತ್ತಿರುವ ಹಲವು ಬದಲಾವಣೆಗಳಿಂದ, ಪ್ರೊಡಕ್ಟಿವಿಟ್ ಹೆಚ್ಚಿಸುವ ಅನಿವಾರ್ಯತೆ ಖಾಸಗಿ ಐಟಿ ಕಂಪೆನಿಗಳ ಮೇಲಿದೆ ಎಂದು ಹೇಳಲಾಗುತ್ತಿದೆ. ರೆಡ್ಡಿಟ್ ಬಳಕೆದಾರರ ಸಂದೇಶವೊಂದರ ಪ್ರಕಾರ, ಅ. ಒಂದರಿಂದ ವರ್ಕ್ ಫ್ರಂ ಆಫೀಸ್ ಕಡ್ಡಾಯ. ಟ್ರಾಫಿಕ್ ಜಾಂಗೆ ಎಲ್ಲರೂ ಸಿದ್ದರಾಗಿರಿ, ಔಟರ್ ರಿಂಗ್ ರೋಡ್ ನಲ್ಲಿರುವ ಹಲವು ಕಂಪೆನಿಗಳು ಕಚೇರಿಗೆ ಬರುವುದು ಕಡ್ಡಾಯ ಎನ್ನುವ ಸೂಚನೆಯನ್ನು ಹೊರಡಿಸಿದೆ ಎನ್ನುವ ಅಳಲನ್ನು ತೋಡಿಕೊಂಡಿದ್ದಾರೆ.

ಗೃಹಲಕ್ಷ್ಮೀಯರು ಈಗ ಸ್ವಯಂ ಉದ್ಯೋಗಿಗಳು: ಯೋಜನೆ ಹಣ ಕೂಡಿಟ್ಟು ಮೈಸೂರು ದಸರಾ ಮಳಿಗೆಗಳಲ್ಲಿ ವ್ಯಾಪಾರ

# 40ಕ್ಕೂ ಹೆಚ್ಚು ಮಳಿಗೆಗಳು ಮಹಿಳೆಯರಿಗಾಗಿಯೇ ನಿರ್ಮಾಣ

• ಉದಯವಾಹಿನಿ, ಮೈಸೂರು

ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳು ಈಗ ಸ್ವಯಂ ಉದ್ಯೋಗಿಗಳಾಗಿದ್ದಾರೆ. ಪ್ರತಿ ತಿಂಗಳು ಗೃಹಲಕ್ಷ್ಮೀಯಿಂದ ಬಂದ ಹಣವನ್ನು ಕೂಡಿಟ್ಟು ಬಂಡವಾಳ ಮಾಡಿಕೊಂಡ ವನಿತೆಯರು ವ್ಯಾಪಾರ ವಹಿವಾಟು ನಡೆಸುತ್ತಿದ್ದಾರೆ. ಬಗೆಯ ಬಗೆಯ ತಿಂಡಿ, ತಿನಿಸುಗಳ ಮಳಿಗೆಯೊಂದಿಗೆ ಬ್ಯಾಂಗಲ್ಸ್ ಸ್ಟೋರ್ ಹಾಗೂ ಬಟ್ಟೆ ಮಾರಾಟದ ಮಳಿಗೆಯನ್ನು ತೆರೆದು ವಹಿವಾಟು ನಡೆಸುತ್ತಿರುವುದು ವಿಶೇಷವಾಗಿದೆ. ದಸರಾ ಮಹೋತ್ಸವ ಪ್ರಯುಕ್ತ ನಡೆಯುತ್ತಿರುವ ಮಹಿಳಾ ದಸರಾದಲ್ಲಿ ವಿಶೇಷವಾಗಿ ವ್ಯಾಪಾರಕ್ಕಾಗಿ ಮಳಿಗೆಗಳನ್ನು ತೆರೆಯುವ ಮೂಲಕ ವ್ಯಾಪಾರ ನಡೆಸುತ್ತಿದ್ದಾರೆ.

ವರಲಕ್ಷ್ಮಿ ಸ್ತ್ರೀ ಶಕ್ತಿ ಸಂಘದ ಮೂಲಕ ಮಳಿಗೆಯನ್ನು ಪಡೆದಿರುವ ಎಚ್.ಡಿ. ಕೋಟೆಯ ಸಿಂಧೂ ಅವರು ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣವನ್ನು ಆರು ತಿಂಗಳು ಕೂಡಿಟ್ಟಿದ್ದರು.



> ಗೃಹಲಕ್ಷ್ಮಿ ಯೋಜನೆಯಿಂದ ಹಣವನ್ನು ಕೂಡಿಟ್ಟು ಮಹಿಳಾ ದಸರಾದಲ್ಲಿಮಹಿಳೆಯರು ಮಳಿಗೆಗಳನ್ನು ತೆರೆದು ವ್ಯಾಪಾರ ವಹಿವಾಟು ನಡೆಸುತ್ತಿರುವುದು ಸಂತಸ ತಂದಿದೆ. ಸ್ವಾವಲಂಬಿ ಜೀವನ ನಡೆಸಲು ನೀಡಿದ ಹಣ ಮಹಿಳೆಯರು ಸ್ವಯಂ ಉದ್ಯಮಿಗಳಾಗುವಂತೆ ಪ್ರೇರಣೆ ನೀಡಿರುವುದು ಸರಕಾರದ ಸಾಧನೆಯಾಗಿದೆ.
> -ಲಕ್ಷ್ಮಿ ಹೆಬ್ಬಾಳಕರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು.

ಆ 12 ಸಾವಿರ ರೂ.ಗಳಿಂದ ಸ್ಯಾಂಡ್‌ವಿಚ್ ಕಾರ್ನರ್ ಹೆಸರಿನಲ್ಲಿ ಕುರುಕಲು ತಿಂಡಿ ತಿನಿಸುಗಳ ಮಳಿಗೆ ತೆರೆದು ವ್ಯಾಪಾರ ನಡೆಸುತ್ತಿದ್ದಾರೆ.

> ಗೃಹಲಕ್ಷ್ಮಿಯೋಜನೆಯಿಂದ ಪ್ರತಿ ತಿಂಗಳು ಬರುತ್ತಿದ್ದ 2 ಸಾವಿರ ರೂ. ಒಂದು ವರ್ಷದವರೆಗೆ ಕೂಡಿಟ್ಟು ಏನಾದರೂ ವ್ಯಾಪಾರ ಮಾಡಬೇಕು ಎಂದು ನಿರ್ಧರಿಸಿದ್ದೆ. ನನಗೆ ಮಹಿಳಾ ದಸರಾದಲ್ಲಿ ವ್ಯಾಪಾರ ನಡೆಸಲು ಅವಕಾಶ ಸಿಕ್ಕಿದೆ. ಇಲ್ಲಿಉತ್ತಮವಾಗಿ ವ್ಯಾಪಾರ ಮಾಡುವ ಮೂಲಕ ಊರಿನಲ್ಲಿ ಉದ್ಯಮ ಆರಂಭಿಸುತ್ತೇನೆ.
> -ಸಿಂಧೂ, ಗೃಹಲಕ್ಷ್ಮಿ ಫಲಾನುಭವಿ, (ಕುರುಕಲು ತಿಂಡಿ ಮಾರಾಟಗಾರರು), ಎಚ್.ಡಿ.ಕೋಟೆ

ಎಚ್.ಡಿ.ಕೋಟೆಯ ದೃಷ್ಟಿ ವಿಶೇಷಚೇತನೆ ಶೃತಿ ಕೂಡ ಆರು ತಿಂಗಳು ಕೂಡಿಟ್ಟ ಗೃಹಲಕ್ಷ್ಮಿಹಣದಿಂದ ಫ್ಯಾನ್ಸಿ ವಸ್ತುಗಳನ್ನು ತಂದು ವ್ಯಾಪಾರ ಮಾಡುತ್ತಿದ್ದಾರೆ. ಎಚ್.ಡಿ.ಕೋಟೆಯ ಅರವತ್ತು ಮಂದಿ ಹಾಡಿ ಹೆಣ್ಣುಮಕ್ಕಳೇ ಸಂಘಟಿತರಾಗಿ ಪ್ರಕೃತಿ ಗಿರಿಜನ ಮಹಿಳಾ ಒಕ್ಕೂಟ ರಚಿಸಿಕೊಂಡಿದ್ದು, ತಾವೇ ರಾಗಿಯಿಂದ ತಯಾರಿಸಿ ನಾನಾ ಉತ್ಪನ್ನಗಳನ್ನು ಮಹಿಳಾ ದಸರಾದಲ್ಲಿ ಮಾರಾಟಕ್ಕೆ ಇರಿಸಿದ್ದಾರೆ. ರಾಗಿ ಹುರಿಹಿಟ್ಟು, ರಾಗಿ ಮುರುಕು, ರಾಗಿ ಮಿಕ್ಸ್‌ಚರ್ ಹೀಗೆ ರಾಗಿಯಿಂದ ತಯಾರಿಸಿದ ನಾನಾ ಉತ್ಪನ್ನಗಳು ನೆರೆದಿದ್ದವರು ಬಾಯಿ ರುಚಿಯನ್ನು ತಣಿಸುತ್ತಿವೆ. ಮೈಸೂರಿನ ವಿಜಯ ನಗರ ನಿವಾಸಿ ಗಗನ ದೀಪಿಕಾ ಅವರು ಗೃಹಲಕ್ಷ್ಮಿಯ ಹಣವನ್ನು ಉಳಿಸಿ ಬಟ್ಟೆಗಳನ್ನು ಖರೀದಿಸಿ ಮಹಿಳಾ ದಸರೆಯದಲ್ಲಿ ಮಾರಾಟ ಮಾಡುವ ಮೂಲಕ ಗಮನ ಸೆಳೆದರು.

**ಮಹಿಳಾ ಸಂಘಗಳಿಗೆ ಶಕ್ತಿ:** ಮಹಿಳಾ ದಸರಾದಲ್ಲಿ 40 ಕ್ಕೂ ಹೆಚ್ಚು ಮಳಿಗೆಗಳನ್ನು ವಿಶೇಷವಾಗಿ ಮಹಿಳೆಯರಿಗಾಗಿಯೇ ನಿರ್ಮಿಸಲಾಗಿದ್ದು, ಮಹಿಳಾ ಸಂಘಟನೆಗಳ ಸದಸ್ಯರು ತಾವು ಮನೆಯಲ್ಲಿಯೇ ಸಿದ್ಧಪಡಿಸಿದ ಕುರುಕಲು ತಿಂಡಿ-ತಿನಿಸಿಗಳು, ಹಪ್ಪಳ, ಉಪ್ಪಿನಕಾಯಿ, ಫ್ಯಾನ್ಸಿ ಆಭರಣಗಳು ಮತ್ತು ಸೀರೆ ಸೇರಿದಂತೆ ಬಟ್ಟೆಗಳನ್ನು ತಂದು ಮಾರಾಟ ಮಾಡುವ ಮೂಲಕ ಆದಾಯ ಗಳಿಸುತ್ತಿದ್ದಾರೆ.

# ಜಿಲ್ಲೆಗಳಲ್ಲಿ ಪಂಚ ಗ್ಯಾರಂಟಿ ಕಾರ್ಯಗಾರ

• ಉದಯವಾಹಿನಿ, ರಾಮನಗರ

ರಾಜ್ಯ ಸರ್ಕಾರದ ಮಹತ್ವಕಾಂಕ್ಷಿಯ ಪಂಚ ಗ್ಯಾರಂಟಿ ಯೋಜನೆಗಳ ಕಾರ್ಯಾಗಾರವನ್ನು ಜಿಲ್ಲೆಯಲ್ಲಿ ಸೆ.27ರಂದು ಹಮ್ಮಿಕೊಳ್ಳಲಾಗುತ್ತಿದೆ. ಪರಿಣಾಮಕಾರಿಯಾ ಆಯೋಜಿಸಲು ಜನಪ್ರತಿನಿಧಿಗಳು, ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಸಹಕಾರ ನೀಡಬೇಕು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಸೂರಜ್ ಎಂ.ಎನ್. ಹೆಗಡೆ ಮನವಿ ಮಾಡಿದರು.

ನಗರದ ಜಿಲ್ಲಾ ಪಂಚಾಯಿತಿ ಮಿನಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರದ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳಾದ ಶಕ್ತಿ, ಅನ್ನಭಾಗ್ಯ, ಗೃಹಜ್ಯೋತಿ, ಗೃಹಲಕ್ಷ್ಮಿ, ಯುವನಿಧಿ ಶೇ 97 ಜನರನ್ನು ತಲುಪಿವೆ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಯಾಗಾರ ಹಮ್ಮಿಕೊಳ್ಳಲಾಗುತ್ತಿದೆ' ಎಂದರು. ಈಗಾಗಲೇ ಬೆಂಗಳೂರು, ಚಿಕ್ಕಬಳ್ಳಾಪುರ, ಹಾವೇರಿ, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ



ಉದಯವಾಹಿನಿ ಚಿತ್ರ

ಕಾರ್ಯಾಗಾರ ಮುಗಿದಿದೆ. 6ನೇ ಕಾರ್ಯಾಗಾರವನ್ನು ಬೆಂಗಳೂರು ದಕ್ಷಿಣ ಜಿಲ್ಲೆಯ ಜಿ.ಪಂ. ಸಭಾಂಗಣದಲ್ಲಿ ಹಮ್ಮಿಕೊಳ್ಳಲು ಚಿಂತಿಸಲಾಗಿದೆ.

ಕಾರ್ಯಕ್ರಮಕ್ಕೆ ಡಿಸಿಎಂ ಡಿ.ಕೆ. ಶಿವಕುಮಾರ್, ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಹಾಗೂ ಗಣ್ಯರು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಕಾರ್ಯಾಗಾರವನ್ನು ಹಬ್ಬದಂತೆ ಆಯೋಜಿಸಬೇಕು. ಅದಕ್ಕಾಗಿ, ರೂಪುರೇಷ ಉತ್ತಮವಾಗಿರಬೇಕು. ಪ್ರಾರ್ಥನೆ, ನಾಡಗೀತೆ, ಸ್ವಾಗತ, ಪ್ರಾಸ್ತಾವಿಕ ಮಾತುಗಳು, ಗ್ಯಾರಂಟಿ ಯೋಜನೆಗಳ ಬಗ್ಗೆ ತಜ್ಞರ ಮಾಹಿತಿ, ಗ್ಯಾರಂಟಿ ಗೀತೆ-ನೃತ್ಯ, ಮುಖ್ಯ ಅತಿಥಿಗಳ ಭಾಷಣಗಳು, ಫಲಾನುಭವಿಗಳ

## ವಿಶ್ವಸಂಸ್ಥೆಯಿಂದ ಮೆಚ್ಚುಗೆ

**ಯಾವುದೇ ಮಧ್ಯವರ್ತಿಗಳಿಲ್ಲದೆ ಯಾರ ಹಸ್ತಕ್ಷೇಪವು ಇಲ್ಲದೆ ನೇರವಾಗಿ ಗ್ಯಾರಂಟಿ ಯೋಜನೆಗಳು ಫಲಾನುಭವಿಗಳನ್ನು ತಲುಪಿವೆ. ಇದು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲೂ ಚರ್ಚೆಗೆ ಒಳಗಾಗಿ ಹೆಸರು ಗಳಿಸಿದೆ. ವಿಶ್ವಸಂಸ್ಥೆ ಸಹ ಪಂಚ ಗ್ಯಾರಂಟಿಗಳ ಪರಿಣಾಮಕಾರಿ ಅನುಷ್ಠಾನವನ್ನು ಶ್ಲಾಘಿಸಿದೆ. ನೆರೆಹೊರೆ ರಾಜ್ಯಗಳಲ್ಲೂ ಕರ್ನಾಟಕದ ಈ ಮಾದರಿಯನ್ನು ಅನುಸರಿಸಲಾಗುತ್ತಿದೆ' ಎಂದು ಸೂರಜ್ ಹೆಮ್ಮೆ ವ್ಯಕ್ತಪಡಿಸಿದರು.**

ಯಶೋಗಾಥೆಗಳ ವಿಡಿಯೋ ಪ್ರಸಾರಕ್ಕೆ ಅಗತ್ಯ ತಯಾರಿ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

# ಪೌರ ಕಾರ್ಮಿಕರು ನಗರದ ಆಸ್ತಿ

• ಉದಯವಾಹಿನಿ, ಶಿಡ್ಲಘಟ್ಟ

ಪೌರ ಕಾರ್ಮಿಕರು ನಗರದ ಆಸ್ತಿ ಇದ್ದಂತೆ. ಮಳೆ, ಚಳಿ, ಗಾಳಿ ಲೆಕ್ಕಿಸದೆ ನಗರದ ಸ್ವಚ್ಚತೆ ಕಡೆ ಗಮನ ಹರಿಸುತ್ತಾರೆ ಎಂದು ಶಾಸಕ ಬಿ.ಎನ್. ರವಿಕುಮಾರ್ ಹೇಳಿದರು.

ನಗರದಲ್ಲಿ ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ನಗರಸಭೆಯಿಂದ ಹಮ್ಮಿಕೊಂಡಿದ್ದ ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಮಾತನಾಡಿದರು. ನಗರದಲ್ಲಿ 12,800 ಮನೆಗಳಿದ್ದು, ಪ್ರತಿ ಮನೆಗೂ ಶುದ್ಧ ಕುಡಿಯುವ ನೀರನ್ನು ಕೊಡುವ ನಿಟ್ಟಿನಲ್ಲಿ ಅಮೃತ್ 2 ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ 92 ಕೋಟಿ ಅನುದಾನ ಕೊಟ್ಟಿದ್ದಾರೆ. ಮುಂದಿನ 40 ವರ್ಷಗಳ ದೂರದೃಷ್ಟಿಯಿಂದ ಯೋಜನೆ ರೂಪಿಸಿ ಯುಜಿಡಿಗಾಗಿ 38 ಕೋಟಿ ಅನುದಾನ ಟೆಂಡರ್ ಪ್ರಕ್ರಿಯೆ ಪ್ರಾರಂಭವಾಗಿದೆ ಎಂದರು. ನಗರಸಭೆಯಲ್ಲಿ ಸುಮಾರು 150ಕ್ಕೂ ಹೆಚ್ಚು ಪೌರಕಾರ್ಮಿಕರಿದ್ದು ಮತ್ತು ನಗರಸಭೆ ಅಧಿಕಾರಿಗಳು ಒಗ್ಗಟ್ಟಾಗಿ ಶ್ರಮಿಸಿ ಅಭಿವೃದ್ಧಿಪಡಿಸಬೇಕು. ನಗರದಲ್ಲಿ ಸ್ವಚ್ಚತೆ, ಕುಡಿಯುವ ನೀರು ಮತ್ತು ಬೀದಿದೀಪದ ಬಗ್ಗೆ



ಉದಯವಾಹಿನಿ ಚಿತ್ರ

ಹೆಚ್ಚಿನ ಗಮನ ಹರಿಸಬೇಕು ಎಂದರು.


ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಂಕ್ ಮುನಿಯಪ್ಪ ಮಾತನಾಡಿ, ನಗರ ಸ್ವಚ್ಚವಾಗಿರಲು ಪೌರ ಕಾರ್ಮಿಕರ ಶ್ರಮ ಅಪಾರ. ನಗರ ಸ್ವಚ್ಚತೆ ಹಾಗೂ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ನಗರಸಭೆ ಅಧಿಕಾರಿಗಳ ಕಾರ್ಯ ಶ್ಲಾಘನೀಯ. ಪೌರ ಕಾರ್ಮಿಕರು ಸಾರ್ವಜನಿಕರ ಆರೋಗ್ಯ ರಕ್ಷಣೆ ಮಾಡುವ ವೈದ್ಯರಿದ್ದಂತೆ. ನಿತ್ಯ ನಗರಸಭೆ ಸ್ವಚ್ಚತೆಗಾಗಿ ಶ್ರಮಿಸುತ್ತಿದ್ದಾರೆ. ಅವರನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.ಮಹಿಳಾ ಪೌರಕಾರ್ಮಿಕರಿಗೆ ಕುಕ್ಕರ್, ಸೀರೆ, ಪುರುಷ ಪೌರ ಕಾರ್ಮಿಕರಿಗೆ ಶರ್ಟ್, ಪ್ಯಾಂಟ್ ಬಟ್ಟೆ, ಕುಕ್ಕರ್ ವಿತರಿಸಲಾಯಿತು.

# ದಂಗೆಗೆ ಪ್ರಚೋದನೆ: ಕೀಳು ಸಂಸ್ಕೃತಿ

**ಮಾಲೂರು:** ಮಾಲೂರಿನ ಜನ ನೇಪಾಳದ ರೀತಿ ದಂಗೆ ಏಳುತ್ತಾರೆ' ಎಂದು ಮಾಜಿ ಶಾಸಕ ಮಂಜುನಾಥಗೌಡ ತಾಲ್ಲೂಕಿನ ಜನರನ್ನು ದಂಗೆ ಏಳಲು ಪ್ರಚೋದಿಸುತ್ತಿದ್ದಾರೆ ಎಂದು ಶಾಸಕ ಕೆ.ವೈ. ನಂಜೇಗೌಡ ಹರಿಹಾಯ್ದಿದ್ದಾರೆ.

ನನ್ನ ಮೇಲಿನ ವೈಯಕ್ತಿಕ ದ್ವೇಷದಿಂದ ಈ ರೀತಿ ಕೀಳಾಗಿ ಮಾತನಾಡುವುದು ಮಾಲೂರಿನ ಸಂಸ್ಕೃತಿಯಲ್ಲ. ಇದು ಹೊಸಕೋಟೆ ಸಂಸ್ಕೃತಿ. ಇಂತಹ ಕೀಳು ಮಟ್ಟದ ಸಂಸ್ಕೃತಿ ನಮ್ಮದಲ್ಲ ಎಂದು ವಾಗ್ದಾಳಿ ನಡೆಸಿದರು. ಪಟ್ಟಣದ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮಾಲೂರಿನಲ್ಲಿ ಎಲ್ಲರೂ ಶಾಂತಿಯುತ ಜೀವನ ನಡೆಸುತ್ತಿದ್ದಾರೆ. ನಿಮ್ಮ ಸಂಸ್ಕೃತಿ ಏನೆಂದು ತಾಲ್ಲೂಕಿನ ಜನತೆಗೆ ಈಗಾಗಲೇ ಗೊತ್ತಾಗಿದೆ. ತಾಲ್ಲೂಕಿನ ಯುವಕರನ್ನು ದಂಗೆ ಏಳುವಂತೆ ಪ್ರಚೋದನೆ ನೀಡುತ್ತಿರುವುದು ಸರಿಯಲ್ಲ ಎಂದರು. 2023ರ ಮಾಲೂರು ವಿಧಾನಸಭಾ ಕ್ಷೇತ್ರದ ಮತಗಳ ಮರು ಎಣಿಕೆ ನಡೆದರೂ ಗೆಲ್ಲುವುದು ಮಾತ್ರ ನಾನೇ' ಎಂದು ನಂಜೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಉದಯವಾಹಿನಿ ಚಿತ್ರ



ಸಾರ್ವಜನಿಕ ಜೀವನದಲ್ಲಿ ವೈಯಕ್ತಿಕ ತೇಜೋವಧೆ, ತಂದೆ, ತಾಯಿ ಮತ್ತು ಮಕ್ಕಳ ಬಗ್ಗೆ ಕೀಳಾಗಿ ಮಾತನಾಡುವುದು ಯಾರಿಗೂ ಶೋಭೆ ತರದು. ಯಾರೇ ಆಗಲಿ ರಾಜಕೀಯವಾಗಿ ಎದುರಿಸಬೇಕು. ವೈಯಕ್ತಿಕ ಟೀಕೆ, ಟಿಪ್ಪಣಿ ಸರಿಯಲ್ಲ. ಅವರ ನಾಲಿಗೆ ಅವರ ಕೀಳು ಸಂಸ್ಕೃತಿ ತೋರಿಸುತ್ತದೆ. ಅವರಷ್ಟು ಕೀಳು ಮಟ್ಟಕ್ಕೆ ಇಳಿಯುವುದು ನನ್ನಿಂದ ಸಾಧ್ಯವಿಲ್ಲ ಎಂದರು.

# ಹಣ ವಾಪಸ್: ಎಸ್‌ಬಿಐಗೆ ಆದೇಶ

• ಉದಯವಾಹಿನಿ, ತುಮಕೂರು

ಮಾಹಿತಿ ನೀಡದೆ ಕಡಿತ ಮಾಡಿರುವ ಹಣವನ್ನು ವಾಪಸ್ ಮಾಡುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬೆಂಗಳೂರಿನ ಬಾಣಸವಾಡಿ ಶಾಖೆಯ ಹಿರಿಯ ವ್ಯವಸ್ಥಾಪಕರಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗ ಆದೇಶಿಸಿದೆ.

ನಗರ ಹನುಮಂತಪುರ ರಸ್ತೆಯ ಆದರ್ಶ ನಗರದ ಬ್ಯಾಂಕ್ ಗ್ರಾಹಕ ಎಂ.ಎನ್.ಕುಮಾರಸ್ವಾಮಿ ಎಂಬುವರಿಗೆ 38 ಸಾವಿರ ಹಣದ ಜತೆಗೆ ಶೇ 9ರಷ್ಟು ಬಡ್ಡಿ ಸೇರಿಸಿ ನೀಡಬೇಕು. 15 ಸಾವಿರ ಪರಿಹಾರ ಹಾಗೂ 8 ಸಾವಿರ ನ್ಯಾಯಾಲಯ ವೆಚ್ಚವಾಗಿ ನೀಡುವಂತೆ ಆಯೋಗ ನೀಡಿರುವ ಆದೇಶದಲ್ಲಿ ತಿಳಿಸಿದೆ.

**ಏನಿದು ಪ್ರಕರಣ?:** ಎಸ್‌ಬಿಐ ಬೆಂಗಳೂರು ಬಾಣಸವಾಡಿ ಶಾಖೆಯಲ್ಲಿ ಉಳಿತಾಯ ಖಾತೆಯನ್ನು ಎಂ.ಎನ್.ಕುಮಾರಸ್ವಾಮಿ ಹೊಂದಿದ್ದಾರೆ. 19-09-2023ರಿಂದ 02-10-2023 ಅವಧಿಯಲ್ಲಿ ಅವರ ಬ್ಯಾಂಕ್ ಖಾತೆಯಿಂದ ವಿವಿಧ ಹಂತದಲ್ಲಿ 47 ಸಾವಿರ ಕಡಿತವಾಗಿದೆ. ಆಧಾರ್ ಸಂಖ್ಯೆಯನ್ನು ಬಳಸಿಕೊಂಡು ಹಣ ಪಡೆದುಕೊಳ್ಳಲಾಗಿದೆ.



ಮೊದಲ ಬಾರಿಗೆ ಹಣ ಕಡಿತವಾಗಿದ್ದಕ್ಕೆ ಎಸ್‌ಎಂಎಸ್ ಮೂಲಕ ಮಾಹಿತಿ ಸಿಕ್ಕಿದೆ. ನಂತರದ ಹಂತದಲ್ಲಿ ಕಡಿತವಾದ ಹಣಕ್ಕೆ ಎಸ್‌ಎಂಎಸ್ ಮೂಲಕ ಮಾಹಿತಿ ನೀಡಿಲ್ಲ.

ನಂತರ ಬ್ಯಾಂಕ್‌ಗೆ ಬಂದು ವಿವರ ಪಡೆದುಕೊಂಡಾಗ ಹಣ ಕಡಿತವಾಗಿರುವುದು ಗೊತ್ತಾಗಿದೆ. ತಕ್ಷಣ ಬ್ಯಾಂಕ್‌ನಲ್ಲಿ ದೂರು ಸಲ್ಲಿಸಿದ್ದಾರೆ. ಪೊಲೀಸ್ ಠಾಣೆಯಲ್ಲೂ ದೂರು ದಾಖಲಿಸಿದ್ದಾರೆ. ಮಾಹಿತಿ ಇಲ್ಲದೆ ಕಡಿತ ಮಾಡಿರುವ ಹಣ ವಾಪಸ್ ಕೊಡುವಂತೆ ಬ್ಯಾಂಕ್‌ಗೆ ನೋಟಿಸ್ ಜಾರಿ ಮಾಡಿದ್ದಾರೆ. ಅದರಲ್ಲಿ 9 ಸಾವಿರ ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ. ಉಳಿದ 38 ಸಾವಿರವನ್ನು ಮರಳಿಸಿರಲಿಲ್ಲ. ಹಣ ವಾಪಸ್ ಕೊಡದ ಎಸ್‌ಬಿಐ ವಿರುದ್ಧ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಕುಮಾರಸ್ವಾಮಿ ದೂರು ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಜಿ.ಟಿ.ವಿಜಯಲಕ್ಷ್ಮಿ, ಸದಸ್ಯೆ ನಿವೇದಿತಾ ರವೀಶ್ ನೇತೃತ್ವದ ಪೀಠ 38 ಸಾವಿರ ಹಣವನ್ನು ದೂರುದಾರರಿಗೆ ನೀಡುವಂತೆ ಆದೇಶಿಸಿದೆ.

# ಮದ್ದೂರು ನಗರ ಅಭಿವೃದ್ಧಿಗೆ ಯತ್ನ: ಶಾಸಕ ಕೆ.ಎಂ. ಉದಯ್

• ಉದಯವಾಹಿನಿ, ಮದ್ದೂರು


ಮುಂದಿನ ದಿನಗಳಲ್ಲಿ ನೂರಾರು ಕೋಟಿ ರೂಪಾಯಿ ಅನುದಾನ ತಂದು ಮದ್ದೂರು ನಗರವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಕೆ.ಎಂ. ಉದಯ್ ತಿಳಿಸಿದರು. ಪಟ್ಟಣದ ನಗರಸಭೆಯ ಎಸ್.ಎಂ.ಕೃಷ್ಣ ಸಭಾಂಗಣದಲ್ಲಿ ಮಂಗಳವಾರ ಅಧಕ್ಷೆ ಕೋಕಿಲಾ ಅರುಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅವರು ಮಾತನಾಡಿದರು.

ಸದಸ್ಯ ಎಂ.ಐ. ಪ್ರವೀಣ್, ಪುರಸಭೆಯನ್ನು ನಗರಸಭೆ ಮಾಡಿದ್ದೀರಿ. ನಗರಸಭೆಯೆಂದು ನಾಮಫಲಕ ಹಾಕುವುದಕ್ಕೂ ಮೊದಲು ಈ ಬಗ್ಗೆ ಪೂರ್ವಭಾವಿ ಸಭೆ ಕರೆದು ಏಕೆ ಸದಸ್ಯರ ಅನುಮತಿ ಪಡೆಯಲಿಲ್ಲ ನಗರಸಭೆಗೆ ಸೇರ್ಪಡೆಯಾದರೆ ಗ್ರಾಮ ಪಂಚಾಯಿತಿ ಅವರು ನ್ಯಾಯಾಲಯಕ್ಕೆ ಹೋಗುವ ತೀರ್ಮಾನ ಮಾಡಿರುವುದಾಗಿ ಅಂದೇ ತಿಳಿಸಿದ್ದರು.

ಇದೆಲ್ಲ ಗೊತ್ತಿದ್ದೂ ಏಕಾಏಕಿ ನಾಮಫಲಕ ಅನಾವರಣ ಮಾಡಿದ್ದೀರಿ ಎಂದು ಅಧ್ಯಕ್ಷೆ ಕೋಕಿಲಾ ಅರುಣ್ ಅವರನ್ನು ಪ್ರಶ್ನಿಸಿದರು.

ಪಟ್ಟಣದಲ್ಲಿ ರಸ್ತೆಗಳು ಗುಂಡಿ ಬಿದ್ದಿವೆ. ಗುಂಡಿ ಮುಚ್ಚಿಸಿಲ್ಲ. ಕಚೇರಿಯಲ್ಲಿ ಹೊರಗುತ್ತಿಗೆಯಲ್ಲಿ ಕೆಲಸ ಮಾಡುತ್ತಿರುವವರಿಗೆ ಹಲವು ತಿಂಗಳಿನಿಂದ ಸಂಬಳ ನೀಡಿಲ್ಲ. ಪರಿಸ್ಥಿತಿ ಹೀಗಿರುವಾಗ ಪುರ ಸಭೆಯನ್ನು ನಗರಸಭೆಯನ್ನಾಗಿ ಯಾಕಾಗಿ ಮೇಲ್ದರ್ಜೆಗೇರಿಸಿದ್ದೀರಿ ಎಂದು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಕೆ.ಎಂ. ಉದಯ್ ಅವರು, ಪಟ್ಟಣವಾಗಿರುವ ಮದ್ದೂರನ್ನು ನಗರವಾಗಿಸುವ ಉದ್ದೇಶದಿಂದಲೇ ಪುರಸಭೆಯನ್ನು ನಗರಸಭೆಯನ್ನಾಗಿಸಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ರಸ್ತೆಗಳನ್ನು ಹೊಸದಾಗಿ ಅಭಿವೃದ್ಧಿಪಡಿಸಲಾಗುವುದು. ಗೊರವನಹಳ್ಳಿ ರಸ್ತೆಯನ್ನೂ ನವೀಕರಿಸಿ ಅಭಿವೃದ್ಧಿ ಮಾಡಲಾಗುವುದು ಎಂದರು.

ಸದ್ಯದಲ್ಲೇ ಪಟ್ಟಣದ ಪ್ರಮುಖ ರಸ್ತೆ ಪೇಟೆ ಬೀದಿಯನ್ನು ವಿಸ್ತರಿಸಿ, 175 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು. ಎಂದು ಸದಸ್ಯೆ ಸರ್ವಮಂಗಳ ಆಗ್ರಹಿಸಿದರು.



ಉದಯವಾಹಿನಿ ಚಿತ್ರ

## ಯುಜಿಡಿ ಕಾಮಗಾರಿ ಅಪೂರ್ಣ: ಬಿಲ್ ಪಾವತಿಸಿದ್ದೇಕೆ

**ಈ ಹಿಂದೆ ಡಿ.ಸಿ. ತಮ್ಮಣ್ಣ ಅವರು ಶಾಸಕರಾಗಿದ್ದಾಗ 2 ನೇ ಹಂತದ ಒಳಚರಂಡಿ ಹಾಗೂ ಕುಡಿಯುವ ನೀರಿನ ಸರಬರಾಜು ಮಾಡುವ ಕಾಮಗಾರಿ ಸುಮಾರು 100 ಕೋಟಿಗೂ ಹೆಚ್ಚು ವೆಚ್ಚದಲ್ಲಿ ನಡೆದಿತ್ತು. ಆದರೆ ಅರ್ಧದಷ್ಟು ಕೆಲಸವೂ ನಡೆದಿಲ್ಲ. ಈ ಬಗ್ಗೆ ಎಷ್ಟೋ ಸಾರಿ ಸಾಮಾನ್ಯ ಸಭೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಯನ್ನು ಕರೆಸಿ ಮಾಹಿತಿ ಕೇಳಲಾಗಿತ್ತು. ಹೀಗಿದ್ದರೂ ಆ ಬಗ್ಗೆ ಸರಿಯಾದ ಕ್ರಮ ವಹಿಸದೇ ಕಾಮಗಾರಿಯ ಬಿಲ್ ಮೊತ್ತವನ್ನು ಸಂಬಂಧಪಟ್ಟ ಗುತ್ತಿಗೆದಾರನಿಗೆ ನೀಡಿರುವುದು ಎಷ್ಟು ಸರಿ ಎಂದು ಸದಸ್ಯರಾದ ಪ್ರವೀಣ್ ಸಚಿನ್ ಸೇರಿ ಹಲವು ಸದಸ್ಯರು ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡರು. ಈ ವೇಳೆ ಶಾಸಕ ಕೆ. ಎಂ ಉದಯ್ ಮಧ್ಯೆ ಪ್ರವೇಶಿಸಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗೆ ಸ್ಪಷ್ಟನೆ ಕೇಳಿ ನೋಟಿಸ್ ನೀಡಿ. ಆಗ ಆ ಅಧಿಕಾರಿಯು ಕಾಮಗಾರಿ ನಡೆಸಿದ ಗುತ್ತಿಗೆದಾರನಿಗೆ ನೋಟೀಸ್ ನೀಡುತ್ತಾರೆ ಎಂದು ಅಧಿಕಾರಿಗಳಿಗೆ ಹಾಗೂ ಅಧ್ಯಕ್ಷರಿಗೆ ಸೂಚನೆ ನೀಡಿದರು.**

# ವಿರೋಧದ ನಡುವೆ ನಾಳೆಯಿಂದ ಕಾವೇರಿ ಆರತಿ

• ಉದಯವಾಹಿನಿ, ಮಂಡ್ಯ

ರೈತಸಂಘದ ಪ್ರಬಲ ವಿರೋಧದ ನಡುವೆಯೂ ಶ್ರೀರಂಗಪಟ್ಟಣ ತಾಲ್ಲೂಕಿನ ಕೆಆರ್‌ಎಸ್ ಅಣೆಕಟ್ಟೆ ಬಳಿ ಸೆ.26ರಿಂದ 30ರವರೆಗೆ 'ಕಾವೇರಿ ಆರತಿ' ಕಾರ್ಯಕ್ರಮ ಆಯೋಜಿಸಲಾಗಿದೆ. ಶಾಸಕ ರಮೇಶ ಬಂಡಿಸಿದ್ದೇಗೌಡ ಅವರು ಶ್ರೀರಂಗಪಟ್ಟಣದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಮಾಹಿತಿಯನ್ನು ಖಚಿತಪಡಿಸಿದ್ದಾರೆ. 'ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ 5 ದಿನ ಕಾವೇರಿ ಆರತಿ ಸಮಾರಂಭವನ್ನು ವಿಜೃಂಭಣೆಯಿಂದ ಸಾಂಕೇತಿಕವಾಗಿ ಆಚರಿಸಲಾಗುವುದು. 26ರಂದು ಡಿಸಿಎಂ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸಮಾರಂಭಕ್ಕೆ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.

**ಕಾನೂನು ಉಲ್ಲಂಘನೆ:** ಹೈಕೋರ್ಟ್ ತಡೆಯಾಜ್ಞೆಯಿದ್ದರೂ ಆರತಿ ಪ್ರಕ್ರಿಯೆ ನಡೆಸಲು ಸರ್ಕಾರ ಮುಂದಾಗಿದೆ' ಎಂದು ರೈತ ಹೋರಾಟಗಾರ್ತಿ ಸುನಂದಾ ಜಯರಾಂ ಅಸಮಾಧಾನ ವ್ಯಕ್ತಪಡಿಸಿದರು. ದರ್ಪ, ಅಧಿಕಾರ, ಹಣದ ಮದದಿಂದ ಕಾನೂನನ್ನು ಉಲ್ಲಂಘಿಸಲಾಗುತ್ತಿದೆ. ಕೆ.ಆರ್.ಎಸ್ ಅಣೆಕಟ್ಟೆಯನ್ನು ನಾಶ ಮಾಡಲು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುನ್ನೀರಿನಲ್ಲಿ ಕಾವೇರಿ ಆರತಿ ನಡೆಸಲು ಮುಂದಾಗಿದ್ದಾರೆ. ಮಂಡ್ಯ ಸಂಸದರೂ ಆದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಿನ್ನೀರಿನಲ್ಲಿ 'ಸೀ ಪ್ಲೇನ್' ಯೋಜನೆಯನ್ನು ತರಲು ಹುನ್ನಾರ ನಡೆಸುತ್ತಿದ್ದಾರೆ. ಈ ಎರಡೂ ಯೋಜನೆಗಳು ಡ್ಯಾಂಗೆ ಅಪಾಯ ತಂದೊಡ್ಡುತ್ತವೆ ಎಂದು ಕಿಡಿಕಾರಿದರು.

# ಬಿಜೆಪಿಯಿಂದ ಗೊಂದಲ ಸೃಷ್ಟಿ: ದಿನೇಶ್ ಗುಂಡೂರಾವ್

• ಉದಯವಾಹಿನಿ, ಮಡಿಕೇರಿ

ಸಿಎಂ ಸಿದ್ದರಾಮಯ್ಯ ಅವರನ್ನು ಹಿಂದೂ ವಿರೋಧಿ ಎಂದು ತೋರಿಸಲೆಂದೇ ಬಿಜೆಪಿಯು, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ಕುರಿತು ಗೊಂದಲ ಸೃಷ್ಟಿಸಿದೆ' ಎಂದು ಆರೋಗ್ಯ ಖಾತೆ ಸಚಿವ ದಿನೇಶ್ ಗುಂಡೂರಾವ್ ಆರೋಪಿಸಿದರು. 'ಬ್ರಾಹ್ಮಣ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಗೌಡ ಕ್ರಿಶ್ಚಿಯನ್ ಎಂಬುದನ್ನು ನಾವು ಸಮೀಕ್ಷೆಯಲ್ಲಿ ಇರಿಸಿದ್ದಲ್ಲ. ಇದಕ್ಕೂ ಸಿದ್ದರಾಮಯ್ಯ ಅವರಿಗೂ ಸಂಬಂಧವಿಲ್ಲ. ಹಿಂದಿನ ಸಮೀಕ್ಷೆಯ ವೇಳೆ ಸುಮಾರು 1 ಲಕ್ಷ ಮಂದಿ ಈ ರೀತಿ ಹೇಳಿಕೊಂಡಿದ್ದರು. ಆ ವರದಿಯನ್ನು ಆರ್.ಅಶೋಕ್ ಸಚಿವರಾಗಿದ್ದಾಗ ಒಪ್ಪಿಕೊಂಡಿದ್ದರು ಎಂದು ಅವರು ಕೊಡಗು ಜಿಲ್ಲೆಯ ಪೊನ್ನಂಪೇಟೆಯಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಹಿಂದೂ ಧರ್ಮದಲ್ಲಿ ಅನೇಕ ಜಾತಿಗಳಿವೆ. ಜಾತಿಗಳಿದ್ದ ಮಾತ್ರಕ್ಕೆ ಧರ್ಮ ಒಡೆಯುತ್ತದೆಯೇ? ಸರ್ಕಾರ ಯಾವುದೇ ಜಾತಿ ಸೃಷ್ಟಿಸುತ್ತಿಲ್ಲ. ಕೇಂದ್ರ ಸರ್ಕಾರ ಜಾತಿ ಗಣತಿ ಮಾಡಲಿದೆ, ರಾಜ್ಯ ಸರ್ಕಾರವಲ್ಲ. ಅದು ಬೇಡವೆಂದಾದರೆ ಬಿಜೆಪಿಯವರು ಕೂಡಲೇ ಪ್ರಧಾನಿಗೆ ಪತ್ರ ಬರೆಯಲಿ. ನಮ್ಮದು ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿಯ ಸಮೀಕ್ಷೆ' ಎಂದರು.

## ಮಿನಿ ನ್ಯೂಸ್

### ಜಂಬೂ ಸವಾರಿ ವೀಕ್ಷಣೆ ಆಸನ ಸಾಮರ್ಥ್ಯ 65 ಸಾವಿರದಿಂದ ರಿಂದ 40 ಸಾವಿರಕ್ಕೆ ಇಳಿಕೆ

• ಉದಯವಾಹಿನಿ, ಮೈಸೂರು

ಆರ್‌ಸಿಬಿ ವಿಜಯೋತ್ಸವದ ವೇಳೆ ಬೆಂಗಳೂರಿನಲ್ಲಿ ನಡೆದ ಕಾಲ್ತುಳಿತ ಘಟನೆ ಬಳಿಕ ಎಚ್ಚೆತ್ತುಕೊಂಡಿರುವ ಸರ್ಕಾರ ಜನರ ಸುರಕ್ಷತೆಯ ಹಿನ್ನೆಲೆಯಲ್ಲಿ ಜಂಬೂ ಸವಾರಿ ಮೆರವಣಿಗೆಯ ಆಸನ ಸಾಮರ್ಥ್ಯವನ್ನು 65 ಸಾವಿರದಿಂದ 40 ಸಾವಿರಕ್ಕೆ ಇಳಿಸಲು ನಿರ್ಧರಿಸಿದೆ. ಅ.2 ರಂದು ಅರಮನೆ ಆವರಣದಲ್ಲಿ ನಡೆಯಲಿರುವ ಜಂಬೂ ಸವಾರಿ ಮೆರವಣಿಗೆಗೆ ಈಗಾಗಲೇ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಈ ಬಾರಿ ಆಸನಗಳ ಸಾಮರ್ಥ್ಯವನ್ನು ಇಳಿಕೆ ಮಾಡಿದೆ.

ಕನಿಷ್ಠ 25 ಸಾವಿರ ಆಸನಗಳನ್ನು ಕಡಿಮೆ ಮಾಡಲಾಗುವುದು. ದೊಡ್ಡ ಸಭೆಗಳನ್ನು ನಿರ್ವಹಿಸುವ ಬಗ್ಗೆ ಜಾಗ್ರತೆಗಾಗಿ ಪಾಸ್‌ಗಳ ಸಂಖ್ಯೆಯನ್ನು ಕೂಡ ಕಡಿಮೆ ಮುದ್ರಿಸಲಾಗಿದೆ. ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ ಅವರು ಅಧಿಕಾರಿಗಳು ಮತ್ತು ದಸರಾ ಸಮಿತಿಯ ಸಭೆ ನಡೆಸಿ ಜನರ ಸುರಕ್ಷತಾ ಕ್ರಮ ಹಾಗೂ ಅಗತ್ಯ ಸೂಚನೆಗಳನ್ನು ನೀಡಿದ್ದಾರೆ. ಕಳೆದ ವರ್ಷ ಸರ್ಕಾರ 60 ಸಾವಿರ ಆಸನ ವ್ಯವಸ್ಥೆಗಳನ್ನು ಮಾಡಲಾಗಿತ್ತು. ಈ ಬಾರಿ 40 ಸಾವಿರ ಆಸನಗಳನ್ನು ಹಾಕಲು ನಿರ್ಧರಿಸಲಾಗಿದೆ. ಜಂಬೂ ಸವಾರಿಗೆ ಹೆಚ್ಚು ಜನರು ಆಗಮಿಸುತ್ತಾರೆ. ಚಾಮುಂಡೇಶ್ವರಿ ದೇವಿಯ ಚಿನ್ನದ ಅಂಬಾರಿಯನ್ನು ವೀಕ್ಷಿಸಲು ದೇಶ-ವಿದೇಶದಿಂದಲೂ ಸಹ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುತ್ತಾರೆ. ಪ್ರತಿ ವರ್ಷ ಪಾಸ್‌ಗಳ ಅವ್ಯವಸ್ಥೆ ಸಾಮರ್ಥ್ಯಕ್ಕಿಂತ ಹೆಚ್ಚಿನ ಪಾಸ್‌ಗಳನ್ನು ಮುದ್ರಿಸಲಾಗುತ್ತದೆ ಎಂಬ ದೂರುಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಈ ವರ್ಷ ಉಪಸಮಿತಿಯು ಆಸನ ಲಭ್ಯತೆ ಇರುವಷ್ಟು ಮಾತ್ರ ಪಾಸ್‌ಗಳನ್ನು ಮುದ್ರಿಸಲು ನಿರ್ಧರಿಸಿದೆ.

### ಪೌರಕಾರ್ಮಿಕರಿಗೆ ಆಹಾರ ಕಿಟ್ ವಿತರಣೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಾಗಡಿ

ಪಟ್ಟಣದ ಪುರಸಭೆಯಲ್ಲಿ ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಉಚಿತ ಆಹಾರ ಕಿಟ್ ವಿತರಿಸಲಾಯಿತು. ನಮ್ಮ ಭಾಗದ ನಗರ, ಪಟ್ಟಣಗಳು ಸ್ವಚ್ಛವಾಗಿ ಇದೆ ಎಂದರೆ ಅದರ ಹಿಂದಿನ ಪೌರಕಾರ್ಮಿಕರ ಶ್ರಮವನ್ನು ನಾವು ಸ್ಮರಿಸಬೇಕು. ಅವರು ಸ್ವಚ್ಛತೆ ಮಾಡುವುದರಿಂದ ನಮ್ಮ ಪರಿಸರ ಸುಂದರವಾಗಿ ಕಾಣಲು ಸಾಧ್ಯ.

ಅವರು ಕೂಡ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಪ್ರತಿದಿನವೂ ಊಟದ ಮೊದಲು ಸ್ವಚ್ಛವಾಗಿ ಕೈ ತೊಳೆಯಬೇಕು. ಏಕೆಂದರೆ ತಾವು ಮಾಡುವ ಕೆಲಸದಿಂದ ಬ್ಯಾಕ್ಟಿರಿಯಾಗಳು ತಮ್ಮ ಕೈಯಲ್ಲಿ ಇರುತ್ತದೆ. ಹಾಗಾಗಿ ಸಾಬೂನು ಅಥವಾ ಸ್ಯಾನಿಟೈಸರ್ ಮೂಲಕ ಸ್ವಚ್ಛಗೊಳಿಸಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು' ಎಂದರು.

ಮುಂದಿನ ವರ್ಷ ಪೌರಕಾರ್ಮಿಕರ ದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗುವುದು ಎಂದು ತಿಳಿಸಿದರು. ಪೌರಕಾರ್ಮಿಕರು ಸ್ವಚ್ಛತೆಯ ರಾಯಭಾರಿಗಳಾಗಿದ್ದಾರೆ. ಪೌರಕಾರ್ಮಿಕರ ಹುದ್ದೆ ದೊಡ್ಡದಲ್ಲ, ಅವರ ಶ್ರಮ ದೊಡ್ಡದು. ಪೌರ ಕಾರ್ಮಿಕರ ದಿನಾಚರಣೆ ಶುಭಾಶಯಗಳು ಎಂದು ತಿಳಿಸಿದರು.

### ಬ್ಯೂಟಿ ಪಾರ್ಲರ್ ತರಬೇತಿ

• ಉದಯವಾಹಿನಿ, ರಾಮನಗರ

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್ ಮತ್ತು ಕೆನರಾ ಬ್ಯಾಂಕ್ ಸಹಯೋಗದಲ್ಲಿ ನಡೆಸುತ್ತಿರುವ ರುಡ್‌ಸೆಟ್ ಸಂಸ್ಥೆ ವತಿಯಿಂದ ಬ್ಯೂಟಿ ಪಾರ್ಲರ್ ಕುರಿತು 35 ದಿನಗಳ ಉಚಿತ ತರಬೇತಿ ಹಮ್ಮಿಕೊಳ್ಳಲಾಗಿದೆ. ನವೆಂಬರ್ 4ರಿಂದ ಆರಂಭವಾಗಲಿರುವ ತರಬೇತಿಗೆ ಗ್ರಾಮೀಣ ಆಸಕ್ತ ನಿರುದ್ಯೋಗಿ ಯುವತಿಯರು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು 18ರಿಂದ 45 ವರ್ಷ ವಯೋಮಾನದವರಾಗಿದ್ದು, ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಬಿಪಿಎಲ್ ಕಾರ್ಡ್ ಅಥವಾ ಜಾಬ್ ಕಾರ್ಡ್ ಹಾಗೂ ಆಧಾರ್ ಕಾರ್ಡ್ ಕಡ್ಡಾಯವಾಗಿ ಹೊಂದಿರುವ ಗ್ರಾಮೀಣ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.

ತರಬೇತಿ ಕಡ್ಡಾಯವಾಗಿ ವಸತಿಯುತವಾಗಿದ್ದು, ತರಬೇತಿಯ ಅವಧಿಯಲ್ಲಿ ಉಚಿತವಾಗಿ ಊಟ, ವಸತಿ ನೀಡಲಾಗುವುದು. ತರಬೇತಿ ಪೂರ್ಣಗೊಂಡ ನಂತರ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವಾಲಯದಿಂದ ಪ್ರಮಾಣಪತ್ರ ವಿತರಿಸಲಾಗುವುದು. ಆಸಕ್ತರು ಅರ್ಜಿ ಸಲ್ಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಮೊ. 9380162042, 9113880324, 8027728166 ಸಂಪರ್ಕಿಸಬಹುದಾಗಿದೆ ಎಂದು ರುಡ್‌ಸೆಟ್ ಸಂಸ್ಥೆಯ ಬೆಂಗಳೂರು ಶಾಖೆಯ ನಿರ್ದೇಶಕ ರವಿಕುಮಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರೈತ ಹೋರಾಟಕ್ಕೆ ಬೆಂಬಲಿಸಲು ದೇವೇಗೌಡರು ಗ್ರೀನ್ ಸಿಗ್ನಲ್

• ಉದಯವಾಹಿನಿ, ಬಿಡದಿ:

## ವಿಎಸ್‌ಎಸ್‌ಎನ್ ಸೊಸೈಟಿಗಳು, ಹಾಲಿನ ಡೇರಿಗಳಲ್ಲಿ ಕೈಗೊಂಡ ನಿರ್ಣಯದ ಪ್ರತಿಗಳನ್ನು ಸರಕಾರಕ್ಕೆ ರವಾನಿಸಲು ರೈತರು ಸಜ್ಜು


ಸ್ಮಾರ್ಟ್‌ಸಿಟಿ ಯೋಜನೆ ಭೂಸ್ವಾಧೀನವನ್ನು ವಿರೋಧಿಸಿ ಅನಿರ್ದಿಷ್ಟಾವಧಿ ಕಾಲದವರೆಗೆ ನಡೆಸುತ್ತಿರುವ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲು ರೈತರು ನಿರ್ಧರಿಸಿದ್ದು, ಈ ನಿಟ್ಟಿನಲ್ಲಿ ಭೂಸ್ವಾಧೀನದ ವಿರುದ್ಧ ನಿರ್ಣಯ ಕೈಗೊಳ್ಳಲು ರೈತರ ಪ್ರಾತಿನಿಧಿಕ ಸಂಸ್ಥೆಗಳು, ಹಾಲಿನ ಡೇರಿಗಳಿಗೆ ತುರ್ತು ಸಂದೇಶ ರವಾನಿಸಿದ್ದಾರೆ. ತಮ್ಮ ಭೂಮಿ ಉಳಿಸಿಕೊಳ್ಳಲು ಭೈರಮಂಗಲ ಗ್ರಾಮದಲ್ಲಿ ಕಳೆದ ಹನ್ನೆರಡು ದಿನಗಳಿಂದ ಅನಿರ್ದಿಷ್ಟಾವಧಿಗೆ ಅಹೋರಾತ್ರಿ ನಡೆಸುತ್ತಿರುವ ಸಮಗ್ರ ಉಪನಗರ ಯೋಜನೆ ಭೂಸ್ವಾಧೀನ ವಿರುದ್ಧದ ಹೋರಾಟವನ್ನು ಇನ್ನಷ್ಟು ಗಟ್ಟಿಗೊಳಿಸಲು ರೈತರು ಮುಂದಾಗಿದ್ದಾರೆ. ಘಟಾನುಘಟಿ ರಾಜಕಾರಣಿಗಳು, ರೈತನಾಯಕರನ್ನು ಹೋರಾಟಕ್ಕೆ ಆಹ್ವಾನಿಸಿ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ಪ್ರತಿಭಟನಾ ಸ್ಥಳದಿಂದ ರಾಜ್ಯ ಸರಕಾರದ ಮೇಲೆ ಒತ್ತಡ ಹಾಕಿಸಲಾಗುತ್ತಿದೆ.

ಭೈರಮಂಗಲ, ಕಂಚುಗಾರನಹಳ್ಳಿ ಗ್ರಾಪಂಗಳ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ತಕ್ಷಣವೇ ತುರ್ತು ಅಥವಾ ವಿಶೇಷ ಸಭೆಗಳಲ್ಲಿ ಕರೆದು ಅಧ್ಯಕ್ಷರ ಅನುಮತಿ ಮೇರೆಗೆ ವಿಷಯ ಪ್ರಸ್ತಾಪಿಸಿ ಭೂಸ್ವಾಧೀನ ವಿರುದ್ಧದ ನಿರ್ಣಯಗಳನ್ನು ಕೈಗೊಳ್ಳುವುದು. ಈ ನಿರ್ಣಯದ ಪ್ರತಿಗಳನ್ನು ಸಂಗ್ರಹಿಸಿ ಸರಕಾರಕ್ಕೆ ಕಳುಹಿಸುವ ಜತೆಗೆ ನ್ಯಾಯಾಲಯದ ಮುಂದಿಡುವ ಚಿಂತನೆಗಳು ಕೂಡ ನಡೆದಿವೆ. ಈ ನಿಟ್ಟಿನಲ್ಲಿ ಸೆ.23ರಂದು ಮಂಗಳವಾರ ನಡೆದ ಭೈರಮಂಗಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಭೂಸ್ವಾಧೀನದ ವಿರುದ್ಧ ನಿರ್ಣಯವನ್ನು ಪಾಸ್ ಮಾಡಿಕೊಳ್ಳುವ ಮೂಲಕ ಮೊದಲ ಹೆಜ್ಜೆ ಇಡಲಾಗಿದೆ. ಅಲ್ಲದೇ ರೈತರ ಎಲ್ಲಾ ಪ್ರಾತಿನಿಧಿಕ ಸಂಸ್ಥೆಗಳಲ್ಲೂ ಸದರಿ ವಿಷಯದ ಕುರಿತು ವಿರೋಧಿ ನಿರ್ಣಯವನ್ನು ತೆಗೆದುಕೊಳ್ಳುವಂತೆ ರೈತಮುಖಂಡರು ಕರೆ ಕೊಟ್ಟಿದ್ದಾರೆ.

**ಹೊಂದಾಣಿಕೆ ಕೊರತೆ, ಶಾಸಕರ ಸಭೆ ಮುಂದೂಡಿಕೆ:** ಭೈರಮಂಗಲ ಮತ್ತು ಕಂಚುಗಾರನಹಳ್ಳಿ ಗ್ರಾಪಂ ವ್ಯಾಪ್ತಿಯ ರೈತರ ಭೂಹಿತರಕ್ಷಣಾ ಸಂಘದ ನೇತೃತ್ವದಲ್ಲಿ ಬಲವಂತದ ಭೂಸ್ವಾಧೀನ ಕೈಬಿಡುವಂತೆ ಹಾಗೂ ಜೆಎಂಸಿ ಸರ್ವೆ ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಒತ್ತಾಯಿಸಿ ರೈತರು ಅನಿರ್ದಿಷ್ಟಾವಧಿ ಧರಣಿ ಕುಳಿತಿದ್ದಾರೆ. ಸ್ಥಳೀಯ ಶಾಸಕರು ಸೌಜನ್ಯಕ್ಕಾದರೂ ಒಮ್ಮೆ ಬಂದು ರೈತರ ಕಷ್ಟಸುಖ ಆಲಿಸಿಲ್ಲ ಎಂಬ ಆರೋಪಗಳಿಗೆ ಉತ್ತರಿಸಲು ಶಾಸಕ ಎಚ್.ಸಿ.ಬಾಲಕೃಷ್ಣರವರು ಸಂಘದ ಪದಾಧಿಕಾರಿಗಳ ಜತೆಗೆ ಸಾಧಕ ಬಾಧಕಗಳನ್ನು ಚರ್ಚಿಸಲು ಸೆ.23ರಂದು ರಾಮನಗರದ ಜಿಬಿಡಿಎ ಕಚೇರಿಯಲ್ಲಿ ಸಭೆ ಕರೆದಿದ್ದರು. ಇದಕ್ಕೆ ಕೆಲವು

### ಬಿಜೆಪಿಗೆ ಲಾಭವಾಗುವ ಮುನ್ಸೂಚನೆ

**ಭೈರಮಂಗಲದಲ್ಲಿ ಭೂಸ್ವಾಧೀನ ವಿರೋಧಿಸಿ ರೈತರು ನಡೆಸುತ್ತಿರುವ ಹೋರಾಟಕ್ಕೆ ಬಿಜೆಪಿ ತನ್ನ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ್ದು, ಇತ್ತೀಚೆಗೆ ವಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ ನಾರಾಯಣ, ಸಂಸದ ಡಾ.ಮಂಜುನಾಥ್ ಅವರುಗಳು ಭೇಟಿ ಕೊಟ್ಟು ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು. ಅಭೂತಪೂರ್ವ ಒಲವು ತೋರಿದ ರೈತರನ್ನು ಗಮನಿಸಿದ ಬಿಜೆಪಿ ವರಿಷ್ಠರು ಬೂತ್‌ಮಟ್ಟದಲ್ಲಿ ಪಕ್ಷ ಸಂಘಟಿಸಿ ಬಲಪಡಿಸುವಂತೆ ಸೂಚಿಸಿದ್ದರು. ಅಂತೆಯೇ ಆ ಭಾಗದ ಬಿಜೆಪಿ ಮುಖಂಡರು ಕೂಡ ಕಾರ್ಯಾಚರಣೆ ಆರಂಭಿಸಿದ್ದರು. ಹೋರಾಟದಲ್ಲಿ ಮಂಕಾಗಿದ್ದ ಜೆಡಿಎಸ್ ಕೊನೆಗೂ ಎಚ್ಚೆತ್ತು ತನ್ನ ಭದ್ರಕೋಟೆಯನ್ನು ಸುಸ್ಥಿತಿಯಲ್ಲಿರಿಸಿಕೊಳ್ಳಲು ಪ್ರತಿತಂತ್ರಕ್ಕೆ ಮುಂದಾಗಿದೆ.**



ರೈತ ಮುಖಂಡರು ಮಾನಸಿಕವಾಗಿ ಸಿದ್ಧರಾಗಿದ್ದರು. ಆದರೆ ಇದೇ ಸಮಯ ಕಾಯುತ್ತಿದ್ದ ಕೆಲವು ಜೆಡಿಎಸ್ ಕಾರ್ಯಕರ್ತರು ರಾಮನಗರದಲ್ಲಿ ಸಾವಿರಾರು ಜನರನ್ನು ಸೇರಿಸಿ ಶಾಸಕರ ವಿರುದ್ಧ ಪ್ರತಿಭಟನೆ ನಡೆಸಲು ಪೂರ್ವತಯಾರಿ ನಡೆಸಿದ್ದರು. ಇದರ ಬಗ್ಗೆ ಸುಳಿವು ದೊರೆತ ಹಿನ್ನೆಲೆಯಲ್ಲಿ ಶಾಸಕ ಬಾಲಕೃಷ್ಣ ಅವರು ಮಂಗಳವಾರ ಕರೆದಿದ್ದ ಸಭೆಯನ್ನು ದಿಢೀರ್ ಮುಂದೂಡಿದರು. ಇದರಿಂದ ಕೆಲವು ಹೋರಾಟಗಾರರು ಅಸಮಾಧಾನ ವ್ಯಕ್ತಪಡಿಸಿದ್ದು, ಮೊದಲಿಗೆ ಶಾಸಕರು ಸಭೆ ಕರೆದಿದ್ದು, ನಮ್ಮ ಅಹವಾಲು ಸಲ್ಲಿಸುವ ಜತೆಗೆ ಸಮಗ್ರವಾಗಿ ಚರ್ಚಿಸಿ ನಂತರ ನಿರ್ಣಯಿಸುವುದು ಸರಿಯಾದ ಕ್ರಮ. ಆದರೆ ಶಾಸಕರು ತಮ್ಮ ನಿಲುವು ಪ್ರಕಟಿಸುವ ಮುನ್ನವೇ ಸಾವಿರಾರು ಜನರನ್ನು ಅಲ್ಲಿ ಸೇರಿಸಿ ಅಶಾಂತಿ ವಾತಾವರಣ ಸೃಷ್ಟಿಸುವುದು ಸರಿಯಲ್ಲ ಎಂಬ ಮಾತುಗಳು ಕೇಳಿಬಂದಿವೆ. ಹಾಗಾಗಿ ನಮ್ಮ ಹೋರಾಟ ಶಾಂತಿಯುತ ಮತ್ತು ನ್ಯಾಯಬದ್ಧವಾಗಿದ್ದು ಆಯ್ದ ಮುಖಂಡರಷ್ಟೇ ಶಾಸಕರ ಸಭೆಗೆ ತೆರಳಬೇಕೆನ್ನುವ ಸ್ಪಷ್ಟ ನಿಲುವನ್ನು ಸಹ ರೈತ ಮುಖಂಡರು ತಿಳಿಸಿದ್ದಾರೆ.

### ಕುಮಾರಸ್ವಾಮಿ ವಿಡಿಯೋ ಭಾಷಣ

**ಕೇಂದ್ರ ಸಚಿವರೂ ಆದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಅನಾರೋಗ್ಯದ ಕಾರಣ ಭೈರಮಂಗಲ ಭೇಟಿ ಸಾಧ್ಯವಾಗಿಲ್ಲ. ಬದಲಿಗೆ ಅವರು ಪ್ರತಿಭಟನಾಕಾರರು ಹಾಗೂ ರೈತರನ್ನು ಉದ್ದೇಶಿಸಿ ಭಾಷಣ ಮಾಡುವುದನ್ನು ಎಲ್‌ಇಡಿ ಪರದೆಯ ಮೇಲೆ ಬಿತ್ತರಿಸಲು ಸಕಲ ಸಿದ್ಧತೆ ಕೂಡ ನಡೆದಿದೆ. 2006ರಲ್ಲಿ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ತೆಗೆದುಕೊಂಡ ಟೌನ್‌ಶಿಪ್ ಯೋಜನೆಯ ಪ್ರಮುಖಾಂಶಗಳು ನಂತರದ ಬೆಳವಣಿಗೆಗಳ ಕುರಿತು ಸ್ಪಷ್ಟ ಮಾಹಿತಿಯನ್ನು ಜನರ ಮುಂದೆ ಇಡಲಿದ್ದಾರೆ ಎಂದು ವಿಶ್ವಾಸನೀಯ ಮೂಲಗಳು ತಿಳಿಸಿವೆ.**

**ಹೋರಾಟಕ್ಕಿಳಿಯಲು ದೇವೇಗೌಡರ ಗ್ರೀನ್ ಸಿಗ್ನಲ್:** ಭೈರಮಂಗಲದಲ್ಲಿ ನಡೆಯುತ್ತಿರುವ ರೈತರ ಹೋರಾಟವನ್ನು ಬೆಂಬಲಿಸಲು ಮಾಜಿ ಪ್ರಧಾನಿ ಎಚ್. ಡಿ. ದೇವೇಗೌಡರು ಗ್ರೀನ್ ಸಿಗ್ನಲ್ ಕೊಟ್ಟಿದ್ದು, ಸೆ.28ರಂದು ಭಾನುವಾರ ಪ್ರತಿಭಟನಾ ಸ್ಥಳಕ್ಕೆ ಕರೆತರಲು ತಯಾರಿ ನಡೆದಿದೆ. ಭೈರಮಂಗಲದಲ್ಲಿ ದೊಡ್ಡ ವೇದಿಕೆ ನಿರ್ಮಿಸುವ ಜತೆಗೆ ದೊಡ್ಡಗೌಡರನ್ನು ಮೆರವಣಿಗೆಯ ಮೂಲಕ ವೇದಿಕೆಗೆ ಕರೆತರುವ ಸಿದ್ಧತೆ ನಡೆದಿದೆ. ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರ ಉಪಸ್ಥಿತಿಯಲ್ಲಿ ಮಾಜಿ ಶಾಸಕ ಎ.ಮಂಜುನಾಥ್ ಹಾಗೂ ಇನ್ನಿತರ ಪ್ರಮುಖ ಜೆಡಿಎಸ್ ನಾಯಕರು ಪ್ರತಿಭಟನೆಗೆ ಸಾಥ್ ನೀಡಲಿದ್ದಾರೆ ಎಂದು ಹೇಳಲಾಗುತ್ತಿದೆ.

ಅಂತರಾಳದಿಂದ..
EDITORIAL

# ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ; ರಾಜಕೀಯ ಕಂದಕ ಹೆಚ್ಚಿಸಬೇಡಿ




ಬೆಂಗಳೂರಿನ ರಸ್ತೆ ಗುಂಡಿಗಳು ರಾಜ್ಯ ರಾಜಕಾರಣದ ಸ್ಥಿತಿಗತಿಯ ಸಂಕೇತಗಳೂ ಹೌದು. ರಸ್ತೆ ಗುಂಡಿಗಳನ್ನು ಮುಚ್ಚುವ ವಿಷಯವೂ ರಾಜಕೀಯದ ಹಗ್ಗಜಗ್ಗಾಟ ಆಗಬಾರದು. ಆ ಪಕ್ಷದ ಆಕ್ರೋಶದಲ್ಲಿ ಹುರುಳಿಲ್ಲದಿಲ್ಲ. ರಸ್ತೆಗಳು ಮತ್ತು ಅವುಗಳಲ್ಲಿನ ಗುಂಡಿಗಳು ರಾಜಕೀಯ ಪಕ್ಷಗಳ ನಡುವೆ ತಾರತಮ್ಯ ಎಸಗುವುದಿಲ್ಲ. ತಮ್ಮ ಕ್ಷೇತ್ರವನ್ನು ಯಾವ ಪಕ್ಷದ ಮುಖಂಡ ಪ್ರತಿನಿಧಿಸುತ್ತಿದ್ದರೂ, ರಸ್ತೆಗುಂಡಿಗಳು ಈಗ ಬೆಂಗಳೂರಿಗರೆಲ್ಲರ ಸಂಕಷ್ಟ, ವ್ಯಂಗ್ಯವೆಂದರೆ, ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದಾಗ ಕಾಂಗ್ರೆಸ್ ಪಕ್ಷವು ಅಂದು ಸರ್ಕಾರದ ಚುಕ್ಕಾಣಿ ಹಿಡಿದಿದ್ದ ಬಿಜೆಪಿಯ ಮೇಲೆ ಇದೇ ಬಗೆಯ ಆರೋಪವನ್ನು ಹೊರಿಸಿತ್ತು. ಅನುದಾನದ ಹಂಚಿಕೆಯಲ್ಲಿ ಈ ಬಗೆಯ ವ್ಯತ್ಯಾಸಗಳು ಇರುವುದು ಕಳವಳಕಾರಿ ಬೆಳವಣಿಗೆಯೊಂದನ್ನು ಹೇಳುತ್ತಿವೆ: ಅದು ಚುನಾವಣೆಗಳಲ್ಲಿ ಲಾಭ ಪಡೆದುಕೊಳ್ಳುವ ಉದ್ದೇಶದಿಂದ ಅಭಿವೃದ್ಧಿ ಕೆಲಸಗಳನ್ನು ಅಸ್ತ್ರವನ್ನಾಗಿ ಬಳಕೆ ಮಾಡಿಕೊಳ್ಳುವುದು. 'ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಚುನಾವಣೆ ನಡೆಯಬೇಕಿದೆ. ಈ ಸಂದರ್ಭದಲ್ಲಿ ನಗರದ ಮೂಲಸೌಕರ್ಯ ಅಗತ್ಯಗಳಿಗೆ ಸ್ಪಂದಿಸುವುದಕ್ಕಿಂತ ಹೆಚ್ಚಾಗಿ ಬಿಜೆಪಿಯನ್ನು ದುರ್ಬಲಗೊಳಿಸುವ ಉದ್ದೇಶವನ್ನು ಕಾಂಗ್ರೆಸ್ ಪಕ್ಷವು ಹೊಂದಿರುವಂತೆ ಕಾಣುತ್ತಿದೆ. ಹೀಗೆ ಮಾಡಿದಾಗ ಆಡಳಿತದ ಮೂಲ ಪರಿಕಲ್ಪನೆಗೇ ಪೆಟ್ಟು ಕೊಟ್ಟಂತಾಗುತ್ತದೆ. ಕರ್ನಾಟಕದ ಆರ್ಥಿಕ ಚಟುವಟಿಕೆಗಳ ಹೃದಯದಂತೆ ಇರುವ ಬೆಂಗಳೂರು, ರಾಜ್ಯದ ತೆರಿಗೆ ವರಮಾನಕ್ಕೆ, ಇಲ್ಲಿನ ಉದ್ಯೋಗ ಮಾರುಕಟ್ಟೆಗೆ ಅತಿಹೆಚ್ಚಿನ ಕೊಡುಗೆಯನ್ನು ನೀಡುತ್ತಿದೆ.

**ಬೆಂಗಳೂರಿನ ರಸ್ತೆಗಳ ರಿಪೇರಿಗೆ ರೂ.1,100 ಕೋಟಿ ಬಿಡುಗಡೆ ಮಾಡುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿರುವುದು, ರಸ್ತೆ ಗುಂಡಿಗಳಿಂದಾಗಿ ಹಾಗೂ ಸಂಚಾರ ದಟ್ಟಣೆಯಿಂದಾಗಿ ಹೈರಾಣಾಗಿರುವ ಬೆಂಗಳೂರಿನ ಜನರಲ್ಲಿ ಸಮಾಧಾನ ಮೂಡಿಸಬೇಕಿತ್ತು. ಆದರೆ, ಅನುದಾನ ಹಂಚಿಕೆಯಲ್ಲಿ ತಾರತಮ್ಯ ಆಗಿದೆ ಎಂದು ಬಿಜೆಪಿ ಆರೋಪಿಸುವುದರೊಂದಿಗೆ ಶಿವಕುಮಾರ್ ಅವರ ಈ ಘೋಷಣೆಯು ಇನ್ನೊಂದು ರಾಜಕೀಯ ವಿವಾದಕ್ಕೆ ಕಾರಣವಾಗಿದೆ. ಕಾಂಗ್ರೆಸ್ ಶಾಸಕರು ಇರುವ ಕ್ಷೇತ್ರಗಳಿಗೆ ತಲಾ 250 ಕೋಟಿ ಸಿಗಲಿದೆ, ಬಿಜೆಪಿಯ ಶಾಸಕರು ಇರುವ ಕ್ಷೇತ್ರಗಳಿಗೆ ತಲಾ 225 ಕೋಟಿ ಸಿಗಲಿದೆ ಎಂದು ವರದಿಯಾಗಿದೆ. ಇದು ಮಲತಾಯಿ ಧೋರಣೆ ಎಂದು ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ.**

ಈ ನಗರಕ್ಕೆ ಬೇಕಿರುವುದು ಸಮಾನ ಅಭಿವೃದ್ಧಿ, ರಾಜಕೀಯ ಅಗತ್ಯಗಳಿಗೆ ತಕ್ಕಂತೆ ನಡೆಯುವ ಅಸಮಾನ ಅಭಿವೃದ್ಧಿ ಕಾರ್ಯಗಳು ಇಲ್ಲಿಗೆ ಬೇಕಿಲ್ಲ. 2023ರಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿದ್ದಾಗ ಅಂದು ಆಡಳಿತದ ಚುಕ್ಕಾಣಿ ಹಿಡಿದಿದ್ದ ಬಿಜೆಪಿಯು ಬೆಂಗಳೂರಿನ ರಸ್ತೆಗಳಿಗಾಗಿ ರೂ. 6,000 ಕೋಟಿ ಅನುದಾನ ನೀಡಿತ್ತು. ಆ ಹಣದಲ್ಲಿ ಹೆಚ್ಚಿನ ಪಾಲು. ಗುಂಡಿಗಳನ್ನು ಮುಚ್ಚಲು ವಿನಿಯೋಗ ಆಯಿತು. ಹೀಗಿದ್ದರೂ ಈಗ ಬೆಂಗಳೂರಿನ ಎಲ್ಲೆಡೆ ರಸ್ತೆಯಲ್ಲಿ ಗುಂಡಿಗಳಿವೆ. ಬೆಂಗಳೂರಿನ ರಸ್ತೆಗಳನ್ನು ಗುಂಡಿಮುಕ್ತ ಆಗಿಸಲಾಗುತ್ತದೆ ಎಂಬ ಆಶ್ವಾಸನೆಗಳನ್ನು ಇಲ್ಲಿನ ಜನ ಕೇಳುತ್ತಲೇ ಇದ್ದಾರೆ. ಆದರೆ ಆಶ್ವಾಸನೆ ಈಡೇರಿಸುವ ಸಾಮರ್ಥ್ಯವು ರಾಜಕೀಯ ಪಕ್ಷಗಳಿಗೆ ಇದೆ ಎಂಬ ನಂಬಿಕೆಯು ಅವರಲ್ಲಿ ಈಗ ಉಳಿದಿಲ್ಲ.

'ಪ್ರತಿ ಕ್ಷೇತ್ರಕ್ಕೂ ಅನುಕೂಲ ಆಗುತ್ತದೆ' ಎಂದು ಶಿವಕುಮಾರ್ ಭರವಸೆ ಇತ್ತಿದ್ದಾರೆ. ಆದರೆ ಅನುದಾನ ಹಂಚಿಕೆಯು ಸಮಾನವಾಗಿ ಇಲ್ಲದಿದ್ದರೆ ಈ ಭರವಸೆ ಟೊಳ್ಳಾಗಿ ಕಾಣುತ್ತದೆ. ಅನುದಾನ ಹಂಚಿಕೆಯಲ್ಲಿನ ಅಸಮಾನತೆಯು ಅಭಿವೃದ್ಧಿ ಕಾರ್ಯಗಳೂ ಅಸಮಾನ ಆಗುವಂತೆ ಮಾಡುತ್ತವೆ. ನಗರದ ಕೆಲವು ಪ್ರದೇಶಗಳಲ್ಲಿ ಕಾಮಗಾರಿಗಳು ಚೆನ್ನಾಗಿ ಆಗುತ್ತವೆ. ಇನ್ನು ಕೆಲವು ಪ್ರದೇಶಗಳಲ್ಲಿ ಕಾಮಗಾರಿಗಳು ನಿರ್ಲಕ್ಷ್ಯಕ್ಕೆ ಗುರಿಯಾಗುತ್ತವೆ. ಜಾಗತಿಕ ಮಟ್ಟದಲ್ಲಿ ಹೆಸರು ಸಂಪಾದಿಸಿರುವ ನಗರವೊಂದರ ಆಡಳಿತ ನಡೆಸುವ ಬಗೆ ಇದಲ್ಲ. ಹೂಡಿಕೆ ಮತ್ತು ಹೊಸ ಆವಿಷ್ಕಾರಗಳ ಕೇಂದ್ರ ಬೆಂಗಳೂರು. ಆದರೆ ಈ ನಗರದ ಮಹತ್ವಾಕಾಂಕ್ಷೆಗಳನ್ನು ಮೂಲಸೌಕರ್ಯದ ಕೊರತೆ ಹಾಗೂ ಕ್ಷುಲ್ಲಕ ರಾಜಕೀಯವು ತಿಂದುಹಾಕುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರು ರಾಜಕೀಯ ಗಡಿಗಳನ್ನು ಮೀರಿ. ಮುತ್ಸದ್ದಿಗಳಂತೆ ಕೆಲಸ ಮಾಡಲು ಇದು ಸುಸಮಯ. ನ್ಯಾಯಸಮ್ಮತವಾದ ಹಾಗೂ ಸಮಾನತೆಯ ಸಮಾಜವನ್ನು ನಿರ್ಮಿಸುವ ಬಗ್ಗೆ ಅವರು ಆಗಾಗ ಮಾತನಾಡುತ್ತಾರೆ. ಈ ಮಾತುಗಳು ರಸ್ತೆಯಂತಹ ತೀರಾ ಅಗತ್ಯ ಮೂಲಸೌಕರ್ಯ ನಿರ್ಮಾಣದ ಮೂಲಕ ಕೃತಿರೂಪಕ್ಕೆ ಬರಬೇಕು. ಸಂಚಾರ ದಟ್ಟಣೆ, ರಸ್ತೆಯ ಸ್ಥಿತಿ, ಜನಸಂಖ್ಯೆಯಂತಹ ಸಂಗತಿಗಳನ್ನು ಪರಿಶೀಲಿಸಿ ಅನುದಾನ ಬಿಡುಗಡೆ ಮಾಡಬೇಕು: ಅನುದಾನ ಹಂಚಿಕೆಗೆ ಪಕ್ಷವು ಆಧಾರವಾಗಬಾರದು. ರಸ್ತೆ ಗುಂಡಿಗಳನ್ನು ಮುಚ್ಚಲಿ ಎಂದು ಜನ ಬಯಸುತ್ತಾರೆಯೇ ವಿನಾ ರಾಜಕೀಯ ಕಂದಕಗಳು ಹೆಚ್ಚಾಗಲಿ ಎಂದು ಅಪೇಕ್ಷಿಸುವುದಿಲ್ಲ. ಬೆಂಗಳೂರು ಬಹಳ ತುರ್ತಾಗಿ ರಿಪೇರಿ ಆಗಬೇಕು. ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ತಾರತಮ್ಯ ಬೇಡ.

# ರಾಮಾಯಣ



## ಶ್ರೀ ರಾಮನಿಂದ ರಾಕ್ಷಸಸೇನೆಯ ಸಂಹಾರ

• ಹಿಂದಿನ ಸಂಚಿಕೆಯಿಂದ

### 119 ನೆಯ ಅಧ್ಯಾಯ

ಸಹಿಸುವುದಕ್ಕಾದರೂ ಶಕ್ಯವಲ್ಲದ ಅಪರಿಮಿತವಾದ ಬಾಣಗಳನ್ನು ಆ ರಾಕ್ಷಸರ ಮೇಲೆ ಲೀಲಾಮಾತ್ರದಿಂದ ಪ್ರಯೋಗಿಸಿದನು. ಆ ಬಾಣಗಳು ಯಮಪಾಶದಂತೆ ಆ ರಾಕ್ಷಸರ ಶರೀರಗಳನ್ನು ತಾಕಿ ಉಚ್ಚಳಿಸಿ ಅವರ ಪ್ರಾಣಾಪಹಾರವನ್ನು ಮಾಡಿ ಅವರ ರಕ್ತದಿಂದ ನೆನೆದು ಅಂತರಿಕ್ಷ ಮಾರ್ಗದಲ್ಲಿ ಹೋಗುತ್ತ ಉರಿಯುವ ಬೆಂಕಿಯಂತೆ ಬತ್ತಿದ್ದವು. ಶ್ರೀರಾಮನು ಆಕರ್ಣಾಂತವಾಗಿ ಎಳೆದ ಮಂಡಲಾಕಾರವಾದ ಬಿಲ್ಲಿನಿಂದ ಎಸೆದ ಲೆಕ್ಕವಿಲ್ಲದಷ್ಟು ಬಾಣಗಳಿಂದ ಅನೇಕ ಮಂದಿ ರಾಕ್ಷಸರು ನೆಲಕ್ಕೆ ಬೀಳುತ್ತಿದ್ದರು. ಅವರ ಜಿಲ್ಲುಗಳು, ಶಿರಸ್ಸುಗಳು, ಬಾಹುಗಳು, ಹಸ್ತಾಭರಣಸಹಿತವಾದ ಕೈಗಳು, ಆನೆಯ ಸೊಂಡಿಲೋಪಾದಿಯಲ್ಲಿದ್ದ ತೊಡೆಗಳು ಮೊದಲಾದ ಸರ್ವಾಂಗಗಳೂ ಕತ್ತರಿಸಿ ಬೀಳುತ್ತಿದ್ದವು. ಲೆಕ್ಕವಿಲ್ಲದಷ್ಟು ರಥಿಕರೂ ಸಾರಥಿಗಳೂ ಮಾವುತರೂ ರಾವುತರೂ ಕಾಲಾಳುಗಳೂ ಯಮನ ಮಂದಿರಕ್ಕೆ ಹೋದರು. ಈ ರೀತಿಯಲ್ಲಿ ಶ್ರೀರಾಮನು ಪ್ರಯೋಗಿಸಿದ ಕೂರಲಗುಗಳುಳ್ಳ ಕವಣೆಯಂಬುಗಳಿಂದ ಗಾಯವಡೆದ ರಾಕ್ಷಸರು ಭಯದಿಂದ ಗೋಳಿಡುತ್ತಿರಲು ಖರನ ಸೇನೆಯು ಕಂಗೆಟ್ಟು ಕಾಡುಗಿಚ್ಚಿನಿಂದ ಬೆಂದ ವನದಂತೆ ವ್ಯಥೆಪಡುತ್ತಿತ್ತು.

ಆ ಬಳಿಕ ಮತ್ತಗಜಗಳಂತೆ ಮಹಾಬಲವಂತರಾದ ಅನೇಕ ರಾಕ್ಷಸಭಟರು ತ್ರಿಶೂಲ ಪರಶು ಕೊಡಲಿಗಳನ್ನು ಶ್ರೀರಾಮನ ಮೇಲೆ ಪ್ರಯೋಗಿಸಿದರು. ಆತನು ಆ ಆಯುಧಗಳನ್ನು ತನ್ನ ಬಾಣಗಳಿಂದ ಕತ್ತರಿಸಿ ಕೆಡಹಿ ಕೆಲವು ಬಾಣಗಳಿಂದ ಅವರ ಶಿರಸ್ಸುಗಳನ್ನೂ ಶರ ಬಿಲ್ಲು ಬಾಣ ಕವಚಗಳನ್ನೂ ಕತ್ತರಿಸಿದನು. ಪುನಃ ರಾಕ್ಷಸರ ಮೇಲೆ ದಾಣಗಳನ್ನು ಪ್ರಯೋಗಿಸಲು ಆ ಬಾಣಗಳಿಂದ ಗಾಯವಡೆದು ಅನೇಕರು ಕೊಡಲಿಯ ಪೆಟ್ಟಿನಿಂದ ಮುರಿದುಬಿದ್ದ ವೃಕ್ಷಗಳಂತೆ ಬೀಳುತ್ತಿದ್ದರು. ಕೆಲವು ರಾಕ್ಷಸರು ಹೆದರಿ ಖರನ ಬಳಿಗೆ ಓಡಿ ಹೋದರು.

ಹೀಗೆ ಮುರಿದೋಡುತ್ತಿದ್ದ ರಾಕ್ಷಸರನ್ನು ಕಂಡು ದೂಷಣನು ಸಂತವಿಟ್ಟು ಶ್ರೀರಾಮನನ್ನು ಅಟ್ಟಿಬರಲು ಆ ರಾಕ್ಷಸರು ಚೇತರಿಸಿಕೊಂಡು ದೂಷಣನಿಗೆ ಸಹಾಯವಾಗಿ ಬಂದು ಶ್ರೀರಾಮನನ್ನು ಸುತ್ತಿಕೊಂಡು ಅವನ ಮೇಲೆ ಅಂಬುಗಳನ್ನು ಎಸೆದರು. ಆ ಶರವರ್ಷವನ್ನು ನೋಡಿ ಶ್ರೀರಾಮನು ಗಾಂಧರ್ವಾಸ್ತ್ರವನ್ನು ಆ ರಾಕ್ಷಸರ ಮೇಲೆ ಪ್ರಯೋಗಿಸಿದನು. ಅವನ ಬಿಲ್ಲಿನಿಂದ ಹೊರಬರುತ್ತಿದ್ದ ಬಾಣಗಳು ದಶದಿಕ್ಕುಗಳನ್ನು ವ್ಯಾಪಿಸಿದವು. ರಾಮನು ಬತ್ತಳಿಕೆಗಳಿಂದ ಅಂಬುಗಳನ್ನು ತೆಗೆಯುವುದನ್ನೂ ಬಿಲ್ಲಿನಲ್ಲಿ ಹೂಡಿ ಎಸೆಯುವುದನ್ನೂ ರಾಕ್ಷಸರು ಕಾಣದಾದರು. ರಾಮನ ಆ ಬಾಣಗಳು ಅಂತರಿಕ್ಷಮಾರ್ಗದಲ್ಲಿ ವ್ಯಾಪಿಸಿ ಸೂರ್ಯಮಂಡಲವನ್ನು ಮುಚ್ಚಿ ಅಂಧಕಾರವನ್ನುಂಟು ಮಾಡಿದವು.

ಮುಂದುವರಿಯುವುದು...

# ನವರಾತ್ರಿ ಆಚರಣೆಯ ಮಹತ್ವ ಆಚರಿಸುವ ಪದ್ಧತಿ

■ ಶ್ರೀ. ವಿನೋದ ಕಾಮತ್

ಜಗತ್ತಿನಲ್ಲಿ ಯಾವಾಗ ತಾಮಸಿಕ, ಅಸುರೀ ಮತ್ತು ಕ್ರೂರ ಜನರು ಪ್ರಬಲರಾಗಿ ಸಾತ್ತ್ವಿಕ ಮತ್ತು ಧರ್ಮನಿಷ್ಠ ಸಜ್ಜನರನ್ನು ಪೀಡಿಸುತ್ತಾರೆಯೋ, ಆಗ ದೇವಿಯು ಧರ್ಮಸಂಸ್ಥಾಪನೆಗಾಗಿ ಪುನಃ ಪುನಃ ಅವತಾರ ತಾಳುತ್ತಾಳೆ. ಇದು ಆ ದೇವಿಯ ವ್ರತವಾಗಿದೆ.

ನವರಾತ್ರಿಯಲ್ಲಿ ದೇವಿತತ್ತ್ವವು ಎಂದಿಗಿಂತ 1000 ಪಟ್ಟು ಹೆಚ್ಚು ಕಾರ್ಯನಿರತವಾಗಿರುತ್ತದೆ. ದೇವಿತತ್ತ್ವದ ಲಾಭವನ್ನು ಆದಷ್ಟು ಹೆಚ್ಚು ಪಡೆದುಕೊಳ್ಳಲು ನವರಾತ್ರಿಯ ಕಾಲದಲ್ಲಿ 'ಶ್ರೀ ದುರ್ಗಾದೇವ್ಯೈ ನಮಃ।' ಎಂಬ ನಾಮಜಪವನ್ನು ಆದಷ್ಟು ಹೆಚ್ಚು ಮಾಡಬೇಕು.

**ನವರಾತ್ರಿ ವ್ರತವನ್ನು ಆಚರಿಸುವ ಪದ್ಧತಿ:** ಈ ವ್ರತಕ್ಕೆ ಅನೇಕ ಕುಟುಂಬಗಳಲ್ಲಿ ಕುಲಾಚಾರದ ಸ್ವರೂಪವಿರುತ್ತದೆ. ಆಶ್ವಯುಜ ಶುಕ್ಲ ಪಾಡ್ಯಕ್ಕೆ ಈ ವ್ರತವು ಪ್ರಾರಂಭವಾಗುತ್ತದೆ. ಮನೆಯಲ್ಲಿ ಪವಿತ್ರ ಜಾಗದಲ್ಲಿ ಒಂದು ಪೀಠವನ್ನು ತಯಾರಿಸಿ ಅದರ ಮೇಲೆ ಸಿಂಹಾಸನದ ಮೇಲೆ ಕುಳಿತಿರುವ ಅಷ್ಟಭುಜದೇವಿಯನ್ನು ಹಾಗೂ ನವಾರ್ಣವಯಂತ್ರವನ್ನು ಸ್ಥಾಪಿಸುತ್ತಾರೆ. ಯಂತ್ರದ ಪಕ್ಕದಲ್ಲಿ ಘಟಸ್ಥಾಪನೆ ಮಾಡಿ ಅದಕ್ಕೂ ದೇವಿಗೂ ವಿಧಿಪೂರ್ವಕ ಪೂಜೆಯನ್ನು ಮಾಡುತ್ತಾರೆ. ನವರಾತ್ರಿ ಮಹೋತ್ಸವದಲ್ಲಿ ಕುಲಾಚಾರದಂತೆ ಘಟಸ್ಥಾಪನೆ ಮತ್ತು ಮಾಲಾಬಂಧನ ಮಾಡಬೇಕು. ಹೊಲದಲ್ಲಿನ ಮಣ್ಣನ್ನು ತಂದು ಅದರಿಂದ ಎರಡು ಬೆರಳುಗಳ ಗಾತ್ರದಷ್ಟು ಚೌಕಾಕಾರ ಮಾಡಿ ಅದರಲ್ಲಿ ಐದು ಅಥವಾ ಏಳು ಧಾನ್ಯಗಳನ್ನು ಹಾಕಬೇಕು. ಜೋಳ, ಗೋಧಿ, ಎಳ್ಳು, ಹೆಸರು, ನವಣೆ, ತೃಣ ಧಾನ್ಯ ಮತ್ತು ಕಡಲೆ ಇವು ಸಪ್ತಧಾನ್ಯಗಳಾಗಿವೆ. ಮಣ್ಣಿನ ಅಥವಾ ತಾಮ್ರದ ಕಲಶದಲ್ಲಿ ನೀರು, ಗಂಧ, ಹೂವು, ಗರಿಕೆ, ಅಕ್ಷತೆ, ಅಡಿಕೆ, ಪಂಚಪಲ್ಲವ, ಪಂಚರತ್ನ ಅಥವಾ ನಾಣ್ಯ ಮುಂತಾದ ವಸ್ತುಗಳನ್ನು ಹಾಕಬೇಕು. ಸಪ್ತಧಾನ್ಯ ಮತ್ತು ಕಲಶ ಸ್ಥಾಪನೆಯ ವೈದಿಕ ಮಂತ್ರಗಳು ಗೊತ್ತಿಲ್ಲದಿದ್ದರೆ, ಪುರಾಣೋಕ್ತ ಮಂತ್ರಗಳನ್ನು ಹೇಳಬೇಕು. ಅವೂ ಬರದಿದ್ದರೆ ಆಯಾ ವಸ್ತುಗಳ ಹೆಸರು ಹೇಳಿ ಸಮರ್ಪಯಾಮಿ ಎಂದು ನಾಮಮಂತ್ರದ ಉಪಯೋಗವನ್ನು ಮಾಡಬೇಕು. ಕಲಶದೊಳಗೆ ತಲುಪುವಂತೆ ಮಾಲೆಯನ್ನು ಕಟ್ಟಬೇಕು. ಒಂಭತ್ತು ದಿನಗಳವರೆಗೆ ಪ್ರತಿದಿನ ಕುಮಾರಿಯ ಪೂಜೆಯನ್ನು ಮಾಡಿ ಅವಳಿಗೆ ಭೋಜನವನ್ನು ಕೊಡಬೇಕು.



ಮುತ್ತೈದೆ ಎಂದರೆ ಪ್ರಕಟ ಶಕ್ತಿ ಮತ್ತು ಕುಮಾರಿ ಎಂದರೆ ಅಪ್ರಕಟ ಶಕ್ತಿ. ಮುತ್ತೈದೆಯಲ್ಲಿ ಪ್ರಕಟ ಶಕ್ತಿಯು ಸ್ವಲ್ಪ ಅಪವ್ಯಯವಾಗುವುದರಿಂದ ಅವಳಿಗಿಂತ ಕುಮಾರಿಯಲ್ಲಿ ಶಕ್ತಿಯ ಪ್ರಮಾಣವು ಜಾಸ್ತಿಯಿರುತ್ತದೆ. ಅಖಂಡ ದೀಪಪ್ರಜ್ವಲನೆ, ಆ ದೇವತೆಯ ಮಹಾತ್ಮೆಯ ಪಠಣ, ಸಪ್ತ ಶತಿಪಾಠ, ದೇವಿಭಾಗವತ, ಬ್ರಹ್ಮಾಂಡಪುರಾಣದಲ್ಲಿನ ಲಲಿತೋಪಾಖ್ಯಾನವನ್ನು ಕೇಳುವುದು, ಲಲಿತಾಪೂಜೆ, ಸರಸ್ವತಿಪೂಜೆ, ಉಪವಾಸ, ಜಾಗರಣೆ ಮುಂತಾದ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಅವರವರ ಶಕ್ತಿಸಾಮರ್ಥ್ಯಕ್ಕನುಸಾರವಾಗಿ ನವರಾತ್ರಿ ಮಹೋತ್ಸವವನ್ನು ಆಚರಿಸುತ್ತಾರೆ. ಭಕ್ತನಿಗೆ ಉಪವಾಸವಿದ್ದರೂ ದೇವತೆಗೆ ಎಂದಿನಂತೆ ಅನ್ನದ ನೈವೇದ್ಯವನ್ನು ಮಾಡಬೇಕು. ಈ ಕಾಲದಲ್ಲಿನ ಆಚಾರದ ಒಂದು ಉತ್ಕೃಷ್ಟ ಅಂಗವೆಂದು ಗಡ್ಡ-ಮೀಸೆಗಳ ಕೂದಲು ಮತ್ತು ತಲೆಯ ಕೂದಲನ್ನು ಕತ್ತರಿಸದಿರುವುದು, ಕಠೋರ ಬ್ರಹ್ಮಚರ್ಯ, ಮಂಚ ಮತ್ತು ಹಾಸಿಗೆಯ ಮೇಲೆ ಮಲಗದಿರುವುದು, ಗಡಿಯನ್ನು ಉಲ್ಲಂಘಿಸದಿರುವುದು, ಪಾದರಕ್ಷೆಗಳನ್ನು ಉಪಯೋಗಿಸದಿರುವುದು ಮುಂತಾದ ನಿಯಮಗಳ ಪಾಲನೆಯನ್ನು ಮಾಡುತ್ತಾರೆ.

ನವರಾತ್ರಿಯ ಸಂಖ್ಯೆಗೆ ಒತ್ತುಕೊಟ್ಟು ಕೆಲವರು ಕೊನೆಯ ದಿನವೂ ದೇವಿಯನ್ನು ಇಡುತ್ತಾರೆ; ಆದರೆ ಶಾಸ್ತ್ರಕ್ಕನುಸಾರ ಕೊನೆಯ ದಿನ ನವರಾತ್ರಿಯ ವಿಸರ್ಜನೆಯಾಗುವುದು ಆವಶ್ಯಕವಾಗಿದೆ.

ಆ ದಿನ ಸಮಾರಾಧನೆ ಆದ ನಂತರ ಸಮಯವಿದ್ದರೆ ಅದೇ ದಿನ ಎಲ್ಲಾ ದೇವರನ್ನು ತೆಗೆದು ಅಭಿಷೇಕ ಮತ್ತು ಷೋಡಶೋಪಚಾರ ಪೂಜೆಯನ್ನು ಮಾಡಬೇಕು, ಸಮಯವಿಲ್ಲದಿದ್ದರೆ ಮರುದಿನ ಎಲ್ಲಾ ದೇವರಿಗೂ ಪೂಜಾಭಿಷೇಕಗಳನ್ನು ಮಾಡಬೇಕು. ದೇವಿಯ ಮೂರ್ತಿಯ ವಿಸರ್ಜನೆಯ ಸಮಯದಲ್ಲಿ ಬಿತ್ತಿದ ಸಪ್ತಧಾನ್ಯಗಳ ಸಸಿಗಳನ್ನು ದೇವರಿಗೆ ಅರ್ಪಿಸುತ್ತಾರೆ ಹಾಗೂ 'ಶಾಕಂಭರಿದೇವಿ' ಎಂದು ತಿಳಿದು ಸ್ತ್ರೀಯರು ಅವುಗಳನ್ನು ತಲೆಯಲ್ಲಿ ಧರಿಸಿ ವಿಸರ್ಜನೆಗೆ ತೆಗೆದುಕೊಂಡು ಹೋಗುತ್ತಾರೆ. ನವರಾತ್ರಿಯನ್ನು ಪ್ರಾರಂಭಿಸುವಾಗ ಅಥವಾ ಸಮಾಪ್ತಿ ಮಾಡುವಾಗ ದೇವರ ಉದ್ವಾರ್ಜನೆಯನ್ನು ಅವಶ್ಯ ಮಾಡಬೇಕು.

ಉದ್ವಾರ್ಜನೆ ಮಾಡಲು ನಿತ್ಯದಂತೆ ನಿಂಬೆಕಾಯಿ, ಭಸ್ಮ ಮುಂತಾದವುಗಳನ್ನು ಉಪಯೋಗಿಸಬೇಕು. ರಂಗೋಲಿ ಅಥವಾ ಪಾತ್ರೆ ತಿಕ್ಕುವ ಚೂರ್ಣವನ್ನು ಉಪಯೋಗಿಸಬಾರದು. ಕೊನೆಗೆ, ಸ್ಥಾಪಿಸಿದ ಘಟ ಮತ್ತು ದೇವಿಯನ್ನು ವಿಸರ್ಜಿಸಬೇಕು. ನವರಾತ್ರಿ ಅಥವಾ ಇತರ ಧಾರ್ಮಿಕ ವಿಧಿಗಳಲ್ಲಿ ದೀಪವು ಯಾವಾಗಲೂ ಉರಿಯುತ್ತಿರಬೇಕು. ಇದು ಪೂಜಾವಿಧಿಯ ಅಂಗವಾಗಿದೆ. ಆದುದರಿಂದ ದೀಪವು ಗಾಳಿ, ಎಣ್ಣೆ ಕಡಿಮೆಯಾಗುವುದು, ಉರಿದು ಕಪ್ಪಾಗುವುದು ಮುಂತಾದ ಕಾರಣಗಳಿಂದಾಗಿ ನಂದಿದರೆ ಆ ಕಾರಣವನ್ನು ದೂರಗೊಳಿಸಿ ದೀಪವನ್ನು ಪುನಃ ಉರಿಸಬೇಕು ಮತ್ತು ಪ್ರಾಯಶ್ಚಿತ್ತವೆಂದು ಅಧಿಷ್ಠಾನದೇವತೆಯ 108 ಅಥವಾ 1008 ರಷ್ಟು ಜಪ ಮಾಡಬೇಕು.

**ದೇವಿಗೆ ಮುಂದಿನಂತೆ ಪ್ರಾರ್ಥನೆಯನ್ನು ಮಾಡಬೇಕು:** ಹೇ ದೇವಿ, ನಾವು ಶಕ್ತಿಹೀನರಾಗಿದ್ದೇವೆ, ಅಪರಿಮಿತ ಭೋಗವನ್ನು ಭೋಗಿಸಿ ಮಾಯಾಸಕ್ತರಾಗಿದ್ದೇವೆ. ಹೇ ಮಾತೆ, ನೀನು ನಮಗೆ ಬಲವನ್ನು ನೀಡುವವಳಾಗು, ನಿನ್ನ ಶಕ್ತಿಯಿಂದ ನಾವು ಅಸುರೀ ಪ್ರವೃತ್ತಿಯನ್ನು ನಾಶ ಮಾಡುವಂತಾಗಲಿ.




# ವೀಳ್ಯದೆಲೆ ತುಂಬಾನೇ ಒಳ್ಳೆಯದು



ವೀಳ್ಯದೆಲೆ ಅಥವಾ ಪಾನ್ ಅನ್ನು ಕೇವಲ ಬಾಯಿಯನ್ನು ಫ್ರೆಶ್ ಆಗಿಸಲು ಸೇವಿಸುವುದಲ್ಲ, ಇದರಿಂದ ಹಲವಾರು ಆರೋಗ್ಯ ಪ್ರಯೋಜನಗಳಿವೆ, ಅದರಲ್ಲೂ ಈ ಎಲ್ಲಾ ಆರೋಗ್ಯ ಸಮಸ್ಯೆ ಇರುವವರಿಗೆ ಬಹಳ ಒಳ್ಳೆಯದು ಎನ್ನಲಾಗುತ್ತದೆ. ವೀಳ್ಯದೆಲೆ ಬಗ್ಗೆ ಪ್ರತಿಯೊಬ್ಬರಿಗೂ ಗೊತ್ತೇ ಇದೆ. ಇದೊಂದು ಔಷಧೀಯ ಗುಣವನ್ನು ಹೊಂದಿರುವ ಗಿಡಮೂಲಿಕೆಯಾಗಿದೆ. ಹಾಗಾಗಿ ಇದನ್ನು ಬಹಳಷ್ಟು ಮನೆಮದ್ದುಗಳಲ್ಲಿ ಬಳಸಲಾಗುತ್ತದೆ. ಹಿಂದೆಲ್ಲಾ ಜನರು ವೀಳ್ಯದೆಲೆಯನ್ನು ರುಚಿ ಹಾಗೂ ತಾಜಾತನಕ್ಕಾಗಿ ತಿನ್ನುತ್ತಿದ್ದರು. ಇದು ಬ್ಯಾಕ್ಟೀರಿಯಾ ವಿರೋಧಿ, ಉರಿಯೂತ ನಿವಾರಕ ಮತ್ತು ಜೀರ್ಣಕಾರಿ ಗುಣಗಳನ್ನು ಹೊಂದಿದ್ದು, ಇದು ಆರೋಗ್ಯಕ್ಕೆ ಪ್ರಯೋಜನಕಾರಿಯಾಗಿದೆ.

**ವೀಳ್ಯದ ಎಲೆ ಎಂದರೇನು:** ಪಾನ್ ಎಲೆಗಳು ಎಂದೂ ಕರೆಯಲ್ಪಡುವ ವೀಳ್ಯದ ಎಲೆಗಳನ್ನು ದಕ್ಷಿಣ ಏಷ್ಯಾದಾದ್ಯಂತ ಸಾಂಪ್ರದಾಯಿಕ ಔಷಧದಲ್ಲಿ ಶತಮಾನಗಳಿಂದ ಬಳಸಲಾಗುತ್ತಿದೆ. ಈ ಸಾಧಾರಣ ಎಲೆಗಳು ಜೀರ್ಣಕ್ರಿಯೆ, ಬಾಯಿಯ ಆರೋಗ್ಯವನ್ನು ಸುಧಾರಿಸುವುದರಿಂದ ಹಿಡಿದು ಚರ್ಮದ ಆರೈಕೆ ಮತ್ತು ಕೂದಲ ರಕ್ಷಣೆಯ ಪ್ರಯೋಜನಗಳನ್ನು ಒದಗಿಸುವವರೆಗೆ ವ್ಯಾಪಕ ಶ್ರೇಣಿಯ ಆರೋಗ್ಯ ಪ್ರಯೋಜನಗಳನ್ನು ನೀಡುತ್ತವೆ. ಆದಾಗ್ಯೂ, ಸಂಭಾವ್ಯ ಅಡ್ಡಪರಿಣಾಮಗಳನ್ನು ತಪ್ಪಿಸಲು ಅವುಗಳನ್ನು ಎಚ್ಚರಿಕೆಯಿಂದ ಮತ್ತು ಮಿತವಾಗಿ ಬಳಸುವುದು ಅತ್ಯಗತ್ಯ.

**ಜೀರ್ಣಕಾರಿ ಸಮಸ್ಯೆಗಳಿರುವ ಜನರಿಗೆ ಉತ್ತಮ:** ಗ್ಯಾಸ್ಟ್ರಿಕ್, ಮಲಬದ್ಧತೆ ಅಥವಾ ಆಮ್ಲೀಯತೆಯಿಂದ ಬಳಲುತ್ತಿರುವವರಿಗೆ ವೀಳ್ಯದ ಎಲೆಗಳು ತುಂಬಾ ಪ್ರಯೋಜನಕಾರಿ. ಅವು ಜೀರ್ಣಾಂಗ ವ್ಯವಸ್ಥೆಯನ್ನು ಸುಧಾರಿಸುತ್ತದೆ ಮತ್ತು ಹೊಟ್ಟೆಯ ಅಸ್ವಸ್ಥತೆಯನ್ನು ನಿವಾರಿಸುತ್ತದೆ. ವೀಳ್ಯದ ಎಲೆಗಳಲ್ಲಿರುವ ಸಾರಭೂತ ತೈಲಗಳು ಜೀರ್ಣಕಾರಿ ಕಿಣ್ವಗಳ ಸ್ರವಿಸುವಿಕೆಯನ್ನು ಉತ್ತೇಜಿಸುತ್ತದೆ. ಆಹಾರದ ವಿಭಜನೆಗೆ ಸಹಾಯ ಮಾಡುತ್ತದೆ ಮತ್ತು ಹೊಟ್ಟೆ ಉಬ್ಬುವುದು, ಮಲಬದ್ಧತೆಯಂತಹ ಜೀರ್ಣಕಾರಿ ಸಮಸ್ಯೆಗಳನ್ನು ನಿವಾರಿಸುತ್ತದೆ.

**ಬಾಯಿ ದುರ್ವಾಸನೆ:** ವೀಳ್ಯದ ಎಲೆಯಲ್ಲಿ ಬ್ಯಾಕ್ಟೀರಿಯಾ ವಿರೋಧಿ ಗುಣಗಳು ಸಮೃದ್ಧವಾಗಿವೆ. ಇದನ್ನು ಅಗಿಯುವುದರಿಂದ ದುರ್ವಾಸನೆ ನಿವಾರಣೆಯಾಗುತ್ತದೆ ಮತ್ತು ಹಲ್ಲು ಮತ್ತು ವಸಡುಗಳು ಬಲಗೊಳ್ಳುತ್ತವೆ. ವೀಳ್ಯದ ಎಲೆಗಳ ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳು ಬಾಯಿಯ ಕುಹರದ ರೋಗಕಾರಕಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ, ಹಲ್ಲುಕುಳಿಗಳು, ವಸಡು ಕಾಯಿಲೆ ಮತ್ತು ದುರ್ವಾಸನೆಯ ಅಪಾಯವನ್ನು ಕಡಿಮೆ ಮಾಡುತ್ತದೆ. ಪಾನ್ ಎಲೆಗಳನ್ನು ಅಗಿಯುವುದರಿಂದ ಲಾಲಾರಸದ ಉತ್ಪಾದನೆಯನ್ನು ಉತ್ತೇಜಿಸುತ್ತದೆ ಮತ್ತು ಬಾಯಿಯ ನೈರ್ಮಲ್ಯವನ್ನು ಉತ್ತೇಜಿಸುತ್ತದೆ.

**ತೂಕ ಇಳಿಕೆಗೆ ಸಹಕಾರಿ**


**ಊಟದ ನಂತರ ವೀಳ್ಯದೆಲೆಗಳನ್ನು ಅಗಿಯುವುದರಿಂದ ಹಸಿವು ನಿಗ್ರಹಿಸಲು, ಚಯಾಪಚಯ ಕ್ರಿಯೆ ಹೆಚ್ಚಿಸಲು ಸಮತೋಲಿತ ಆಹಾರ ಮತ್ತು ನಿಯಮಿತ ವ್ಯಾಯಾಮದೊಂದಿಗೆ ತೂಕ ಇಳಿಕೆಗೆ ಸಹಾಯವಾಗುತ್ತದೆ.**

**ಮಧುಮೇಹಿಗಳು:** ವೀಳ್ಯದ ಎಲೆಗಳು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಸಂಶೋಧನೆಯ ಪ್ರಕಾರ, ಅವುಗಳನ್ನು ಸೇವಿಸುವುದು ಮಧುಮೇಹ ಇರುವವರಿಗೆ ಪ್ರಯೋಜನಕಾರಿಯಾಗಿದೆ.

ವೀಳ್ಯದ ಎಲೆಗಳಲ್ಲಿರುವ ಜೈವಿಕ ಸಕ್ರಿಯ ಸಂಯುಕ್ತಗಳು ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಎಂದು ಅಧ್ಯಯನಗಳು ಸೂಚಿಸುತ್ತವೆ, ಇದು ಮಧುಮೇಹವನ್ನು ನಿರ್ವಹಿಸಲು ನೈಸರ್ಗಿಕ ಸಹಾಯಕವಾಗಿದೆ.

**ಉಸಿರಾಟದ ಸಮಸ್ಯೆಗಳಿರುವ ಜನರು:** ಆಗಾಗ್ಗೆ ಕೆಮ್ಮು, ಶೀತ ಅಥವಾ ಉಸಿರಾಟದ ತೊಂದರೆಗಳಿಂದ ಬಳಲುತ್ತಿರುವವರಿಗೆ ವೀಳ್ಯದ ಎಲೆಗಳು ಪರಿಣಾಮಕಾರಿ ಔಷಧವಾಗಿ ಕಾರ್ಯನಿರ್ವಹಿಸುತ್ತವೆ. ಇದು ಲೋಳೆಯನ್ನು ಹೊರಹಾಕಲು, ಗಂಟಲು ತೆರವುಗೊಳಿಸಲು ಸಹಾಯ ಮಾಡುತ್ತದೆ.

ವೀಳ್ಯದ ಎಲೆಗಳು ಕಫ ನಿವಾರಕ ಬ್ರಾಂಕೋಡಿಲೇಟರ್ ಪರಿಣಾಮಗಳನ್ನು ಹೊಂದಿದ್ದು, ಕೆಮ್ಮು, ಶೀತ, ಬ್ರಾಂಕೈಟಿಸ್ ಮತ್ತು ಆಸ್ತಮಾದಂತಹ ಉಸಿರಾಟದ ಪರಿಸ್ಥಿತಿಗಳನ್ನು ನಿರ್ವಹಿಸಲು ಪ್ರಯೋಜನಕಾರಿಯಾಗಿದೆ.



# ಎಸ್‌ಐಟಿ- ಪ್ರಮುಖ ಪ್ರಕರಣಗಳ ತನಿಖೆಗೆ ಹೊಸ ಅಸ್ತ್ರ

• ಉದಯವಾಹಿನಿ, ಬೆಂಗಳೂರು

ಕಲಬುರಗಿಯ ಆಳಂದ ವಿಧಾನಸಭೆ ಕ್ಷೇತ್ರದಲ್ಲಿ 2023ರಲ್ಲಿ ನಡೆದಿದೆ ಎಂದು ಹೇಳಲಾಗುತ್ತಿರುವ ಮತಕಳ್ಳತನ ಪ್ರಕರಣದ ತನಿಖೆಗಾಗಿ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡನ್ನು ರಚಿಸಿದೆ. ಫೆಬ್ರವರಿ 2023ರಲ್ಲಿ ಆಳಂದ ಚುನಾವಣಾ ನೋಂದಣಿ ಅಧಿಕಾರಿ ಎಫ್‌ಐಆರ್ ದಾಖಲಿಸಿದ ನಂತರ ಕಳೆದ ವಾರಾಂತ್ಯದಲ್ಲಿ ಅದನ್ನು ಎಸ್‌ಐಟಿಗೆ ಹಸ್ತಾಂತರಿಸುವವರೆಗೆ ಈ ಪ್ರಕರಣವನ್ನು ಸಿಐಡಿ ತನಿಖೆ ನಡೆಸುತ್ತಿತ್ತು. ಸಂಕೀರ್ಣ, ಸೂಕ್ಷ್ಮ ಮತ್ತು ರಾಜಕೀಯವಾಗಿ ಮಹತ್ವದ' ಪ್ರಕರಣಗಳನ್ನು ತನಿಖೆ ಮಾಡಲು ಎಸ್‌ಐಟಿ ರಚನೆಯು ಈ ಸರ್ಕಾರಕ್ಕೆ ಹೊಸದಲ್ಲ, ಆದರೆ ಅಂತಹ ಪ್ರತಿಯೊಂದು ಪ್ರಕರಣವನ್ನು ತನಿಖೆ ಮಾಡಲು ಅಧಿಕಾರಿಗಳ ತಂಡವನ್ನು ರಚಿಸುವ ಪ್ರವೃತ್ತಿ ಹಿಂದಿನ ಅಖಿಲ ತನಿಖೆಯ ಗಂಭೀರತೆ ಮತ್ತು ಪಾವಿತ್ರ್ಯಕ್ಕೆ ಹಿನ್ನಡೆಯಾಗಿದೆ. ಸಿಐಡಿಯನ್ನು ಕರ್ನಾಟಕ ಪೊಲೀಸರ ಒಂದು ಪ್ರಮುಖ ತನಿಖಾ ವಿಭಾಗವಾಗಿ (ಆಗ ಪತ್ತೆದಾರರ ದಳ) ರಚಿಸಲಾಗಿತ್ತು.

**ಸಿಐಡಿ ತನಿಖೆಯ ಗಂಭೀರತೆ, ಪಾವಿತ್ರ್ಯತೆಗೆ ಕುತ್ತು!**

**ಪ್ರಕರಣದ ಗಂಭೀರತೆ:** 90 ರ ದಶಕದ ಮಧ್ಯ ಮತ್ತು ಕೊನೆಯಲ್ಲಿ ಕೆಲವೇ ಆಯ್ದ ಪ್ರಕರಣಗಳಿಗೆ ಎಸ್ ಐಟಿ ತನಿಖೆ ಮಾಡಲಾಗುತ್ತಿತ್ತು. ಪೊಲೀಸ್ ಅಧಿಕಾರಿಗಳ ತಂಡವನ್ನು ಬದಿಗಿಟ್ಟು ತನಿಖೆ ಪೂರ್ಣಗೊಳ್ಳುವವರೆಗೆ ಅವರ ನಿಯಮಿತ ಕಾನೂನು ಮತ್ತು ಸುವ್ಯವಸ್ಥೆಯ ಕರ್ತವ್ಯಗಳಿಂದ ದೂರವಿಟ್ಟು ವಿಶೇಷ ತನಿಖೆಯ ಕಾರ್ಯವನ್ನು ಅವರಿಗೆ ವಹಿಸುವುದು ಇದರ ಉದ್ದೇಶವಾಗಿತ್ತು. ಸರ್ಕಾರದ ವಿಶೇಷ ಅಧಿಕಾರ ಹೊಂದಿರುವ ಎಸ್‌ಐಟಿ ಸ್ಥಾಪನೆಯು ಇತ್ತೀಚೆಗೆ ಸಾಮಾನ್ಯವಾಗಿದೆ.

ಎಸ್‌ಐಟಿ ಅಧಿಕಾರಿಗಳನ್ನು ಕ್ಷೇತ್ರ ಜ್ಞಾನ, ಪರಿಣತಿ, ತನಿಖೆಯ ಕೌಶಲ್ಯ, ಟ್ರ್ಯಾಕ್ ರೆಕಾರ್ಡ್ ಮುಂತಾದ ವಿವಿಧ ಕಾರಣಗಳಿಗಾಗಿ ಆಯ್ಕೆ ಮಾಡಲಾಗುತ್ತದೆ. ತಂಡವನ್ನು ಆಯ್ಕೆ ಮಾಡುವಲ್ಲಿ ನಂಬಿಕೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೆಸರು ಹೇಳಲು ಇಚ್ಛಿಸದ ಕೆಲವು ನಿವೃತ್ತ ಪೊಲೀಸ್ ಅಧಿಕಾರಿಗಳು ಹೇಳಿದರು. ಅತ್ಯಂತ ಸೂಕ್ಷ್ಮ ಪ್ರಕರಣಗಳಲ್ಲಿ, ಅಧಿಕಾರಿಗಳ ಸಮಗ್ರತೆಯ ಪರೀಕ್ಷೆಯಾಗಬಹುದು. ತನಿಖೆಯು ಸೂಕ್ಷ್ಮ ಕಲೆಯಾಗಿದೆ ಆದರೆ ನ್ಯಾಯಾಲಯಗಳ ಪರಿಶೀಲನೆಯನ್ನು ತಡೆದುಕೊಳ್ಳಲು ನಿರ್ದಿಷ್ಟ ಅರ್ಹತೆ ಮತ್ತು ಧೈರ್ಯದ ಅಗತ್ಯವಿದೆ ಎಂದರು.



# ನವರಾತ್ರಿ ನಾಲ್ಕನೇ ದಿನ ಕೂಷ್ಮಾಂಡ ದೇವಿಗೆ ಪೂಜೆ!

☛ ವಿಶ್ವಾಸ್.ಡಿ.ಗೌಡ

■ ಉದಯವಾಹಿನಿ, ವಿಶೇಷ

ನವರಾತ್ರಿಯ ನಾಲ್ಕನೇ ದಿನ ದುರ್ಗಾ ಮಾತೆಯ ನಾಲ್ಕನೇ ಅವತಾರವಾದ ಕೂಷ್ಮಾಂಡ ದೇವಿಯನ್ನು ಪೂಜಿಸಲಾಗುತ್ತದೆ.



ಸದಾ ಮಂದಸ್ಮಿತೆಯಾಗಿರುವ ದುರ್ಗಾದೇವಿಯ ನಾಲ್ಕನೇ ಅವತಾರವೇ ಕೂಷ್ಮಾಂಡ.

ಈಕೆಯ ಆರಾಧಾನೆಯಿಂದ ಮನದ ಕ್ಲೇಷ ಕಳೆದು ಜ್ಞಾನದ ಬೆಳಕು ಮೂಡುತ್ತದೆ. ಜ್ಞಾನದ ಹೊನಲು ಸಂತಸಕ್ಕೆ ಕಾರಣವಾಗುತ್ತದೆ ಎಂಬ ನಂಬಿಕೆ ಭಕ್ತರದ್ದು. ಸಂಸ್ಕೃತದಲ್ಲಿ ಕೂಷ್ಮಾಂಡವೆಂದರೆ ಬೂದುಗುಂಬಳಕಾಯಿ ಎಂದರ್ಥ ಆಯುರ್ವೇದ ಶಾಸ್ತ್ರದ ಪ್ರಕಾರ ಬೂದುಗುಂಬಳ ಕಾಯಿಯು ಜ್ಞಾನವರ್ಧಕ, ತೇಜೋವರ್ಧಕ, ಸಕಲ ತಾಪವನ್ನು ನಿವಾರಣೆ ಮಾಡಿ ದೇಹಕ್ಕೆ ತಂಪೆರೆವ ಶಾಕಾಹಾರ, ಕೂಷ್ಮಾಂಡ ಪದದಲ್ಲಿ ಕು-ಎಂದರೆ ಚಿಕ್ಕದು: ಉಷ್ಮ ಎಂದರೆ 'ಶಕ್ತಿ' ಮತ್ತು ಅಂಡ ಎಂದರೆ ಭ್ರೂಣ ಎಂದರ್ಥ. ಸರಳವಾಗಿ ಹೇಳುವುದಾದರೆ 'ಇಡೀ ಬ್ರಹ್ಮಾಂಡವೆನ್ನುವ ಚೈತನ್ಯ ಶಕ್ತಿಯನ್ನೇ ತನ್ನ ಒಡಲಿನಲ್ಲಿ ಇಟ್ಟುಕೊಂಡಳು' ಎಂದರ್ಥ.




ದುರ್ಗಾ ಸಪ್ತಶತಿಯ ಪ್ರಕಾರ ಕೂಷ್ಮಾಂಡ ದೇವಿಯೇ ಜಗದ ಸೃಷ್ಟಿಗೆ ಕಾರಣೀಭೂತಳಾಗಿದ್ದಾಳೆ. ಸೌರವ್ಯೂಹದ ಗ್ರಹಗಳ ಚಲನೆಯನ್ನು ನಿಯಂತ್ರಿಸುತ್ತಾಳೆ. ಆಕೆ ಇರುವಲ್ಲಿ ಬೆಳಕು ಹಾಗೂ ಜ್ಞಾನವಿದೆ ಎಂದು ಹೇಳಬಹುದಾಗಿದೆ.

**ನವರಾತ್ರಿಯ ವಿಶೇಷ**

ಕೂಷ್ಮಾಂಡ ಅವತಾರದಲ್ಲಿ ದೇವಿ ತನ್ನ ಎಂಟು ಕೈಗಳಿಂದ ಭಕ್ತರಿಗೆ ವರವನ್ನು ನೀಡುತ್ತಾಳೆ. ಎಂಟು ಕೈಗಳನ್ನು ದೇವಿಯು ಹೊಂದಿರುವುದರಿಂದ ಆಕೆಗೆ ಅಷ್ಟಭುಜಾದೇವಿ ಎಂಬ ಹೆಸರೂ ಇದೆ. ದೇವಿಯ ಮೈಬಣ್ಣ ವಿಕಿರಣವಾಗಿದ್ದು ದೇಹದ ಬಣ್ಣ ಚಿನ್ನದ್ದಾಗಿದೆ. ಸಿಂಹದ ಮೇಲೆ ದೇವಿಯು ಸವಾರಿ ಮಾಡುತ್ತಿದ್ದಾಳೆ ಎಂಬ ನಂಬಿಕೆ ಜನಮಾನಸದಲ್ಲಿ ನೆಲೆಯಾಗಿದೆ. ವಿಶ್ವದ ಸೃಷ್ಟಿಕರ್ತೆಗೆ ಪೂಜೆ ಅನಾದಿ ಕಾಲದ ನಂಬಿಕೆಯಂತೆ ಇಂದಿಗೂ ನಡೆದು ಬರುತ್ತಿದೆ. ವಿಶ್ವವೇ ಇಲ್ಲದಿರುವಾಗ ಸುತ್ತಲೂ ಗಾಢ ಅಂಧಕಾರ ಕವಿದಿತ್ತು. ಆ ಸಮಯದಲ್ಲಿ ಕೂಷ್ಮಾಂಡ ದೇವಿ ನಗುತ್ತಾಳೆ. ಆಕೆಯ ನಗುವಿನಿಂದ ಎಲ್ಲೆಡೆ ಬೆಳಕು ಕಂಡು ಬಂದಿತು ಎಂಬ ಪ್ರತೀತಿಯಿದೆ. ದೇವಿಯು ಭೂಮಿಯನ್ನು ಸೃಷ್ಟಿಸಿದ್ದಾಳೆ.

**ಕೂಷ್ಮಾಂಡ ದೇವಿಯ ರೂಪ**

ಅಲ್ಲಿ ಜೀವಿಗಳನ್ನು ರೂಪಿಸಿದ್ದಾಳೆ ಎಂದು ಬಲ್ಲವರ ಮಾತು. ನವರಾತ್ರಿಯ ನಾಲ್ಕನೇ ದಿನ ಈ ಸೃಷ್ಟಿಯನ್ನು ರಚಿಸಿದ ದೇವಿ ಕೂಷ್ಮಾಂಡೆಯನ್ನು ಪೂಜಿಸುವುದು ವಾಡಿಕೆಯಾಗಿದೆ. ದೇವಿ ಕೂಷ್ಮಾಂಡೆಯನ್ನು ನೀವು ಪೂಜಿಸುತ್ತೇವೆ ಎಂದಾದಲ್ಲಿ ವಿಶ್ವದ ಶ್ರೇಷ್ಠ ಶಕ್ತಿಯನ್ನೇ ನಾವು ಆರಾಧಿಸುತ್ತಿದ್ದೇವೆ ಎಂದರ್ಥ. ಆಕೆಯ ಮೇಲೆ ನಂಬಿಕೆ ಇರಿಸಿದಲ್ಲಿ ನಾವು ನಮ್ಮ ಜೀವನದಲ್ಲಿ ಸರಿಯಾದ ದಾರಿಯಲ್ಲಿ ನಡೆಯಲು ಅವಳು ಮಾರ್ಗದರ್ಶನ ನೀಡುತ್ತಾಳೆ.

ಬದುಕಿನ ದು:ಖ, ನೋವುಗಳನ್ನು ಮರೆತು ಸಂತಸವನ್ನು ಆ ದೇವಿ ಜೀವನದಲ್ಲಿ ತುಂಬುವಂತೆ ಮಾಡುತ್ತಾಳೆ ಎಂಬುದು ಪುರಾಣಗಳಿಂದ ತಿಳಿದು ಬರುತ್ತದೆ.

**ಕೂಷ್ಮಾಂಡ ದೇವಿಯ ರೂಪ:** ಕೂಷ್ಮಾಂಡ ದೇವಿಯು ತನ್ನ ಏಳು ಕೈಗಳಲ್ಲಿ ಕಮಂಡಲ, ಧನಸ್ಸು, ಬಾಣ, ತಾವರೆ, ಚಕ್ರ, ಗದೆ ಹಾಗೂ ಜಪಮಾಲೆಯನ್ನು ಹಿಡಿದಿದ್ದಾಳೆ. ಇನ್ನೊಂದು ಹಸ್ತವು ಅಭಯ ಮುದ್ರೆಯಲ್ಲಿದ್ದು ಸದಾ ತನ್ನ ಭಕ್ತರನ್ನು ಆಶೀರ್ವದಿಸುತ್ತಾಳೆ ಎನ್ನಲಾಗುತ್ತದೆ. ವ್ಯಾಘ್ರವಾಹಿನಿಯಾಗಿರುವ ಈಕೆ ಧರ್ಮದ ಪ್ರತೀಕವಾಗಿದ್ದಾಳೆ. ಎಂಟು ಭುಜಗಳಿರುವ ಕಾರಣ ಅಷ್ಟಭುಜಾದೇವಿ ಎಂದು ಕರೆಯಲಾಗುತ್ತದೆ. ಕೂಷ್ಮಾಂಡ ದೇವಿಯು ಸೂರ್ಯನಿಗೆ ಅಧಿಪತಿಯಾಗಿರುವ ಕಾರಣ ಕೂಷ್ಮಾಂಡ ದೇವಿಯನ್ನು ಪೂಜಿಸುವುದರಿಂದ ಜಾತಕದಲ್ಲಿ ಸೂರ್ಯನಿಂದಾಗುವ ಕೆಡುಕನ್ನು ನಿವಾರಿಸಬಹುದು. ಜೊತೆಗೆ ಎಲ್ಲಾ ರೀತಿಯ ಸಂಕಷ್ಟಗಳು ನಿವಾರಣೆಯಾಗುವುದು ಎಂಬ ನಂಬಿಕೆ ಎಲ್ಲರದ್ದು.

**ಪೂಜಾ ವಿಧಿ:** ಕೂಷ್ಮಾಂಡ ದೇವಿಯನ್ನು ಪೂಜಿಸಲು ಅತೀ ಪವಿತ್ರವಾದ ಹೂವೆಂದರೆ ಕೆಂಪು ಬಣ್ಣದ ಹೂಗಳು. ದೇವಿಯನ್ನು ಪೂಜಿಸಿ ನಂತರ ಷೋಡಶೋಪಚಾರ ಪೂಜೆ ಅಂದರೆ 16 ವಿವಿಧ ಪೂಜೆಯನ್ನು ಮಾಡಿದರೆ ದೇವಿ ಪುನೀತಳಾಗುತ್ತಾಳೆ.

## ಬೆಳೆ ಹಾನಿ: ಎಕರೆಗೆ 50 ಸಾವಿರ ಪರಿಹಾರ ನೀಡಲು ಶಾಸಕ ಡಾ.ಅವಿನಾಶ ಜಾಧವ ಒತ್ತಾಯ

• ಉದಯವಾಹಿನಿ,ಚಿಂಚೋಳಿ

ಅತೀವೃಷ್ಟಿ ಪೀಡಿತ ಕಲಬುರ್ಗಿ ಜಿಲ್ಲೆ ಎಂದು ಘೋಷಿಸಬೇಕು,ಕೂಡಲೇ 2023-24ನೇ ಸಾಲಿನ ಬಾಕಿ ಪರಿಹಾರ ಹಣ ರೂ.291ಕೋಟಿ ಮತ್ತು 2024-25 ನೇ ಸಾಲಿನ ಬಾಕಿ ಪರಿಹಾರ ಹಣ ರೂ.326ಕೋಟಿ ಮೊತ್ತವನ್ನು ಬಿಡುಗಡೆ ಮಾಡಬೇಕು,ವಿಮೆ ಇಲ್ಲದ ಎಲ್ಲಾ ರೈತರಿಗೂ ಪರಿಹಾರ ಘೋಷಣೆ ಮಾಡಬೇಕು,ಸಾಲದ ಸುಳಿಯಲ್ಲಿ ಸಿಲುಕಿರುವ ಎಲ್ಲಾ ರೈತರ ಸಾಲ ಮನ್ನಾ ಮಾಡಬೇಕು,ಪ್ರತಿ ಎಕರೆಗೆ ರೂ.50ಸಾವಿರ ಪರಿಹಾರ ಘೋಷಣೆ ಮಾಡಬೇಕು ಎಂದು ಶಾಸಕ ಡಾ.ಅವಿನಾಶ ಜಾಧವ ರಾಜ್ಯ ಸರ್ಕಾರಕ್ಕೆ ಒತ್ತಾಯಿಸಿದರು. ಪಟ್ಟಣದ ಆಡಳಿತ ಸೌಧ ಎದುರು ಬಿಜೆಪಿ ಪಕ್ಷದಿಂದ ಕಲಬುರ್ಗಿ ಜಿಲ್ಲೆ ಅತಿವೃಷ್ಟಿ ಪೀಡಿತವೆಂದು ಘೋಷಿಸಿ ಹಾಗೂ ಬೆಳೆ ಹಾನಿಯಾದ ರೈತರಿಗೆ ಏರಕರೆಗೆ 50ಸಾವಿರ ರೂ.ಪರಿಹಾರ,ರೈತರ ಸಾಲ ಮನ್ನಾ ಮಾಡಲು ಒತ್ತಾಯಿಸಿ ಹಮ್ಮಿಕೊಂಡ ಪ್ರತಿಭಟನೆಯಲ್ಲಿ ಮಾತನಾಡಿದ ಅವರು,ಪ್ರಸ್ತುತ ವರ್ಷ ತೀವ್ರ ಮಳೆಯಾಗಿ,ಅತೀವೃಷ್ಟಿಯಿಂದ ರೈತರು ಬೆಳೆದ ತೊಗರಿ,ಉದ್ದು,ಹೆಸರು, ಸೋಯಾಬಿನ್ ಸೇರಿದಂತೆ ಎಲ್ಲಾ ಬೆಳೆಗಳು ಸಂಪೂರ್ಣವಾಗಿ ಪ್ರತಿಶತಃ 100ರಷ್ಟು ನಷ್ಟವಾಗಿವೆ.



ಉದಯವಾಹಿನಿ ಚಿತ್ರ

ರೈತರ ಬದುಕು ಶೋಚನೀಯ ಸ್ಥಿತಿಗೆ ತಲುಪಿದ್ದು,ಬದುಕು ಬೀದಿಗೆ ಬಂದಿದೆ,ರೈತರು ಬೆಳೆ ವಿಮೆಯ ಕಂತುಗಳು ತುಂಬಿದರೂ ಸಹಿತ 2023-24 ಹಾಗೂ 2024-25ನೇ ಸಾಲಿನ ಪರಿಹಾರ ಬಾಕಿ ಹಣ ಇನ್ನೂ ರೈತರಿಗೆ ನೀಡದೇ ಇರುವುದು ರೈತರನ್ನು ಮತ್ತಷ್ಟು ತೊಂದರೆಗೆ ಸಿಲುಕಿಸಿದ್ದಾರೆ,ರೈತರು ವಿವಿಧ ಮೂಲಗಳಿಂದ ಸಾಲ ತಂದು ಕೃಷಿ ಚಟುವಟಿಕೆಗಳು ಕೈಗೊಂಡಿದ್ದು ಸಾಕಷ್ಟು ಸಾಲದ ಸುಳಿಯಲ್ಲಿ ರೈತರು ಸಿಲುಕಿದ್ದಾರೆ ರೈತರ ಸಾಲಮನ್ನಾ ಮಾಡಿ ರೈತರ ಬೆನ್ನಿಗೆ ರಾಜ್ಯ ಸರ್ಕಾರ ನಿಲ್ಲಬೇಕು.

ಸಾಲ ತೀರಿಸಲಾಗದೆ ಮತ್ತು ಇತ್ತ ಬದುಕು ಕಟ್ಟಿಕೊಳ್ಳಲಾಗದೆ ಆತ್ಮಹತ್ಯೆಯಂತಹ ಪ್ರಕರಣಗಳು ಹೆಚ್ಚುತ್ತಿವೆ,ಇದರಿಂದ ರೈತರ ಪರಸ್ಥಿತಿಯನ್ನು ಗಂಭೀರವಾಗಿ ಪರಿಗಣಸಿಬೇಕು ಎಂದು ಒತ್ತಾಯಿಸಿದರು.

ಶಾಸಕ ಡಾ.ಅವಿನಾಶ ಜಾಧವ ನೇತೃತ್ವದಲ್ಲಿ ಹಮ್ಮಿಕೊಂಡ ಪ್ರತಿಭಟನೆಯ ವಿವಿಧ ಬೇಡಿಕೆಗಳನ್ನು ಒತ್ತಾಯಿಸಿದ ಮನವಿಪತ್ರವನ್ನು ತಹಶೀಲ್ದಾರ್ ಸುಬಣ್ಣ ಜಮಖಂಡಿ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

## ಯುವ ಸಮೂಹ ಮನಸ್ಥಿತಿ ಬದಲಾದಾಗ ಕಲ್ಯಾಣ ಕರ್ನಾಟಕ ಪ್ರಗತಿ ಸಾಧ್ಯ

• ಉದಯವಾಹಿನಿ ಔರಾದ್

ಯುವ ಸಮೂಹದಲ್ಲಿ ಜಡ ಮನಸ್ಥಿತಿ ಬದಲಾಗಿ ನಮ್ಮ ಅಭಿವೃದ್ಧಿ ನಮ್ಮ ಕೈಯಲ್ಲಿ ಎಂಬ ಧ್ಯೇಯ ಉಸಿರಾಗಿಸಿಕೊಂಡಾಗ ಮಾತ್ರ ಕಲ್ಯಾಣ ಕರ್ನಾಟಕ ಪ್ರಗತಿಯತ್ತ ಸಾಗಲಿದೆ ಎಂದು ನಿವೃತ್ತ ಶಿಕ್ಷಕ ಸಾಹಿತಿ ನಾಗನಾಥ ಚಿಟಮೆ ನುಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಲ್ಯಾಣ ಕರ್ನಾಟಕ ಉತ್ಸವ ನಿಮಿತ್ತ ಆಯೋಜಿಸಿರುವ ಕಲ್ಯಾಣ ಕರ್ನಾಟಕ ಸಮಗ್ರ ಅಭಿವೃದ್ಧಿ ಚಿಂತನೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು.



ಉದಯವಾಹಿನಿ ಚಿತ್ರ

ಪ್ರಪಂಚದಲ್ಲಿ ಉತ್ಕೃಷ್ಟವಾದ ಸಂಪತ್ತೆಂದರೆ ಅದು ಮಾನವ ಸಂಪತ್ತು. ಬಸವಾದಿ ಶರಣರು, ಪಂಪ, ಪೊನ್ನ, ರನ್ನ, ನೃಪತುಂಗ ಆದಿಯಾಗಿ ಬಾಳಿ ಬೆಳಗಿದ ಭವ್ಯ ನಾಡು ಕಲ್ಯಾಣ ನಾಡಾಗಿದೆ. ಗುಣಾತ್ಮಕ ಶಿಕ್ಷಣದ ಜೊತೆ ಜೊತೆಗೆ ಮಾನವ ಸಂಪನ್ಮೂಲ ಬಲಿಷ್ಠ ಗೊಳಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಬೇಕಿದೆ. ಪ್ರಜ್ಞಾವಂತಿಕೆಯ ಮುತ್ಸದ್ದಿ ಕೊರತೆಯಿಂದ ಹಲವು ವರ್ಷಗಳ ವರೆಗೆ ಕಲ್ಯಾಣ ಕರ್ನಾಟಕ ಭಾಗ ನಿರ್ಲಕ್ಷ್ಯಕ್ಕೆ ಒಳಪಟ್ಟಿತ್ತು.

ಬಳಿಕ ಮಾಜಿ ಮುಖ್ಯಮಂತ್ರಿಗಳಾದ ವಿರೇಂದ್ರ ಪಾಟೀಲ್, ಧರಂ ಸಿಂಗ್, ಮಲ್ಲಿಕಾರ್ಜುನ ಖರ್ಗೆ, ಯಡಿಯೂರಪ್ಪ, ಹೋರಾಟಗಾರ ಡಾ. ವೈಜಿನಾಥ ಪಾಟೀಲ ಸೇರಿದಂತೆ ಇನ್ನಿತರ ರಾಜಕೀಯ ನಾಯಕರ ಮಹತ್ವದ ಕಾಣಿಕೆ ಸ್ಮರಿಸಿಕೊಂಡರು. 371 (ಜೆ) ಮೀಸಲಾತಿ ಮುಂದಿನ ದಿನಗಳಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದರು. ಎನ್‌ಪಿಎಸ್ ನೌಕರ ಸಂಘದ ಅಧ್ಯಕ್ಷ ಮಹಾದೇವ ಚಿಟಗೀರೆ ಮಾತನಾಡಿ, ಹೈದ್ರಾಬಾದ್ ಕರ್ನಾಟಕ ವಿಮೋಚನೆಯ ಚರಿತ್ರೆ ಮೇಲೆ ಬೆಳಕು ಚೆಲ್ಲಿ ಸರ್ದಾರ ವಲ್ಲಭಭಾಯಿ ಪಟೇಲ್, ಡಾ. ಅಂಬೇಡ್ಕರ್, ಸ್ವಾಮಿ ರಾಮಾನಂದ ತೀರ್ಥ, ರಾಮಚಂದ್ರ ವೀರಪ್ಪ ಅವರ ಕೊಡುಗೆಗಳು ಸ್ಮರಿಸಿದರು.

### ಮನೆಗಳನ್ನು ಹುಡುಕಾಡಿದರೂ ಮನೆಯಲ್ಲಿ ಆಧಾರ್ ಕೆವೈಸಿಯ ಸಮಸ್ಯೆಗಳು ಹೆಚ್ಚಾಗುತ್ತಿವೆ

## ಮನೆ ಲೊಕೇಶನ್ ಸಿಗುತ್ತಿಲ್ಲ, ಯುಎಚ್ಐಡಿ ಸ್ಟಿಕ್ಕರೇ ಇಲ್ಲ

• ಉದಯವಾಹಿನಿ ಕಲಬುರಗಿ

ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಗಣತಿದಾರರಿಗೆ ಮನೆಗಳ ಲೊಕೇಶನ್ ಸಿಗುತ್ತಿಲ್ಲ. ಇನ್ನೊಂದೆಡೆ ಯುಎಚ್ಐಡಿ ಸ್ಟಿಕ್ಕರ್‌ಗಳನ್ನೇ ಜನ ಕಿತ್ತೆಸೆದಿದ್ದರಿಂದ ಗಣತಿದಾರರು ಸಮೀಕ್ಷೆ ನಡೆಸಲು ಪರದಾಡುತ್ತಿದ್ದಾರೆ. ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭವಾಗಿದೆ. ಆದರೆ, ಸಮೀಕ್ಷೆ ನಡೆಸುತ್ತಿರುವವರ ಪಾಡು ಹೇಳತೀರದಾಗಿದೆ. ಬೆಳಗ್ಗೆ ಸಮೀಕ್ಷೆಗೆ ಇಳಿದ ತಕ್ಷಣ ಒಂದೊಂದು ಸಮಸ್ಯೆಗಳು ತಲೆದೋರುತ್ತಿದ್ದು, ಮನೆ ಹುಡುಕಾಟದಲ್ಲೇ ಸಮಯ ಕಳೆಯುವಂತಾಗಿದ್ದು, ಮನೆ ಸಿಕ್ಕರೆ ಮತ್ತೊಂದು ಸಮಸ್ಯೆಗಳು ಎದುರಾಗುತ್ತಿವೆ.


**ಸ್ಟಿಕ್ಕರ್ ಕಿತ್ತೆಸೆದ ಜನ**

**ಕೆಲ ದಿನಗಳ ಹಿಂದೆ ವಿದ್ಯುತ್ ಮೀಟರ್‌ಗಳಿಗೆ ಯುಎಚ್ಐಡಿ ಸ್ಟಿಕರ್‌ಗಳನ್ನು ಅಂಟಿಸಿ ಹೋಗಲಾಗಿತ್ತು. ಆದರೆ, ಈಗ ನವರಾತ್ರಿ ಹಿನ್ನೆಲೆಯಲ್ಲಿ ಮನೆಗಳನ್ನು ಜನರು ತೊಳೆದು ಕ್ಲೀನ್ ಮಾಡಿದ್ದಾರೆ. ಈ ಸಮಯದಲ್ಲಿ ಯುಎಚ್ಐಡಿ ಸ್ಟಿಕ್ಕರ್‌ಗಳನ್ನೇ ಕಿತ್ತೆಸದ ಪ್ರಯುಕ್ತ ಗಣತಿದಾರರು ಪರೇಶಾನ್ ಆಗಿದ್ದಾರೆ. ಸರ್ವೇ ಪೂರ್ಣವಾದ ನಂತರ ಸ್ಟಿಕರ್ ಮೇಲೆ ಯುಎಚ್ಐಡಿ, ಸಮೀಕ್ಷಾ ಐಡಿ ಬರೆಯಬೇಕಿರುತ್ತದೆ. ಈ ಸ್ಟಿಕರ್ ಕಿತ್ತು ಹೋದ ಮನೆಗಳಿಗೆ ಈ ಮಾಹಿತಿ ಎಲ್ಲಿ ನೋಂದಾಯಿಸಬೇಕು ಎಂದು ಗಣತಿದಾರರು ಹಿರಿಯಅಧಿಕಾರಿಗಳಿಗೆ ಕರೆ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.**

**ಮನೆ ಸಿಕ್ಕರೂ ಆಧಾರ್ ಕೆವೈಸಿ ಸಮಸ್ಯೆ:** ಹೇಗೋ ಮಾಡಿ ಮನೆಗಳನ್ನು ಹುಡುಕಾಡಿದರೂ ಮನೆಯಲ್ಲಿ ಆಧಾರ್ ಕೆವೈಸಿಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಮನೆಯಲ್ಲಿ ಇರುವ ಸದಸ್ಯರು ಮಾಹಿತಿ ಕೊಟ್ಟರೂ ಆಧಾರ್ ಕೆವೈಸಿ ಮೊಬೈಲ್ ನಂಬರ್ ಇರುವವರು ಇನ್ನೆಲ್ಲೋ ಇರುತ್ತಿದ್ದಾರೆ. ಕೆವೈಸಿ ಆಗದೆ ಸಮಸ್ಯೆ ಅನುಭವಿಸುವಂತಾಗಿದೆ. ಪ್ರದೇಶ ತಿಳಿಯದ ಗಣತಿದಾರರ ನಿಯೋಜನೆ ಸಮೀಕ್ಷೆಗೆ ಒಂದು ತಾಲ್ಲೂಕಿನಿಂದ ಇನ್ನೊಂದು



ಉದಯವಾಹಿನಿ ಚಿತ್ರ



- **ನವರಾತ್ರಿಗೆ ಮನೆ ಸ್ವಚ್ಛ ಗೊಳಿಸುವಾಗ ಸ್ಟಿಕ್ಕರ್ ತೆಗೆದ ಜನ**
- **ನ್ಯಾವಿಗೇಶನ್‌ನಿಂದ ಮನೆ ಲೊಕೇಶನ್ ಸಿಗದೆ ಗಣತಿದಾರರು ಪರದಾಟ**
- **ಹೇಗೋ ಮಾಡಿ ಮನೆಗಳನ್ನು ಹುಡುಕಾಡಿದರೂ ಮನೆಯಲ್ಲಿ ಆಧಾರ್ ಕೆವೈಸಿಯ ಸಮಸ್ಯೆಗಳು ಹೆಚ್ಚಾಗುತ್ತಿವೆ.**

**ಡಾಕ್ಯುಮೆಂಟಗೆ ಜನರ ಹುಡುಕಾಟ**

**ಗಣತಿದಾರರು ಮನೆಗಳ ಮುಂದೆ ಸಮೀಕ್ಷೆಗೆ ತೆರಳಿದಾಗ ಮನೆಯವರು ಆಧಾರ್ ಕಾರ್ಡ್ ಸೇರಿ ಹಲವು ಪ್ರಮಾಣಪತ್ರಗಳನ್ನು ಹುಡುಕಾಡುವುದರಲ್ಲಿ ನಿರತರಾಗುತ್ತಿದ್ದಾರೆ. ಇದರಿಂದ ಗಣತಿ ಮಾಡುವವರು ಸುಸ್ತಾಗುವಂತಾಗಿದೆ. ಒಂದು ಮನೆ ಸಮೀಕ್ಷೆಗೆ ಬಹಳಷ್ಟು ಸಮಯ ಹಿಡಿಯುತ್ತಿದೆ. ಕೆಲವೊಂದು ಬಾರಿ ನೆಟ್ ವರ್ಕ್ ಕೈ ಕೊಡುವುದರಿಂದ ಮತ್ತಷ್ಟು ತೊಂದರೆಯಾಗುತ್ತಿದೆ.**

ತಾಲ್ಲೂಕಿಗೆ ಗಣತಿದಾರರ(ಶಿಕ್ಷಕರು)ನ್ನು ನಿಯೋಜಿಸಿದ್ದರಿಂದ ಮನೆಗಳನ್ನು ಹುಡುಕಲು ತೊಂದರೆಯಾಗುತ್ತಿದೆ. ಗ್ರಾಮ, ವಾರ್ಡ್ ಮಾಹಿತಿ ತಿಳಿಯದವರನ್ನು ನಿಯೋಜಿಸಿದ್ದೇ ಈಗ ಹೊಸ ಸಮಸ್ಯೆಯಾಗಿದೆ. ಯಾವ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಾರೋ ಅದೇ ತಾಲ್ಲೂಕಿಗೆ ನಿಯೋಜಿಸಿದ್ದರೆ ಮನೆ ಹುಡುಕಲು ಅನುಕೂಲ ಆಗುತಿತ್ತು ಎಂಬುದು ಗಣತಿದಾರರ ಅಭಿಪ್ರಾಯ. ಯುಎಚ್ಐಡಿ ನಂಬರ್ ಆ್ಯಪ್‌ನಲ್ಲಿ ಹಾಕಿದರೆ ನ್ಯಾವಿಗೇಷನ್ ತೋರಿಸುತ್ತದೆ. ಅದರ ಮೂಲಕ ಮನೆ ಲೊಕೇಶನ್‌ಗೆ ಹೋದರೆ ಮನೆಗಳ ಮುಂದೆ ನಿಲ್ಲಿಸುತ್ತಿಲ್ಲ. ಮನೆ ಹುಡುಕುವುದೇ ಸಮಸ್ಯೆಯಾಗುತ್ತಿದೆ. ನಮ್ ಗೋಳು ಯಾರಿಗೇಳಬೇಕು ಸರ್, ಅನಿವಾರ್ಯ, ಸರಕಾರಿ ಕೆಲ್ಸಾ ಮಾಡಬೇಕಲ್ವಾ ಎಂದಿದ್ದಾರೆ ಹೆಸರು ಹೇಳಲಿಚ್ಛಿಸದ ಶಿಕ್ಷಕಿ ಸೇಡಂ

**ಮನೆ ಲೊಕೇಶನ್ ಸಿಗದೆ ಪರದಾಟ**

**ಪ್ರತಿ ಗಣತಿದಾರರಿಗೆ 115 ಮನೆಗಳನ್ನು ಒಪ್ಪಿಸಲಾಗಿದೆ. ಇದರಲ್ಲಿಪ್ರತಿ ದಿನ 10 ಮನೆಗಳನ್ನು ಸಮೀಕ್ಷೆ ಮಾಡಬೇಕು. ಹಲವು ದಿನಗಳ ಹಿಂದೆಯೇ ಯುಎಚ್ ಐಡಿ (ಯುನಿಕ್ ಹೌಸ್ ಹೋಲ್ಡ್ ಐಡೆಂಟಿಟಿ) ಸ್ಟಿಕರ್ ಗಳನ್ನು ಮನೆಗಳಿಗೆ ಅಂಟಿಸಲಾಗಿದೆ. ಈ ಯುಎಚ್ ಐಡಿ ನಂಬರ್ ಸಮೀಕ್ಷೆ ಆ್ಯಪ್‌ನಲ್ಲಿ ನೋಂದಣಿ ಮಾಡಿದ ತಕ್ಷಣವೇ ನ್ಯಾವಿಗೇಷನ್ ಓಪನ್ ಆಗುತ್ತದೆ. ಅದನ್ನು ಕ್ಲಿಕ್ ಮಾಡಿದ ನಂತರ ಮನೆಯ ಲೊಕೇಶನ್ ತೋರಿಸುತ್ತದೆ. ಲೊಕೇಶನ್ ತೋರಿಸುವ ಕಡೆ ಹೋಗಿ ಮನೆ ಹುಡಕಬೇಕು. ಆದರೆ, ಸರಿಯಾಗಿದ್ದರೆ ನ್ಯಾವಿಗೇಷನ್ ಮನೆ ಮುಂದೆ ಹೋಗಿ ನಿಲ್ಲಿಸುತ್ತದೆ. ಸರಿಯಾಗಿಲ್ಲದ ಕಡೆ ಎಲ್ಲಿಗೋ ಹೋಗಿ ನಿಲ್ಲಿಸುತ್ತಿರುವುದರಿಂದ ಮನೆಗಳೇ ಸಿಗದೆ ಗಣತಿದಾರರು ಹೈರಾಣಾಗುತ್ತಿದ್ದಾರೆ.**

ಮನೆಗಳಲ್ಲಿ ಯುಎಚ್ಐಡಿ ಸ್ಟಿಕರ್ ಜನರು ತೆಗೆದಿದ್ದರೆ ಹೊಸದಾಗಿ ಯುಎಚ್ಐಡಿ ಕ್ರಿಯೇಟ್ ಮಾಡಲು ಅವಕಾಶವಿದೆ. ಹೊಸದಾಗಿ ಕ್ರಿಯೇಟ್ ಮಾಡಿ ಸರ್ವೇ ನಡೆಸಬಹುದು. ಮನೆಗಳ ಲೊಕೇಶನ್ ಸಿಗದಿದ್ದರೆ ಪ್ರೂತ್ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು. ಮಾಡಿಕೊಂಡ ನಂತರ ಪರ್ಮಿಶನ್ ಆಕ್ಸೆಸ್ ಕೊಟ್ಟರೆ ಮಾತ್ರ ಸರಿಯಾಗಿ ಲೊಕೇಶನ್ ತೋರಿಸುತ್ತದೆ ಎಂದಿದ್ದಾರೆ ಸೋಮಶೇಖರ್, ಡಿಡಿ ಬಿಸಿಎಂ ಇಲಾಖೆ ಕಲಬುರಗಿ.

## ಮಿನಿ ನ್ಯೂಸ್

### ಭೋರ್ಗರೆಯುತ್ತಿರುವ ಭೀಮಾ ನದಿತೀರದ ಜನರಿಗೆ ತಾಲ್ಲೂಕಾಡಳಿತ ಜಾಗೃತೆ

• ಉದಯವಾಹಿನಿ ಅಫಜಲಪುರ

ನೆರೆಯ ರಾಜ್ಯ ಮಹಾರಾಷ್ಟ್ರದ ಉಜನಿ, ಸೀನಾ ಮತ್ತು ಬೋರಿ ಹಳ್ಳದಿಂದ ಅಪಾರ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ಭೀಮಾ ನದಿಯ ಒಳ ಹರಿವು ಪ್ರಮಾಣ 2,75,000 ಹೆಚ್ಚಾಗಿದೆ ಎಂದು ತಹಶೀಲ್ದಾರ ಸಂಜೀವಕುಮಾರ ದಾಸರ ಮಾಹಿತಿ ನೀಡಿದರು.

ತಾಲ್ಲೂಕಿನ ಸೊನ್ನ ಬ್ಯಾರೇಜ್‌ನಿಂದ 2,75,000 ಕ್ಯೂಸೆಕ್ ನೀರು ಹೊರ ಬಿಡುತ್ತಿರುವ ಕಾರಣದಿಂದ ನದಿ ಪಾತ್ರದಲ್ಲಿ ವಾಸ ಮಾಡುವ ಸಾರ್ವಜನಿಕರು, ಕುರಿಗಾಯಿಗಳು,ಮೀನುಗಾರರು ಮತ್ತು ಸಾರ್ವಜನಿಕರು ನದಿ ದಡದ ಹತ್ತಿರ ಹೋಗದಂತೆ ಜಾಗರೂಕತೆಯಿಂದ ಇರಬೇಕು. ಈಗಾಗಲೇ ನದಿ ಪಾತ್ರದಲ್ಲಿ ಇರುವ ಗ್ರಾಮದ ಜನರನ್ನು ಬೇರೆ ಕಡೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಕೆಲವು ಜನರು ತಮ್ಮ ಸಂಬಂಧಿಕರ ಮನೆಯಲ್ಲಿ ಸುರಕ್ಷಿತವಾಗಿ ವಾಸವಾಗಿದ್ದಾರೆ. ಯಾವುದೇ ರೀತಿಯ ಅನಾಹುತ ಆಗದಂತೆ ಜಿಲ್ಲಾಡಳಿತ ಮತ್ತು ತಾಲ್ಲೂಕಾಡಳಿತ ಎಲ್ಲಾ ರೀತಿಯಲ್ಲಿ ಸಿದ್ದತೆ ಮಾಡಿಕೊಂಡಿದೆ ಎಂದು ತಾಲ್ಲೂಕು ದಂಡಾಧಿಕಾರಿ ಪತ್ರಿಕಾ ಹೇಳಿಕೆ ಮೂಲಕ ತಿಳಿಸಿದ್ದಾರೆ.

### 38 ಲಕ್ಷ ಮೌಲ್ಯದ ಪಾನ್ ಮಸಾಲಾ, ತಂಬಾಕು ಪಾಕೆಟ್ ಜಪ್ತಿ

• ಉದಯವಾಹಿನಿ ಭಾಲ್ಕಿ

ಭಾಲ್ಕಿ ಉಪವಿಭಾಗದ ಮೇಹಕರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಪರವಾನಗಿ ಇಲ್ಲದೆ ಅಕ್ರಮವಾಗಿ ಮಹಾರಾಷ್ಟ್ರದ ಪುಣೆಗೆ ಕಂಟೇನರ್‌ನಲ್ಲಿ ಕೊಂಡೊಯ್ಯುತ್ತಿದ್ದ ಸುಮಾರು 38 ಲಕ್ಷ ಮೌಲ್ಯದ ಪಾನ್ ಮಸಾಲಾ, ತಂಬಾಕು ಪಾಕೆಟ್‌ಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ರಾತ್ರಿ ಬೀದರ್‌ನಿಂದ ಪುಣೆನಗರಕ್ಕೆ ಅಕ್ರಮವಾಗಿ ಕೊಂಡೊಯ್ಯುತ್ತಿದ್ದ ವಾಹನದ ಮೇಲೆ ಮೇಹಕರ ಠಾಣೆಯ ಪಿಎಸ್ಐ ಸುದರ್ಶನ್ ರೆಡ್ಡಿ, ಎಎಸ್ ಐ ಚಂದ್ರಕಾಂತ, ಪಿಸಿ ಪ್ರಕಾಶ ಅವರ ತಂಡ ದಾಳಿ ನಡೆಸಿ 25440 ಸಾಮ್ರಾಟ ಪಾನ್ ಮಸಾಲಾ ಪಾಕೆಟ್ ಗಳ ಅಂದಾಜು ಮೌಲ್ಯ 31 ಲಕ್ಷ ರೂಪಾಯಿ, 25440 ಎಸ್.ಟಿ-1 ಸೆಂಟೆಡ್ ತಂಬಾಕು ಪಾಕೆಟ್‌ಗಳ ಅಂದಾಜು ಮೌಲ್ಯ 7 ಲಕ್ಷ ರೂ. ಸೇರಿದಂತೆ ಒಟ್ಟು 38 ಲಕ್ಷ ಮೌಲ್ಯದ ಪಾನ್ ಮಸಾಲಾ, ತಂಬಾಕು ಪಾಕೆಟ್‌ಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಅಕ್ರಮ ಪಾನ್ ಮಸಾಲಾ ಸಾಗಾಟಕ್ಕೆ ಬಳಸುತ್ತಿದ್ದ ವಾಹನವನ್ನು ಜಪ್ತಿ ಮಾಡಿ ಆರೋಪಿತನನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ.

### ಬೆಳೆ ನಾಶ: ಕುಸಿದ ಬೆಲೆ: ರೈತನ ಸಂಕಟ

• ಉದಯವಾಹಿನಿ ಲಕ್ಷ್ಮೇಶ್ವರ

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಬಿತ್ತಿ ಬೆಳೆದ ಬಹುತೇಕ ಬೆಳೆಗಳು ವಿಪರೀತ ಮಳೆಯಿಂದಾಗಿ ನಾಶವಾಗಿದ್ದು ಅಳಿದುಳಿದ ಉತ್ಪನ್ನಗಳಿಗೆ ಬೆಲೆಯೂ ಬಾರದೆ ರೈತರು ಸಂಕಷ್ಟವನ್ನು ಎದುರಿಸುತ್ತಿದ್ದಾರೆ.

ಈಗ ಈರುಳ್ಳಿ ಬೆಳೆ ಕಟಾವಿಗೆ ಬಂದಿದ್ದು ಬಂದಿರುವ ಈರುಳ್ಳಿ ಮಾರುಕಟ್ಟೆಯಲ್ಲಿ ಅತ್ಯಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿದ್ದು ಈರುಳ್ಳಿ ಬೆಳೆದ ಬೆಳೆಗಾರರು ಕಣ್ಣೀರು ಹಾಕುತ್ತಿದ್ದಾರೆ ಒಂದು ಕಡೆ ಬೆಲೆ ಕುಸಿತಾ ಮತ್ತೊಂದು ಕಡೆ ಬಂದಿರುವ ಬೆಳೆಗಳನ್ನು ಸಂರಕ್ಷಿಸದಿದ್ದರೆ ಮಳೆಗೆ ತುತ್ತಾಗುವ ಭೀತಿಯಲ್ಲಿ ಪ್ರತಿನಿತ್ಯ ರೈತ ಸಂಕಟದಲ್ಲಿ ಸಿಲುಕಿದ್ದಾರೆ ಒಂದು ವಾರದಿಂದ ಮತ್ತೆ ಮೋಡಮುಸುಕಿದ ವಾತಾವರಣವಿರುವುದರಿಂದ ಈರುಳ್ಳಿ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿದೆ. ತಾಲ್ಲೂಕಿನ ಲಕ್ಷ್ಮೇಶ್ವರ ಅಡರಕಟ್ಟಿ ಗೊಜನೂರು ಯಳವತ್ತಿ ಎತ್ತಿನಹಳ್ಳಿ ಮಾದಳ್ಳಿ ಬಸಾಪುರ ರಾಮಗಿರಿ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಬೆಳೆಯುವ ಈರುಳ್ಳಿ ಬೆಳೆಗಾರರು ಈಗ ಬಂದಿರುವ ಈರುಳ್ಳಿ ಉತ್ಪನ್ನನ್ನು ಮಾರುಕಟ್ಟೆಗೆ ಮಾರಾಟಕ್ಕೆ ತೆಗೆದುಕೊಂಡು ಹೋದರೆ ಕೇವಲ 500 ರಿಂದ 800 ಮತ್ತು ಸಾವಿರ ರೂಪಾಯಿಗಳಿಗೆ ಪ್ರತಿ ಕ್ವಿಂಟಲ್ಲಿಗೆ ಬೆಲೆ ಬರುತ್ತಿದೆ ಪ್ರತಿ ಎಕರೆಗೆ ಸಾವಿರಾರು ರೂಪಾಯಿ ಖರ್ಚು ಮಾಡಿರುವ ರೈತರು ಈಗ ಉತ್ಪನ್ನ ಪಡೆದು ಸಂಭ್ರಮಿಸಬೇಕಾಗಿದ್ದವರು ಸಂಕಷ್ಟವನ್ನು ಎದುರಿಸುವಂಥಾಗಿದೆ.

## ಸಾಂಕ್ರಾಮಿಕ ರೋಗದ ಭೀತಿಯಲ್ಲಿ ಅಜಲಾಪೂರ ಗ್ರಾಮದ ನಿವಾಸಿಗಳು: ಉಮೇಶ್ ಕೆ ಮುದ್ನಾಳ ಆಕ್ರೋಶ

• ಉದಯವಾಹಿನಿ ಯಾದಗಿರಿ

ಸೈದಾಪೂರ ಸಮೀಪ ಗುರುಮಠಕಲ್ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಅಜಲಾಪೂರ ಗ್ರಾಮ ಸ್ವಾತಂತ್ರ್ಯ ಸಿಕ್ಕು 78 ವರ್ಷ ಗತಿಸಿದರು ಇಲ್ಲಿಯವರೆಗೂ ಇನ್ನು ಅಭಿವೃದ್ಧಿ ಕಾಣದೇ ಗಬ್ಬೆದ್ದು ನಾರುತ್ತಿದೆ. ಕಲುಷಿತ ನೀರಿನಲ್ಲಿ ವಿಷ ಜಂತವಳಿಂದ ಸಾರ್ವಜನಿಕರು ಶಾಲಾ ಮಕ್ಕಳು ತಿರಿಗಾಡಲು ಭಯದ ವಾತಾವರಣ ನಿರ್ಮಾಣವಾಗಿದೆ.

ಸೂಕ್ತವಾದ ಚರಂಡಿ ಸಿಸಿ ರಸ್ತೆ ಇಲ್ಲದ ಕಾರಣ ನಿರಂತರ ಮಳೆಗೆ ತೆಗ್ಗುಗುಂಡಿಗಳಲ್ಲಿ ಚರಂಡಿ ಮತ್ತು ಮಳೆ ನೀರು ನಿಂತು ಗಬ್ಬೆದ್ದು ನಾರುತ್ತಿದೆ ಇದರಿಂದಾಗಿ ಗ್ರಾಮದ ನಿವಾಸಿಗಳು ಮೂಗು ಮುಚ್ಚಿಕೊಂಡು ತಿರುಗಾಡುವ ಪರಿಸ್ಥಿತಿ ನಿರ್ಮಾಣವಾಗಿದೆ ಇದನ್ನು ಸರಿಪಡಿಸಬೇಕೆಂದು ಸಾಮಾಜಿಕ ಹೋರಾಟಗಾರ ಹಾಗೂ ಅಖಿಲ ಭಾರತೀಯ ಸಮಾಜದ ರಾಜ್ಯ ಸಂಘಟನಾ ಕಾರ್ಯದರ್ಶಿಗಳು ಉಮೇಶ ಕೆ. ಮುದ್ನಾಳ ಇಂದು ಅಜಲಾಪೂರ ಗ್ರಾಮದಲ್ಲಿ ಪಂಚಾಯಿತಿಗೆ ಜಾಲಿಮುಳ್ಳು ಹಚ್ಚಿ, ಹಿಂದ ಪ್ರತಿಭಟನೆ ಎಚ್ಚರಿಕೆ ನೀಡಿದ ಪತ್ರಿಕೆಯಲ್ಲಿ ಪ್ರಕಟವಾದ ಜಿರಾಕ್ಸ್ ಪ್ರತಿಗಳನ್ನು ಹಿಡಿದು ವಿನೂತನ ಬೃಹತ್ ಪ್ರತಿಭಟನೆ


ಉದಯವಾಹಿನಿ ಚಿತ್ರ

ಮೂಲಕ ಸರ್ಕಾರಕ್ಕೆ ಮತ್ತು ಜಿಲ್ಲಾಡಳಿತಕ್ಕೆ ಆಗ್ರಹಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಪ್ರತಿಭಟನಾ ಸ್ಥಳದಲ್ಲೇ ತರಾಟೆಗೆ ತೆಗೆದುಕೊಂಡರು ಅಧಿಕಾರಿಗಳು ಶೀಘ್ರದಲ್ಲೆ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಬರವಸೆ ನೀಡಿದರು.

ಅಧಿಕಾರಿಗಳ, ಸಿಬ್ಬಂದಿಗಳ ಕಳ್ಳಾಟದಿಂದ ಗ್ರಾಮ ಪಂಚಾಯಿಗೆ ಬಂದಿದ್ದ ಲಕ್ಷ ಲಕ್ಷ ರೂ. ಗಳು ಗ್ರಾಮದ ಅಭಿವೃದ್ಧಿಗೆ ಬಂದ ಹಣ ಯಾರ ಮನೆಯ ತಿಜೋರಿ ಸೇರಿದೆ ಎಂಬುದು ಅರ್ಥವಾಗದ ಪರಿಸ್ಥಿತಿ ಗ್ರಾಮದಲ್ಲಿ ಇದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.

> **ಅಜಲಾಪೂರ ಗ್ರಾಮದಲ್ಲಿ ಸುಮಾರ 26ಕ್ಕೂ ಹೆಚ್ಚು ಬೇಡಿಕೆಗಳನ್ನು ಹಿಡಲಾಗಿದ್ದು ಈ ಬೇಡಿಕೆಗಳನ್ನು ಅತಿ ಶೀಘ್ರದಲ್ಲೆ ಸಮಸ್ಯೆಗಳನ್ನು ಅಂತ ಅಂತವಾಗಿ ಬಗೆಹರಿಸುವುದಾಗಿ. ಭರವಸೆ ನೀಡಿದ ಹಿನ್ನಲೆ ಪ್ರತಿಭಟನೆ ಹಿಂಪಡಿಯಲಾಯಿತು ಒಂದು ವೇಳೆ ಒಂದು ವಾರದಲ್ಲೇ ಸಮಸ್ಯೆಗಳಿಗೆ ಇಥ್ಯರ್ತ ಮಾಡದಿದ್ದಲ್ಲಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳಬೇಕು.**
> **-ಉಮೇಶ್ ಕೆ ಮುದ್ನಾಳ್ ಸಾಮಾಜಿಕ ಹೋರಾಟಗಾರ ಯಾದಗಿರಿ**

## ಎಸ್.ಎಲ್.ಬೈರಪ್ಪನವರ ನಿಧನಕ್ಕೆ ಸಂತಾಪ

• ಉದಯವಾಹಿನಿ, ಚಿಂಚೋಳಿ

ಕನ್ನಡ ಸಾಹಿತ್ಯದ ಸಂತ ಎಸ್.ಎಲ್.ಬೈರಪ್ಪನವರನ್ನು ಕಳೆದುಕೊಂಡ ಕನ್ನಡ ಸಾಹಿತ್ಯ ಲೋಕ ಬಡವಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಪಾಲಾಮೂರ್ ಹಾಗೂ ಕಸಾಪ ಅಧ್ಯಕ್ಷ ಸುರೇಶ ದೇಶಪಾಂಡೆ ಸಂತಾಪ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿದ ಅವರು, ಸಂತೇಶಿವರ ಲಿಂಗಣ್ಣಯ್ಯ ಬೈರಪ್ಪ ಆಧುನಿಕ ಕನ್ನಡ ಸಾಹಿತ್ಯದ ಕಾದಂಬರಿಕಾರರು ಮತ್ತು ಲೇಖಕರು, ಕನ್ನಡ ಭಾಷೆಯಲ್ಲಿ ಪುಸ್ತಕಗಳನ್ನು ಬರೆದಿರುವ ಇವರ ಕೃತಿಗಳು ಇಂಗ್ಲೀಷ್ ಹಾಗೂ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಭಾರತದ ಸಾಹಿತ್ಯ ವಲಯದಲ್ಲಿ ಹೆಸರಾಗಿದ್ದಾರೆ.



ಇವರ ಕಾದಂಬರಿಗಳು ಹಲವಾರು ಮರು ಮುದ್ರಣಗಳನ್ನು ಕಂಡು ಕನ್ನಡದ ಜನಪ್ರಿಯ ಬರಹಗಾರರಾಗಿದ್ದಾರೆ,ಇವರಿಗೆ ಭಾರತ ಸರ್ಕಾರವು 2023ನೇ ಸಾಲಿನಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

ಅವರನ್ನು 1999ರಲ್ಲಿ ಕನಕಪೂರದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅತಿ ಸಮೀಪದಿಂದ ನೋಡಿದ್ದು ಅವರ ಮಂದ್ರ,ಆವರಣ,ವಂಶವೃಕ್ಷ, ಪರ್ವ, ದಾಟು,ಕಾವಲು,ವಂಶವೃಕ್ಷ, ತಬ್ಬಲಿ ನೀನಾದೆ ಮಗನೆ ಮುಂತಾದ ಕಾದಂಬರಿಗಳನ್ನು ಓದಿದ್ದೇನೆ ಈಗಲೂ ನನ್ನ ಮನೆಯ ಪುಸ್ತಕ ಬಂಡಾರದಲ್ಲಿವೆ. ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ ಹಿರಿಯ ಚೇತನಕ್ಕೆ ಸಾವಿರದ ಶರಣು ಎಂದು ಕಸಾಪ ನಿಕಟಪೂರ್ವ ಅಧ್ಯಕ್ಷ ಡಾ.ಮಲ್ಲಿಕಾರ್ಜುನ ಪಾಲಾಮೂರ್ ಸಂತಾಪ ವ್ಯಕ್ತಪಡಿಸಿದ್ದಾರೆ.

## ಸಂಘಗಳಿಗೆ ಶೇರುದಾರರೇ ಆಧಾರ ಸ್ಥಂಭ: ಸಂಗಮೇಶ

• ಉದಯವಾಹಿನಿ ಯಲಬುರ್ಗಾ

ಬೆಳವಣಿಗೆಗೆ ತಮ್ಮ ಠೇವಣಿಗಳನ್ನು ಸಂಘದಲ್ಲಿಯೇ ಇಡಲು ಪ್ರಯತ್ನಿಸಬೇಕು. ಇಲ್ಲಿಯ ಹಿರಿಯರು ಬಹಳ ಕಷ್ಟಪಟ್ಟು ಈ ಸಂಘವನ್ನು ಸ್ಥಾಪಿಸಿದ್ದಾರೆ ಅದನ್ನು ಬೆಳೆಸಿಕೊಂಡು ಹೋಗುವ ಕಾರ್ಯ ಮುನ್ನಡೆಯಬೇಕು ಎಂದು ಲೆಕ್ಕ ಪರಿಶೋಧಕರು ಕೊಪ್ಪಳ ಸಂಗಮೇಶ ದೇಸಾಯಿ ಹೇಳಿದರು.

ತಾಲ್ಲೂಕಿನ ಮುಧೋಳ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಕರಮುಡಿ. ಹಿರೇಮ್ಯಾಗೇರಿ. ಎಚ್ ಸೋಂಪುರ್. ಈ ಗ್ರಾಮಗಳನ್ನು ಹೊಂದಿಕೊಂಡಿರುತ್ತದೆ. ಮುಧೋಳ ಗ್ರಾಮ ಪಂಚಾಯತಿ ಕಾರ್ಯಾಲಯ ಆವರಣದ ಮುಂಭಾಗದಲ್ಲಿ ಬುಧವಾರ ಏರ್ಪಡಿಸಿದ್ದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಜ್ಯೋತಿ ಬೆಳಗುವುದರ ಮೂಲಕ 49ನೇ ವಾರ್ಷಿಕ ಮಹಾ ಸಭೆಯಲ್ಲಿ ಅವರು ಮಾತನಾಡಿದರು. ಪ್ರಸ್ತವಿಕವಾಗಿ ಮಾತನಾಡಿದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ


ಉದಯವಾಹಿನಿ ಚಿತ್ರ

ಸಂಘದ ನಿರ್ದೇಶಕರು ಬಸನಗೌಡ ಅವರು ಮಾತನಾಡಿ ನಮ್ಮ ಸಂಘದಲ್ಲಿ 74.99 ಲಕ್ಷ ಷೇರು ಬಂಡವಾಳ 369.69 ಲಕ್ಷ ಠೇವಣಿಯನ್ನು ಸದರಿ ನಮ್ಮ ಸಂಘವು 820.49 ಲಕ್ಷ ಸಾಲ 2025 ಕ್ಕೆ ಹೊರ ಬಾಕಿಯನ್ನು ಆರ್ ಡಿ ಸಿ ಸಿ ಬ್ಯಾಂಕ್‌ನಿಂದ 2.24.485. ಇಫ್ಕೊ ಸಂಸ್ಥೆಯವರಿಂದ 91.600 ಡಿವಿ ಡೆಂಟ್ ಅನ್ನು ಪಡೆದುಕೊಂಡಿದೆ. ಮತ್ತು ನಮ್ಮ ಸಂಘದ ನಿವ್ವಳ ಲಾಭ 8.99.261 ರೂ. ಲಕ್ಷ ಗಳಿಸಿದೆ ಎಂದು ತಿಳಿಸುತ್ತಾ ಇವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಿದರು.

## ಜಿಲ್ಲಾ ಆಯುಷ್ ಇಲಾಖೆ ವತಿಯಿಂದ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

• ಉದಯವಾಹಿನಿ ಚಿತ್ರದುರ್ಗ

ದಿನಾಂಕ 23/09/2025 10ನೇ ಆಯುರ್ವೇದ ದಿನಾಚರಣೆಯ ಮತ್ತು ಧನ್ವಂತರಿ ಜಯಂತಿಯ ಅಂಗವಾಗಿ ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ ಹಾಗೂ ಪ್ರಕೃತಿ ಆಯುರ್ವೇದ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಚಿತ್ರದುರ್ಗ ಇವರ ಸಹಯೋಗದಲ್ಲಿ ಒನಕೆ ಓಬವ್ವ ಕ್ರೀಡಾಂಗಣ ಆವರಣದಲ್ಲಿ ಬೆಳಿಗ್ಗೆ 7:00 ಗಂಟೆಗೆ ಆಯುರ್ವೇದ ಜಾಗೃತಿ ಜಾಥ ಹಾಗೂ ಬೆಳಿಗ್ಗೆ 9:00ಗೆ ವೇದಿಕೆ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ನಗರದ ಪ್ರಕೃತಿ ಆಯುರ್ವೇದ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಪ್ರಕೃತಿ ಆಯುರ್ವೇದ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಸಂಸ್ಥಾಪಕರಾದ ರಘು ಚಂದನ್ ಇವರು ಧನ್ವಂತರಿ ಫೋಟೋಗೆ ಪುಷ್ಪವನ್ನು ಸಮರ್ಪಿಸುವ ಮೂಲಕ


ಉದಯವಾಹಿನಿ ಚಿತ್ರ

ಹಾಗೂ ದೀಪಜ್ಯೋತಿಯನ್ನು ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ಚಿತ್ರದುರ್ಗ ತಾಲ್ಲೂಕು ಅಳಗವಾಡಿ ಗ್ರಾಮದ ಆಯುಷ್ ಆರೋಗ್ಯ ಮತ್ತು ಕ್ಷೇಮ ಮಂದಿರದ ಆಡಳಿತ ವೈಜ್ಞಾಧಿಕಾರಿ ಡಾ. ನಾರದಮುನಿ.ಜಿ ಬಿ ಆಯುರ್ವೇದ ದಿನಾಚರಣೆ ಕುರಿತು ಮಾತನಾಡಿ ಆಯುರ್ವೇದವು ಭಾರತದ ಒಂದು ಪುರಾತನ ವೈದ್ಯಕೀಯ ಪದ್ಧತಿಯಾಗಿದೆ. ಇದನ್ನು ವಿಶ್ವಾದ್ಯಂತ ಜನಪ್ರಿಯಗೊಳಿಸುವುದು ಮತ್ತು ಅದರ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಆಯುರ್ವೇದದ ದೇವತೆಯಾದ ಧನ್ವಂತರಿಯ ಜನ್ಮದಿನದಂದು ಈ ದಿನವನ್ನು ಆಚರಿಸಲಾಗುತ್ತದೆ. ಆಯುರ್ವೇದ ಜ್ಞಾನ ಮತ್ತು ಔಷಧೀಯ ವ್ಯವಸ್ಥೆಗಳಿಗೆ ಧನ್ವಂತರಿ ಮುನಿಗಳು ನೀಡಿದ ಕೊಡುಗೆಯನ್ನು ಸ್ಮರಿಸುವುದು.

> **ಯೋಗ, ಧ್ಯಾನ, ಉತ್ತಮ ಆಹಾರ ಮತ್ತು ಜೀವನಶೈಲಿ ಮುಂತಾದ ಆಯುರ್ವೇದದ ಮೂಲಭೂತ ತತ್ವಗಳನ್ನು ಪ್ರಚಾರ ಮಾಡುವ ಮೂಲಕ ಆಹಾರವೇ ಔಷಧ ಎಂಬ ಪರಿಕಲ್ಪನೆಯನ್ನು ಜನರಿಗೆ ತಿಳಿಯಪಡಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಆಯುರ್ವೇದದ ಅರಿವು ಇರುವವರಿಗೆ ರೋಗದ ಭಯ ಇರುವುದಿಲ್ಲ. -ಡಾ. ನಾರದಮುನಿ.ಜಿ ಬಿ**

### ಪೋಷಣ ಅಭಿಯಾನ: ಮಕ್ಕಳ ಆರೋಗ್ಯದ ಭವಿಷ್ಯ ರೂಪಿಸುವ ಶಕ್ತಿಯುತ ಹಾದಿ

• ಉದಯವಾಹಿನಿ ಧಾರವಾಡ

ಪೋಷಣ ಅಭಿಯಾನವು ಮಕ್ಕಳ ಭವಿಷ್ಯಯವನ್ನು ಬದಲಾಯಿಸುವ ಶಕ್ತಿಯುತ ಕಾರ್ಯಕ್ರಮವಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಮತ್ತು ಆರೋಗ್ಯ ಸಿಬ್ಬಂದಿ ಒಟ್ಟಾಗಿ ಪೋಷಣ ಕಾರ್ಯದಲ್ಲಿ ನಿರಂತರ ಶ್ರಮಿಸುತ್ತಿದ್ದಾರೆ. ಇದರಿಂದ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಸಾಧ್ಯವಾಗುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಭುವನೇಶ ಪಾಟೀಲ ಅವರು ಹೇಳಿದರು.

ಅವರು ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಧಾರವಾಡ ಇವರ ಸಂಯುಕ್ತಾಶ್ರಯದಲ್ಲಿ ಜರುಗಿದ ಜಿಲ್ಲಾ ಮಟ್ಟದ 8 ನೇ ರಾಷ್ಟ್ರೀಯ ಪೋಷಣ ಮಾಸಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು. ವಿಶೇಷವಾಗಿ ಮಕ್ಕಳಿಗೆ ಆದಷ್ಟು ಸಕ್ಕರೆ ಆಹಾರ ಕಡಿಮೆ ಕೊಡಬೇಕು. ಶಿಶುವಿಗೆ ಮೊದಲ ಆರು ತಿಂಗಳು ತಾಯಿ ಹಾಲೇ ಶ್ರೇಷ್ಠ ಆಹಾರ. ಆ ನಂತರ ದ್ರವ ರೂಪದ ಪೌಷ್ಟಿಕ ಆಹಾರವನ್ನು ನೀಡಿದರೆ ಮಕ್ಕಳ ಆರೋಗ್ಯವೂ ಉತ್ತಮವಾಗಿರುತ್ತದೆ.

ಹಸಿರು ಸೊಪ್ಪು, ಸಿರಿಧಾನ್ಯ, ಹಣ್ಣುಗಳು ನಮ್ಮ ಮನೆಗಳಲ್ಲಿ ದೊರೆಯುವ ಸರಳ ಪೋಷಕ ಆಹಾರ. ಇವುಗಳನ್ನು ಮಕ್ಕಳ ದಿನನಿತ್ಯದ ಆಹಾರದಲ್ಲಿ ಸೇರಿಸುವುದರಿಂದ ಪೌಷ್ಠಿಕತೆಯ ಕೊರತೆ ಆಗದಂತೆ ಮಾಡಬಹುದು ಎಂದು ಹೇಳಿದರು.

### ಹೆಣ್ಣು ಮಕ್ಕಳಲ್ಲಿ ಸಾಧಿಸುವ ಛಲ

• ಉದಯವಾಹಿನಿ ಮೂಡುಬಿದಿರೆ

ಮಹಿಳಾ ಸ್ವಾವಲಂಬನೆ ಸಮಾಜದ ಪ್ರಗತಿಯ ಮೂಲವಾಗಿದೆ. ಹೆಣ್ಣುಮಕ್ಕಳಿಗೆ ಕನಸು ಕಾಣಲು ಹಕ್ಕು ಇದೆ. ಸಾಧಿಸಲು ಶಕ್ತಿ ಇದೆ ಎಂದು ಪುರಸಭೆ ಮುಖ್ಯಾಧಿಕಾರಿ ಅಭಿಪ್ರಾಯಪಟ್ಟರು.

ಎಕ್ಸಲೆಂಟ್ ಶಿಕ್ಷಣ ಸಂಸ್ಥೆಯಲ್ಲಿ ಪ್ರಯುಕ್ತ ನವರಾತ್ರಿಯ ನವರಾತ್ರಿ-ನವಶಕ್ತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಂಸ್ಥೆಯ ಕಾರ್ಯದರ್ಶಿ ರಶ್ಮಿತಾ ಜೈನ್ ಮಾತನಾಡಿ, ನವರಾತ್ರಿ ಕಾರ್ಯಕ್ರಮವು ಆಧ್ಯಾತ್ಮಿಕತೆಯ ಜತೆಗೆ ಹೆಣ್ಣಿನ ಮಹತ್ವವನ್ನು ಬಿಂಬಿಸುತ್ತದೆ. ಹೆಣ್ಣು ತನ್ನ ಜೀವನದಲ್ಲಿ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾಳೆ. ನವರಾತ್ರಿಯು ಹೆಣ್ಣಿನ ಶಕ್ತಿಯ ಪ್ರತೀಕ ಎಂದು ಹೇಳಿದರು. ಶಾರದಾದೇವಿಗೆ ಪುಷ್ಪ ಅರ್ಪಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. ಸಂಸ್ಥೆಯ ಅಧ್ಯಕ್ಷ ಯುವರಾಜ್ ಜೈನ್ ಅವರ ತಾಯಿ ಪದ್ಮಾವತಿ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು. ಅಮರಾಜಿ, ಸುಮಿತ್ರಾ, ಚಂದನಾ, ದೀಪಾ ಉಮೇಶ್ ರಾವ್, ಅನಿತಾ ಸಿಕ್ಕೇರಾ ಅವರನ್ನು ಸನ್ಮಾನಿಸಲಾಯಿತು.

## ಕೆಪಿಟಿಸಿಎಲ್ ಮತ್ತು ಜೇಸ್ಕಾಂ ನೌಕರರ ಪತ್ತಿನ ಸಹಕಾರ ಸಂಘದ ಚುನಾವಣೆ

### 17 ಸ್ಥಾನಗಳಿಗೆ ಆಡಳಿತ ಮಂಡಳಿ ಆಯ್ಕೆಮಾಡಲು ಒಟ್ಟಾರೆ 51ಜನ ಸ್ಪರ್ಧೆ: ಅಭ್ಯರ್ಥಿಗಳಿಂದ ಭರ್ಜರಿ ಪ್ರಚಾರ

• ಉದಯವಾಹಿನಿ, ಚಿಂಚೋಳಿ

ಕೆಪಿಟಿಸಿಎಲ್ ಮತ್ತು ಜೇಸ್ಕಾಂ ನೌಕರರ ಪತ್ತಿನ ಸಹಕಾರ ಸಂಘದ 2025-2030ನೇ ಅವಧಿಗಾಗಿ ನಡೆಯುವ ಆಡಳಿತ ಮಂಡಳಿ ಸದಸ್ಯರ ಚುನಾವಣೆಯು ಇದೆ ದಿನಾಂಕ 27ರಂದು ಚುನಾವಣೆ ನಡೆಯಲಿದೆ ಬಾಬು ಕೋರೆ ಪ್ಯಾನಲ್‌ಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಬೇಕು ಎಂದು ಸಂಘದ ಹಾಲಿ ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯ ಬಾಬು ಕೋರೆ ಮನವಿ ಮಾಡಿದರು.

ಪಟ್ಟಣದ ಜೇಸ್ಕಾಂ ಇಲಾಖೆಯಲ್ಲಿ ಪ್ರಚಾರಕ್ಕೆ ಆಗಮಿಸಿ ಮಾತನಾಡಿದ ಅವರು 17ಸ್ಥಾನಗಳಿಗೆ ಆಡಳಿತ ಮಂಡಳಿ ಆಯ್ಕೆಮಾಡಲು ಒಟ್ಟಾರೆ 51ಜನ ಸ್ಪರ್ಧೆ ಮಾಡಿದ್ದು ಚಿಂಚೋಳಿ-ಸೇಡಂ ವಿಭಾಗದಲ್ಲಿ 147 ಮತಗಳಿದ್ದು,ಜಿಲ್ಲೆಯಲ್ಲಿಯೇ 1884 ಮತಗಳಿವೆ ಎಲ್ಲಾ ಮತದಾರ ಪ್ರಭುಗಳು ನಮ್ಮ ಪ್ಯಾನಲ್‌ಗೆ ಮತವನ್ನು ನೀಡಿ ಗೆಲ್ಲಿಸಬೇಕು ಎಂದರು. ಮುಂದಿನ ದಿನಗಳಲ್ಲಿ ಸಹಕಾರ ಸಂಘದಿಂದ ಸಹಕಾರ ಭವನ ನಿರ್ಮಾಣ, ನೌಕರರಿಗೆ ದೀರ್ಘವಧಿ ಸಾಲವನ್ನು 10ರಿಂದ 15ಲಕ್ಷ ರೂ.ಗೆ


ಉದಯವಾಹಿನಿ ಚಿತ್ರ

> **ಈಗಾಗಲೇ ಎರಡು ಬಾರಿ ಅಧ್ಯಕ್ಷನಾಗಿ ಕೆಪಿಟಿಸಿಎಲ್ ಮತ್ತು ಜೇಸ್ಕಾಂ ನೌಕರರ ಪತ್ತಿನ ಸಹಕಾರ ಸಂಘಕ್ಕೆ ಬಹಳಷ್ಟು ಶ್ರಮಿಸಿ ಕೆಲಸ ಮಾಡಿ ಅನುಕೂಲ ಕಲ್ಪಿಸಿಕೊಟ್ಟಿದ್ದೇನೆ ಇನಷ್ಟು ಕೆಲಸ ಮಾಡಲು ನಮ್ಮ ಪ್ಯಾನಲ್‌ಗೆ ಮತ್ತೊಮ್ಮೆ ಗೆಲ್ಲಿಸಿದರೆ ಬಡ್ಡಿದರ 10ಪ್ರತಿಶತಃ ವಿದ್ದು ಶೇಕಡಾ 08ಕ್ಕೆ ಇಳಿಸಲಾಗುವುದು, ಪ್ರೋತ್ಸಾಹ ಧನ ಹೆಚ್ಚಳಕ್ಕೆ ಶ್ರಮ,ಜೇಸ್ಕಾಂ ನೌಕರರಿಗೆ ಅನುಕೂಲವಾಗುವ ಅನೇಕ ಕೆಲಸಗಳು ಮಾಡಲಾಗುವುದು.**
> **-ಬಾಬು ಕೋರೆ, ಸಂಘದ ಹಾಲಿ ಅಧ್ಯಕ್ಷರು ಆಡಳಿತ ಮಂಡಳಿ ಸದಸ್ಯ**

ಹೆಚ್ಚಿಸಲಾಗುವುದು,02ಲಕ್ಷದವರೆಗೆ ಆರೋಗ್ಯ ಕಾರ್ಡ್ ನೀಡಲಾಗುವುದು,ಪ್ರತಿ ವರ್ಷ ನೌಕರರಿಗೆ ಆರೋಗ್ಯ ಶಿಬಿರ ಮಾಡಲಾಗುವುದು, ಜೇಸ್ಕಾಂ ಕೆಲಸದ ಅವಧಿಯಲ್ಲಿ ನಿಧನ ಹೊಂದಿದ ನೌಕರರಿಗೆ ಕುಟುಂಬ ನಿರ್ವಹಣೆಗೆ 1ಲಕ್ಷ ಮರಣೋತ್ತರ ಪರಿಹಾರ,ಅಂತ್ಯಸಂಸ್ಕಾರಕ್ಕೆ 5ಸಾವಿರದಿಂದ 10ಸಾವಿರಕ್ಕೆ ಹೆಚ್ಚಿಸಲಾಗುವುದು ಎಂದರು.

**ಪ್ರೋತ್ಸಾಹ ಧನ ಹೆಚ್ಚಳಕ್ಕೆ ಶ್ರಮ**

**ಸಾಮಾನ್ಯ ಕ್ಷೇತ್ರದ 11 ಅಭ್ಯರ್ಥಿಗಳು:-** ಅನೀಲಕುಮಾರ ಶೇರಿಕಾರ, ಅನೀಲ ಮುಗಳಿ, ನಾಗರಾಜ ಕುಂಬಾರ,ಪ್ರಶಾಂತ ಕೋತ್ತಂಬರಿ, ಬಾಬು ಕೋರೆ, ರಮೇಶ ಕೋಟರಗಸ್ತಿ,ರಾಜಕುಮಾರ ಇಂಡಿ, ವಿಕ್ರಮ ಸಜ್ಜನಶೇಟ್ಟಿ, ವಿನೋದಸಿಂಗ್ ಛತ್ರಪತಿ, ಸಂತೋಷ ವಡಕಿ, ಸುರೇಶ ಗುಗ್ಗುರಿ ಅಭ್ಯರ್ಥಿಗಳು.

**ಮಹಿಳಾ 02 ಅಭ್ಯರ್ಥಿಗಳು:-** ಅರುಣಾದೇವಿ ರಾಜ ಕುಮಾರ, ಜಗದೇವಿ ರಮೇಶ ಪೂಜಾರಿ ಅಭ್ಯರ್ಥಿಗಳು.

**ಪರಿಶೀಷ್ಟ ಜಾತಿ ಕ್ಷೇತ್ರದ 01ಅಭ್ಯರ್ಥಿ:-** ಸುಭಾಷ್ ದೇವರ ಅಭ್ಯರ್ಥಿ.

**ಪರಿಶೀಷ್ಟ ಪಂಗಡ ಕ್ಷೇತ್ರ 01ಅಭ್ಯರ್ಥಿ:-** ಭೀಮರಾವ ವಾಡಿ ಅಭ್ಯರ್ಥಿ.

**ಹಿಂದುಳಿದ ವರ್ಗ 'ಬ' ಕ್ಷೇತ್ರ 01ಅಭ್ಯರ್ಥಿ:-** ಸಂತೋಷ ಬಸಯ್ಯ ಅಭ್ಯರ್ಥಿ.

**ಹಿಂದುಳಿದ ವರ್ಗ ಅಕ್ಷೇತ್ರ 01ಅಭ್ಯರ್ಥಿ:-** ಖುರ್ಷಿದ್ ಅಹ್ಮದ್ ಅಭ್ಯರ್ಥಿಗಳಾಗಿದ್ದಾರೆ ನಮ್ಮ ಪ್ಯಾನಲ್ ಗೆ ಕೆಪಿಟಿಸಿಎಲ್ ಮತ್ತು ಜೇಸ್ಕಾಂ ನೌಕರರು ಮತದಾರರು ಪ್ರಚಂಡ ಬಹುಮತದಿಂದ ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜೇಸ್ಕಾಂ ಇಲಾಖೆ ಎಇಇ ಕಾಮಣ್ಣ ಇಂಜೇಳ್ಳಿ,ಎಸ್‌ಓ ರಾಘವೇಂದ್ರ, ಜೇಸ್ಕಾಂ ನೌಕರರ ಸಂಘದ ಅಧ್ಯಕ್ಷ ಆನಂದ ಪಲ್ಲೊ, ಶ್ರೀಕಾಂತ ನಾಟೀಕಾರ,ಸೇರಿದಂತೆ ಅನೇಕರಿದ್ದರು.

# ಅಮೆರಿಕದಲ್ಲಿ ಡೊನಾಲ್ಡ್ ಟ್ರಂಪ್ ಭೇಟಿ ಮಾಡಿದ ಶೆಹಬಾಜ್ ಷರೀಫ್

**ನ್ಯೂಯಾರ್ಕ್:** ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 80ನೇ ಅಧಿವೇಶನದಲ್ಲಿ ಭಾಗವಹಿಸಿರುವ ಪಾಕಿಸ್ತಾನ ಪಿಎಂ ಶೆಹಬಾಜ್ ಷರೀಫ್, ನ್ಯೂಯಾರ್ಕ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಿದ್ದಾರೆ. ನ್ಯೂಯಾರ್ಕ್‌ನಲ್ಲಿ ಡೊನಾಲ್ಡ್ ಟ್ರಂಪ್ ಮತ್ತು ಕತಾರ್ ಎಮಿರ್ ಶೇಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರು ಜಂಟಿಯಾಗಿ ಆಯೋಜಿಸಿದ್ದ ಅರಬ್ ಇಸ್ಲಾಮಿಕ್ ನಾಯಕರ ಸಭೆಯ ವೇಳೆ, ಶೆಹಬಾಜ್ ಷರೀಫ್ ಅವರು ಅಮೆರಿಕದ ಅಧ್ಯಕ್ಷರನ್ನು ಅನೌಪಚಾರಿಕವಾಗಿ ಭೇಟಿ ಮಾಡಿದ್ದಾರೆ.

ಅರಬ್ ಇಸ್ಲಾಮಿಕ್ ನಾಯಕರ ಶೃಂಗಸಭೆ ಮುಕ್ತಾಯದ ಬಳಿಕ, ಪ್ರಧಾನಮಂತ್ರಿ ಶೆಹಬಾಜ್ ಷರೀಫ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಅನೌಪಚಾರಿಕ ಸಂಭಾಷಣೆ ನಡೆಸಿದರು ಎಂದು ಪಾಕಿಸ್ತಾನದ ಪ್ರಧಾನಿ ಕಚೇರಿ ಮಾಹಿತಿ ನೀಡಿದೆ. ಇಬ್ಬರೂ ನಾಯಕರು ಕೇವಲ 36 ಸೆಕೆಂಡುಗಳ ಕಾಲ ಮಾತುಕತೆ ನಡೆಸಿರುವುದು ಉಲ್ಲೇಖನೀಯ. ಕಳೆದ ವಾರವಷ್ಟೇ ಪಾಕಿಸ್ತಾನಿ ಮಾಧ್ಯಮಗಳು ಪ್ರಧಾನಿ ಶೆಹಬಾಜ್ ಷರೀಫ್, ಸೇನಾಧ್ಯಕ್ಷ ಫೀಲ್ಡ್ ಮಾರ್ಷಲ್ ಅಸೀಮ್ ಮುನೀರ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ನ್ಯೂಯಾರ್ಕ್‌ನಲ್ಲಿ ಭೇಟಿ ಮಾಡಲಿದ್ದಾರೆ ಎಂದು ವರದಿ ಪ್ರಸಾರ ಮಾಡಿದ್ದವು. ಆದರೆ ಅಸೀಮ್ ಮುನೀರ್ ಈ ಸಭೆಗೆ ಗೈರುಹಾಜರಾಗಿದ್ದರು. ಷರೀಫ್ ಅವರು ಅಮೆರಿಕ ಪ್ರವಾಸಕ್ಕೂ ಮೊದಲು ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ್ದು, ಪಾಕಿಸ್ತಾನ-ಸೌದಿ ಅರೇಬಿಯಾ ರಕ್ಷಣಾ ಒಪ್ಪಂದ ಜಾರಿಗೊಂಡಿದೆ.



**ಅಮೆರಿಕ-ಪಾಕ್ ಸಂಬಂಧ:** ಕಳೆದ ಮೇ ತಿಂಗಳಲ್ಲಿ ನಡೆದ ಭಾರತ-ಪಾಕಿಸ್ತಾನ ಮಿಲಿಟರಿ ಸಂಘರ್ಷವನ್ನು ತಡೆಹಿಡಿದಿದ್ದಾಗಿ ಪ್ರತಿಪಾದಿಸಿದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಎರಡು ಪರಮಾಣು ರಾಷ್ಟ್ರಗಳ ನಡುವೆ ಕದನ ವಿರಾಮ ಒಪ್ಪಂದ ಏರ್ಪಡಿಸಿದ್ದಾಗಿ ಘೋಷಿಸಿದರು. ಭಾರತ ಟ್ರಂಪ್ ಅವರ ಈ ವಾದವನ್ನು ತಿರಸ್ಕರಿಸಿತಾದರೂ, ಪಾಕಿಸ್ತಾನ ಮಾತ್ರ ಕದನ ವಿರಾಮ ಒಪ್ಪಂದದಲ್ಲಿ ಟ್ರಂಪ್ ಪಾತ್ರ ಇದೆ ಎಂದು ಹೇಳಿತು.

ಅಲ್ಲದೇ ಭಾರತ-ಪಾಕ್ ನಡುವೆ ಕದನ ವಿರಾಮ ಒಪ್ಪಂದ ಮಾಡಿಸಿದ ಡೊನಾಲ್ಡ್ ಟ್ರಂಪ್ ಅವರಿಗೆ, ನೊಬೆಲ್ ಶಾಂತಿ ಪುರಸ್ಕಾರ ಕೊಡಬೇಕು ಎಂದೂ ಪಾಕಿಸ್ತಾನ ಬೇಡಿಕೆ ಸಲ್ಲಿಸಿದೆ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅಮೆರಿಕ ಮತ್ತು ಪಾಕಿಸ್ತಾನ ನಡುವಿನ ರಾಜತಾಂತ್ರಿಕ ಸಂಬಂಧ ಗಮನಾರ್ಹವಾಗಿ ಸುಧಾರಿಸಿದೆ.


ಪಾಕ್ ಸೇನಾಧ್ಯಕ್ಷ ಫಿಲ್ಡ್ ಮಾರ್ಷಲ್ ಅಸೀಮ್ ಮುನೀರ್ ಈಗಾಗಲೇ ಎರಡು ಬಾರಿ ಅಮೆರಿಕಕ್ಕೆ ಭೇಟಿ ನೀಡಿದ್ದು, ಶ್ವೇತಭವನದಲ್ಲಿ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಡಿನ್ನರ್ ಪಾರ್ಟಿಯಲ್ಲೂ ಭಾಗವಹಿಸಿದ್ದಾರೆ. ಟ್ರಂಪ್ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ದೊರೆಯಬೇಕು ಎಂದು ಈ ವೇಳೆ ಅಸೀಮ್ ಮುನೀರ್ ಹೇಳಿದ್ದರು. ಕಳೆದ ಜೂನ್‌ನಲ್ಲಿ ಮೊದಲ ಬಾರಿಗ ಅಮೆರಿಕ ಪ್ರವಾಸ ಕೈಗೊಂಡಿದ್ದ ಅಸೀಮ್ ಮುನೀರ್, ವ್ಯಾಪಾರ, ಆರ್ಥಿಕ ಅಭಿವೃದ್ಧಿ ಮತ್ತು ಕ್ರಿಪ್ಟೋ ಕರೆನ್ಸಿ ಹೂಡಿಕೆ ಬಗ್ಗೆ ಡೊನಾಲ್ಡ್ ಟ್ರಂಪ್ ಅವರೊಂದಿಗೆ ಚರ್ಚೆ ನಡೆಸಿದ್ದರು. ಇದಕ್ಕೆ ಪೂರಕವಾಗಿ ಅಮೆರಿಕವು ಕಳೆದ ಜುಲೈನಲ್ಲಿ ಪಾಕಿಸ್ತಾನದೊಂದಿಗೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಘೋಷಿಸಿತು. ಅಮೆರಿಕ-ಪಾಕಿಸ್ತಾನ ತೈಲ ಪಾಲುದಾರಿಕೆ ಘೋಷಣೆ ಇಡೀ ಜಗತ್ತಿನ ಗಮನ ಸೆಳೆದಿತ್ತು. ಆ ಬಳಿಕ ಅಸೀಮ್ ಮುನೀರ್ ಮತ್ತೆ ಆ.ನಲ್ಲಿ ವಾಷಿಂಗ್ಟನ್‌ಗೆ ಬಂದು ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಿದರು. ಈ ವೇಳೆ ಇಸ್ಲಾಮಾಬಾದ್ ಮತ್ತು ವಾಷಿಂಗ್ಟನ್ ನಡುವೆ 500 ಮಿಲಿಯನ್ ಅಮೆರಿಕನ್ ಡಾಲರ್ ಹೂಡಿಕೆಯ ಒಪ್ಪಂದ ಏರ್ಪಟ್ಟಿತ್ತು. ಸದ್ಯ ಅಮೆರಿಕ ಪ್ರವಾಸದಲ್ಲಿರುವ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್, ಅನೌಪಚಾರಿಕವಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿ ಮಾಡಿದ್ದು, ಇಬ್ಬರೂ ನಾಯಕರು ಶ್ವೇತಭವನದಲ್ಲಿ ಔಪಚಾರಿಕ ಸಭೆ ನಡೆಸಲಿದ್ದಾರಾ ಎಂಬುದು ಸ್ಪಷ್ಟವಾಗಿಲ್ಲ.

## 2030ರ ಕಾಮನ್‌ವೆಲ್ತ್ ಕ್ರೀಡಾಕೂಟದ ಅತಿಥ್ಯಕ್ಕೆ ಮುಂದಾದ ಗುಜರಾತ್

**ಅಹಮದಾಬಾದ್:** ಮುಂಬರುವ 2030ರ ಕಾಮನ್‌ವೆಲ್ತ್ ಕ್ರೀಡಾಕೂಟವನ್ನು ಅಹಮದಾಬಾದ್‌ನಲ್ಲಿ ಆಯೋಜಿಸುವ ಪ್ರಸ್ತಾವನೆಯನ್ನು ಗುಜರಾತ್ ಸರ್ಕಾರ ಕಾಮನ್‌ವೆಲ್ತ್ ಕ್ರೀಡಾ ಮೌಲ್ಯಮಾಪನ ಸಮಿತಿಗೆ ಔಪಚಾರಿಕವಾಗಿ ಮಂಡಿಸಿದೆ ಎಂದು ತಿಳಿದುಬಂದಿದೆ. ಲಂಡನ್ ಪ್ರವಾಸದಲ್ಲಿರುವ ಭಾರತೀಯ ತಂಡವನ್ನು ಗುಜರಾತ್‌ನ ಕ್ರೀಡಾ ಸಚಿವ ಹರ್ಷ್ ಸಾಂಘವಿ ಮತ್ತು ಭಾರತೀಯ ಒಲಿಂಪಿಕ್ ಅಸೋಸಿಯೇಷನ್ (ಐಒಎ) ಅಧ್ಯಕ್ಷೆ ಪಿ ಟಿ ಉಷಾ ನೇತೃತ್ವ ವಹಿಸಿದ್ದು, ಈ ತಂಡ ಮೌಲ್ಯ ಮಾಪನ ಸಮಿತಿ ಮುಂದೆ ತಮ್ಮ ನಿರ್ಧಾರ ತಿಳಿಸಿದೆ ಎಂದು ವರದಿಯಾಗಿದೆ.

2030 ರ ಆವೃತ್ತಿಯು ಐತಿಹಾಸಿಕ ಮಹತ್ವವನ್ನು ಹೊಂದಿದೆ, ಇದು ಕಾಮನ್ ವೆಲ್ತ್ ಕ್ರೀಡಾ ಚಳವಳಿಯ 100 ವರ್ಷಗಳನ್ನು ಗುರುತಿಸುತ್ತದೆ ಮತ್ತು ಭಾರತದ ಬಿಡ್‌ನಲ್ಲಿ ಈ ಶತಮಾನೋತ್ಸವ ಆವೃತ್ತಿಗೆ ಅಹಮದಾಬಾದ್ ಅನ್ನು ಆತಿಥೇಯ ನಗರವಾಗಿ ಇರಿಸಲಾಗಿದೆ ಎಂದು ಗುಜರಾತ್ ಸರ್ಕಾರದ ಪ್ರಕಟಣೆ ತಿಳಿಸಿದೆ.

ಅಹಮದಾಬಾದ್ ಅಂತರರಾಷ್ಟ್ರೀಯ ಗುಣಮಟ್ಟದ ಸ್ಥಳಗಳು, ದೃಢವಾದ ಸಾರಿಗೆ ವ್ಯವಸ್ಥೆಗಳು ಮತ್ತು ಉತ್ತಮ ಗುಣಮಟ್ಟದ ವಸತಿ ಸೌಕರ್ಯಗಳನ್ನು ಕೇಂದ್ರೀಕರಿಸಿದ ಕಾಂಪ್ಯಾಕ್ಟ್ ಕ್ರೀಡಾ ಹೆಜ್ಜೆಗುರುತನ್ನು ನೀಡುತ್ತದೆ ಎಂದು ಅದು ಹೇಳಿದೆ. ಕ್ರೀಡಾಕೂಟಗಳ ಮರುಹೊಂದಿಸುವಿಕೆಯ ತತ್ವಗಳಿಗೆ ಅನುಗುಣವಾಗಿ, ಈ ಪ್ರಸ್ತಾವನೆಯು ಕೈಗೆಟುಕುವಿಕೆ, ಒಳಗೊಳ್ಳುವಿಕೆ, ನಮ್ಯತೆ ಮತ್ತು ಸುಸ್ಥಿರತೆಗೆ ಬಲವಾದ ಒತ್ತು ನೀಡುತ್ತದೆ. ಇದು ಪ್ಯಾರಾ-ಸ್ಪೋರ್ಟ್‌ನ ಏಕೀಕರಣ, ಮಾನವ ಹಕ್ಕುಗಳ ರಕ್ಷಣೆ, ಲಿಂಗ ಸಮಾನತೆಯ ಪ್ರಚಾರ ಮತ್ತು ಕ್ರೀಡಾಪಟುಗಳು, ಸಮುದಾಯಗಳು ಮತ್ತು ವಿಶಾಲ ಕಾಮನ್‌ವೆಲ್ತ್‌ಗೆ ಕ್ರೀಡಾಕೂಟವನ್ನು ಮೀರಿ ಪ್ರಯೋಜನಗಳನ್ನು ವಿಸ್ತರಿಸುವುದನ್ನು ಖಚಿತಪಡಿಸುವ ದೀರ್ಘಕಾಲೀನ ಪರಂಪರೆಯ ಚೌಕಟ್ಟನ್ನು ಅಳವಡಿಸಲು ಬದ್ಧವಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



# ನೀವೆಲ್ಲರೂ ನರಕಕ್ಕೆ ಹೋಗುತ್ತೀರಿ

## UNGA ವೇದಿಕೆಯಲ್ಲೇ ವಿಶ್ವಸಂಸ್ಥೆ ವಿರುದ್ಧ ಡೊನಾಲ್ಡ್ ಟ್ರಂಪ್ ಒರಟು ಭಾಷಣ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ತಮ್ಮ ವಿಶ್ವಸಂಸ್ಥೆ ಸಾಮಾನ್ಯ ಸಭೆ ಭಾಷಣದಲ್ಲಿ, ವಿಶ್ವಸಂಸ್ಥೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಘಟನೆ ನಡೆದಿದೆ. ಅಕ್ರಮ ವಲಸೆ ವಿಚಾರವಾಗಿ ವಿಶ್ವಸಂಸ್ಥೆಯನ್ನು ಟೀಕಿಸಿದ ಟ್ರಂಪ್, ನೀವೆಲ್ಲರೂ ಸೇರಿ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ನರಕ ಮಾಡುತ್ತಿದ್ದೀರಿ ಎಂದು ಹೇಳುವ ಮೂಲಕ ಅಚ್ಚರಿ ಮೂಡಿಸಿದರು. ವಿಶ್ವಸಂಸ್ಥೆ ಜಾಗತಿಕ ಶಾಂತಿಯನ್ನು ಕಾಪಾಡುವಲ್ಲಿ ವಿಫಲವಾಗಿದೆ ಎಂದು ಗುಡುಗಿರುವ ಡೊನಾಲ್ಡ್ ಟ್ರಂಪ್, ವಿಶ್ವಸಂಸ್ಥೆ ಅಕ್ರಮ ವಲಸೆಯನ್ನು ಪ್ರೋತ್ಸಾಹಿಸುತ್ತಿದೆ ಎಂದು ಗಂಭೀರ ಆರೋಪ ಮಾಡಿದರು. ಪಾಶ್ಚಿಮಾತ್ಯ ದೇಶಗಳ ಮೇಲಿನ ವಲಸೆ ದಾಳಿಯನ್ನು ವಿಶ್ವಸಂಸ್ಥೆ ಪೋಷಿಸುತ್ತಿದೆ ಎಂಬ ಅಮೆರಿಕ ಅಧ್ಯಕ್ಷರ ಹೇಳಿಕೆ ಇದೀಗ ತೀವ್ರ ಚರ್ಚೆಗೆ ಕಾರಣವಾಗಿದೆ. ಡೊನಾಲ್ಡ್ ಟ್ರಂಪ್ ಅವರು ತಮ್ಮ ಇತ್ತೀಚಿಗಿನ ಯುರೋಪ್ ಪ್ರವಾಸದ ವೇಳೆ, ಅಕ್ರಮ ವಲಸೆ ನಿಮ್ಮನ್ನು ಹೊಸಕಿ ಹಾಕಲಿದೆ ಎಂದು ಎಚ್ಚರಿಸಿದ್ದರು.

ತೀವ್ರ ಚರ್ಚೆಗೆ ಕಾರಣ

ಅಕ್ರಮ ವಲಸೆ ಯುರೋಪ್‌ನ್ನು ನರಕ ಮಾಡುತ್ತಿದೆ. ಆದರೆ ವಿಶ್ವಸಂಸ್ಥೆ ಅಕ್ರಮ ವಲಸೆಯನ್ನು ತಡೆಗಟ್ಟುವ ಬದಲು, ಅದನ್ನು ಪ್ರೋತ್ಸಾಹಿಸುತ್ತಿದೆ. ಅಮೆರಿಕ ತನ್ನ ನೆಲದಲ್ಲಿ ಅಕ್ರಮ ವಲಸೆಯನ್ನು ತಡೆಗಟ್ಟುವ ಗಟ್ಟಿ ನಿರ್ಧಾರ ಮಾಡಿದೆ ಎಂದು ಡೊನಾಲ್ಡ್ ಟ್ರಂಪ್ ತಮ್ಮ ಭಾಷಣದಲ್ಲಿ ಹೇಳಿದರು. ಜಾಗತಿಕ ತಾಪಮಾನ ಏರಿಕೆಯನ್ನು ಕಡಿಮೆ ಮಾಡುವ ಪ್ರಯತ್ನಗಳನ್ನು ಖಂಡಿಸಲು, UNGA ವೇದಿಕೆಯನ್ನು ಬಳಸಿಕೊಂಡ ಡೊನಾಲ್ಡ್ ಟ್ರಂಪ್, ಹವಾಮಾನ ಬದಲಾವಣೆಯ ಕಾಳಜಿಗಳನ್ನು ಜಗತ್ತಿಗೆ ಮೋಸ ಮಾಡುವ ಅತ್ಯಂತ ದೊಡ್ಡ ವಂಚನೆಯ ಭಾಗ ಎಂದು ಕರೆದರು. ಅಲ್ಲದೇ ಈ ಕುರಿತು ವಿಶ್ವಸಂಸ್ಥೆಯ ಪಾತ್ರವನ್ನು ಅಮೆರಿಕ ಅಧ್ಯಕ್ಷರು ಟೀಕಿಸಿದರು.



ವಿಶ್ವಸಂಸ್ಥೆಯಿಂದ ನನಗೆ ಸಿಕ್ಕಿದ್ದು ಕೆಟ್ಟ ಎಸ್ಕಲೇಟರ್, ಕೆಟ್ಟ ಟೆಲಿಪ್ರಾಂಪ್ಟರ್ ಮಾತ್ರ. ವಿಶ್ವಸಂಸ್ಥೆಯಿಂದ ಅಮೆರಿಕಕ್ಕೆ ಯಾವ ಪ್ರಯೋಜನವೂ ಆಗುತ್ತಿಲ್ಲ. ಅದು ಅಮೆರಿಕದ ಸಮಾಜವನ್ನು ವಿಘಟಿಸುವ ಅಪಾಯಕಾರಿ ತೀರ್ಮಾನಗಳನ್ನಯ ಕೈಗೊಳ್ಳುತ್ತಿದೆ ಎಂದು ಡೊನಾಲ್ಡ್ ಟ್ರಂಪ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಡೊನಾಲ್ಡ್ ಟ್ರಂಪ್ ಅವರು ವಿಶ್ವಸಂಸ್ಥೆ ಕಚೇರಿಗೆ ಆಗಮಿಸಿದಾಗ ಅಲ್ಲಿನ ಎಸ್ಕಲೇಟರ್ ಕೆಟ್ಟಿದ್ದ ಪರಿಣಾಮ, ಅವರು ಮೆಟ್ಟಿಲುಗಳನ್ನು ಏರಿಕೊಂಡೇ ಸಭೆ ನಡೆಯುತ್ತಿದ್ದ ಕಟ್ಟಡಕ್ಕೆ ಆಗಮಿಸಿದ್ದರು.

**ಮತ್ತೆ ಕದನ ವಿರಾಮ ಕನವರಿಕೆ:** ಇನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ತಮ್ಮ UNGA ಭಾಷಣದಲ್ಲೂ, ಭಾರತ-ಪಾಕಿಸ್ತಾನ ಸೇರಿದಂತೆ ಒಟ್ಟು ಏಳು ಜಾಗತಿಕ ಯುದ್ಧಗಳನ್ನು ನಿಲ್ಲಿಸಿರುವುದಾಗಿ ಪ್ರತಿಪಾದಿಸಿದ್ದಾರೆ.

ಜಾಗತಿಕ ಶಾಂತಿಗಾಗಿ ನಮ್ಮ ಆಡಳಿತದ ಪ್ರಯತ್ನಗಳನ್ನು ವಿಶ್ವಸಂಸ್ಥೆ ಗುರುತಿಸಬೇಕು ಎಂದು ಅಮೆರಿಕ ಅಧ್ಯಕ್ಷರು ಒತ್ತಾಯಿಸಿದ್ದಾರೆ. ಟ್ರಂಪ್ ಭಾರತ-ಪಾಕಿಸ್ತಾನ ಕದನ ವಿರಾಮ ಒಪ್ಪಂದದ ಕ್ರೆಡಿಟ್ ಪಡೆಯುವ ಪ್ರಯತ್ನ ಈಗಲೂ ಮುಂದುವರೆಸಿರುವುದು ಸ್ಪಷ್ಟವಾಗಿದೆ.

### ವಿಶ್ವಸಂಸ್ಥೆ ಬೆನ್ನೆಲುಬಾಗಿ ನಿಂತಿದೆ

**ಅಮೆರಿಕದ ನ್ಯೂಯಾರ್ಕ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆ ಸಾಮಾನ್ಯ ಸಭೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒರಟು ಭಾಷಣಕ್ಕೆ ಸಾಕ್ಷಿಯಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹೆಚ್ಚುತ್ತಿರುವ ಅಕ್ರಮ ವಲಸೆಗೆ ವಿಶ್ವಸಂಸ್ಥೆಯನ್ನು ಹೊಣೆಗಾರ ಮಾಡಿರುವ ಟ್ರಂಪ್, ಅಕ್ರಮ ವಲಸೆಯನ್ನು ಪ್ರೋತ್ಸಾಹಿಸುವ ಮೂಲಕ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ನರಕ ಸೃಷ್ಟಿಸುವುದಕ್ಕೆ ವಿಶ್ವಸಂಸ್ಥೆ ಬೆನ್ನೆಲುಬಾಗಿ ನಿಂತಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ. ಅಮೆರಿಕ ಅಧ್ಯಕ್ಷರು ತಮ್ಮ ಯುಎನ್‌ಜಿಎ ಭಾಷಣದಲ್ಲಿ, ಭಾರತ-ಪಾಕಿಸ್ತಾನ ಕದನ ವಿರಾಮ ಒಪ್ಪಂದವನ್ನೂ ಪ್ರಸ್ತಾಪಿಸಿದ್ದಾರೆ.**

ಇದೇ ವೇಳೆ ಪ್ಯಾಲೆಸ್ಟೈನ್ ರಾಷ್ಟ್ರವನ್ನು ಗುರುತಿಸುವ ತಮ್ಮ ಮಿತ್ರರಾಷ್ಟ್ರಗಳ ನಿರ್ಧಾರವನ್ನೂ ಟೀಕಿಸಿದ ಡೊನಾಲ್ಡ್ ಟ್ರಂಪ್, ಹಮಾಸ್‌ಗೆ ಬೆಂಬಲ ನೀಡುವ ಹುನ್ನಾರ ಎಂದು ಕರೆದಿದ್ದಾರೆ. ಫ್ರಾನ್ಸ್ ಕೂಡ ಪ್ಯಾಲೆಸ್ಟೈನ್ ರಾಷ್ಟ್ರಕ್ಕೆ ಔಪಚಾರಿಕ ಮಾನ್ಯತೆ ನೀಡುವ ಪರ ಮತ ಚಲಾಯಿಸಿದೆ.

ಇದೇ ವೇಳೆ ರಷ್ಯಾ ಮೇಲೆ ನಿರ್ಬಂಧ ಹೇರುವ ವಿಚಾರವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ತರಾಟೆಗೆ ತೆಗೆದುಕೊಂಡ ಡೊನಾಲ್ಡ್ ಟ್ರಂಪ್, ಉಕ್ರೇನ್ ಯುದ್ಧ ನಿಲ್ಲಿಸುವ ಪ್ರಯತ್ನದ ಭಾಗವಾಗಿ, ಭಾರತ, ಚೀನಾ ಮೇಲೆ ದಂಡನಾತ್ಮಕ ಸುಂಕ ವಿಧಿಸಲು ಸಜ್ಜಾಗಿರುವ ಯುರೋಪಿಯನ್ ರಾಷ್ಟ್ರಗಳು, ರಷ್ಯಾ ವಿರುದ್ಧ ಅಂತದ್ದೇ ಗಂಭೀರ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿದರು.

# ಘೋರ ಇತಿಹಾಸದ ಪುಟ ತಿರುವಿ ಹಾಕಿದ ಯೋಗಿ

**ಲಖನೌ:** ಭಾರತದ ಮೇಲೆ ಶತಮಾನಗಳ ವಿದೇಶಿ ಆಕ್ರಮಣ ಮತ್ತು ವಸಾಹತುಶಾಹಿ ಆಳ್ವಿಕೆಯ ಪರಿಣಾಮವಾಗಿ, ಹಿಂದೂ ಜನಸಂಖ್ಯೆ ಕುಸಿತ ಕಂಡಿದೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಭಿಪ್ರಾಯಪಟ್ಟಿದ್ದಾರೆ. ಯೋಗಿ ಆದಿತ್ಯನಾಥ್ ಅವರು ಇತ್ತೀಚಿಗೆ, ಅಯೋಧ್ಯೆಯ ರಾಮ ಮಂದಿರ ನೋಡಿ ಹೆಮ್ಮೆಪಡದವರು ಭಾರತೀಯರಲ್ಲ ಎಂದು ಹೇಳಿಕೆ ನೀಡಿದ್ದರು.

ರಾಜಧಾನಿ ಲಖನೌದಲ್ಲಿ ಆತ್ಮನಿರ್ಭರ ಭಾರತ-ಸ್ವದೇಶಿ ಸಂಕಲ್ಪ ಕುರಿತ ರಾಜ್ಯಮಟ್ಟದ ಕಾರ್ಯಾಗಾರವನ್ನು ಉದ್ದೇಶಿಸಿ ಮಾತನಾಡಿದ ಯೋಗಿ ಆದಿತ್ಯನಾಥ್, ವಿದೇಶಿ ಆಳ್ವಿಕೆ ಕಾಲದಲ್ಲಿ ಭಾರತದ ಸಂಪನ್ಮೂಲಗಳನ್ನು ಅಪಾರ ಪ್ರಮಾಣದಲ್ಲಿ ಕೊಳ್ಳೆ ಹೊಡೆಯಲಾಗಿದೆ ಎಂದು ಹೇಳಿದರು. ಭಾರತವು ಶತಮಾನಗಳ ಕಾಲ ವಿದೇಶಿ ಆಕ್ರಮಣವನ್ನು ಎದುರಿಸಿದೆ. ಅಲ್ಲದೇ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯು ಭಾರತದ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆದಿದ್ದಲ್ಲದೇ, ಇಲ್ಲಿನ ಜನರನ್ನು ಶೋಷಣೆಗೆ ಗುರಿಪಡಿಸಿತು. ಮಾತ್ರವಲ್ಲದೇ ಕಾಲಘಟ್ಟವು ಭಾರತದಲ್ಲಿ ಹಿಂದೂ ಜನಸಂಖ್ಯೆಯ ಗಮನಾರ್ಹ ಕುಸಿತಕ್ಕೂ ಕಾರಣವಾಯಿರು ಎಂದು ಯುಪಿ ಸಿಎಂ ಸೂಚ್ಯವಾಗಿ ಹೇಳಿದರು. ಕ್ರಿ.ಶ. 1100ರ ಅವಧಿಯಲ್ಲಿರ ವೇಳೆಗೆ ಸುಮಾರು 60 ಕೋಟಿಯಷ್ಟಿದ್ದ ಹಿಂದೂ ಜನಸಂಖ್ಯೆ, 1947ರಲ್ಲಿ ಭಾರತ ಸ್ವಾತಂತ್ರ್ಯ ಪಡೆಯುವ ಹೊತ್ತಿಗೆ ಸುಮಾರು 30 ಕೋಟಿಗೆ ಇಳಿದಿತ್ತು. ಈ 800-900 ವರ್ಷಗಳಲ್ಲಿ ನಮ್ಮ ಜನಸಂಖ್ಯೆ ಹೆಚ್ಚಾಗಬೇಕಿತ್ತೇ ವಿನಃ ಕಡಿಮೆಯಾಗಬಾರದಿತ್ತು. ಇದಕ್ಕೆ ಏನು ಕಾರಣ ಎಂಬುದನ್ನು ನಾವು ತಿಳಿದುಕೊಳ್ಳ ಅಗತ್ಯವಿದೆ ಎಂದು ಯೋಗಿ ಆದಿತ್ಯನಾಥ್ ಹೇಳಿದರು. ಎಐಎಂಐಎಂ ಸಂಸದ ಅಸಾದುದ್ದೀನ್ ಒವೈಸಿ ಅವರು ಈ ಹಿಂದೆ ಹಿಂದೂ ಜನಸಂಖ್ಯೆ ಕುಸಿತ ವ್ಯಾಟ್ಸಪ್ ವಿವಿ ವರದಿ ಎಂದು ಕುಹುಕವಾಡಿದ್ದರು. ಭಾರತವು ಸಮೃದ್ಧಿಗೆ ಅಗತ್ಯವಾದ ಎಲ್ಲಾ ಸಂಪನ್ಮೂಲಗಳನ್ನು ಹೊಂದಿತ್ತು. ಆದರೆ ವಿದೇಶಿ ಆಡಳಿತಗಾರರ ವಿಭಜಕ ನೀತಿಗಳಿಂದಾಗಿ ಈಗಲೂ ಭಾರತ ಬಳಲುತ್ತಿದೆ. ಬ್ರಿಟಿಷ್ ವಸಾಹತುಗಾರರು ಜಾತಿ, ಪ್ರದೇಶ, ಭಾಷೆ ಆಧಾರದ ಮೇಲೆ ಜನರನ್ನು ವಿಭಜಿಸಿದರು. ಇಂದಿಗೂ ಕೆಲವರು ಅದೇ ಮನಸ್ಥಿತಿಯೊಂದಿಗೆ ಭಾರತವನ್ನು ವಿಭಜಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಆಕ್ರೋಶ ಹೊರಹಾಕಿದರು.




ಆರ್ಥಿಕ ಸ್ವಾವಲಂಬನೆ ಮತ್ತು ಸ್ಥಳೀಯ ಉತ್ಪಾದನೆಯ ಮೇಲೆ ಒತ್ತು ನೀಡುವಂತೆ ಪ್ರಧಾನಮಂತ್ರಿ, ನರೇಂದ್ರ ಮೋದಿ ಕರೆ ನೀಡಿದ್ದಾರೆ. ಈ ಸ್ವದೇಶಿ ಆಂದೋಲನವು ಭಾರತೀಯ ಕಾರ್ಮಿಕರು, ಯುವಕರನ್ನು ಸಬಲೀಕರಣಗೊಳಿಸುವ ಉದ್ದೇಶವನ್ನು ಹೊಂದಿದೆ. ಇತ್ತೀಚಿಗೆ ಘೋಷಿಸಲಾದ ಜಿಎಸ್‌ಟಿ 2.0 ಸುಧಾರಣೆ ಕ್ರಮಗಳೂ ಕೂಡ ಇದೇ ಉದ್ದೇಶದ ಭಾಗವಾಗಿದೆ ಎಂದು ಯೋಗಿ ಆದಿತ್ಯನಾಥ್ ತಿಳಿಸಿದರು. ಕೇಂದ್ರ ಸರ್ಕಾರ ದೇಶದ ಪರೋಕ್ಷ ತೆರಿಗೆ ವ್ಯವಸ್ಥೆಯಲ್ಲಿ ಪ್ರಮುಖ ಸುಧಾರಣೆ ತಂದಿದ್ದು, ಸರಕು ಮತ್ತು ಸೇವಾ ತೆರಿಗೆ 2.0ನ್ನು ಜಾರಿಗೊಳಿಸಿದೆ.

ಈ ಕುರಿತು ದೇಶವನ್ನುದ್ದೇಶಿಸಿ ಮಾತನಾಡಿರುವ ಪ್ರಧಾನಿ ಮೋದಿ, ಜಿಎಸ್‌ಟಿ ಬಚತ್ ಉತ್ಸವ ಸಮಾಜದ ಎಲ್ಲಾ ವರ್ಗಗಳಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಭರವಸೆ ನೀಡಿದ್ದಾರೆ. ಹೇಳಿದ್ದಾರೆ. ಇದೇ ವಿಚಾರವಾಗಿ ದೇಶದ ಜನತೆಗೆ ಬಹಿರಂಗ ಪತ್ರ ಬರೆದಿರುವ ಪ್ರಧಾನಿ ಮೋದಿ, ಸೆಪ್ಟೆಂಬರ್ 22ರಿಂದ, ಮುಂದಿನ ಪೀಳಿಗೆಯ ಜಿಎಸ್‌ಟಿ ಸುಧಾರಣೆಗಳು ತಮ್ಮ ಉಪಸ್ಥಿತಿಯನ್ನು ವ್ಯಕ್ತಪಡಿಸಲು ಪ್ರಾರಂಭಿಸಿವೆ. ಇದು ದೇಶಾದ್ಯಂತ ಜಿಎಸ್‌ಟಿ ಬಚತ್ ಉತ್ಸವದ ಆರಂಭವನ್ನು ಗುರುತಿಸುತ್ತದೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

## ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದು ಹಾಕಲು ಹೊಸ ವ್ಯವಸ್ಥೆ

**ನವದೆಹಲಿ:** ದೇಶಾದ್ಯಂತ ಭಾರೀ ವಿವಾದ ಸೃಷ್ಟಿಸಿರುವ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದು ಹಾಕುವ ಭಾರತೀಯ ಚುನಾವಣಾ ಆಯೋಗ ಹೊಸ ತಾಂತ್ರಿಕ ವ್ಯವಸ್ಥೆಯನ್ನು ಪರಿಚಯಿಸಿದೆ.



ಹೆಚ್ಚುತ್ತಿರುವ ದುರುಪಯೋಗವನ್ನು ತಡೆಗಟ್ಟಿ ಮತದಾರರಲ್ಲಿ ಅನುಮಾನವನ್ನು ನಿವಾರಿಸಿ ಹೆಚ್ಚು ಪಾರದರ್ಶಕತೆ ಉಂಟು ಮಾಡುವ ಸದುದ್ದೇಶದಿಂದ ಚುನಾವಣಾ ಆಯೋಗ ದುರುಪಯೋಗ ತಡೆಗಟ್ಟಲು ಇಸಿಐಎನ್‌ಇಟಿ ಪೋರ್ಟಲ್, ಅರ್ಜಿಗಳಲ್ಲಿ ಇ-ಸೈನ್ ಎಂಬ ವಿನೂತನ ತಂತ್ರಜ್ಞಾನವನ್ನು ಪರಿಚಯಿಸಿದೆ. ಇದರಿಂದಾಗಿ ಬರುವ ದಿನಗಳಲ್ಲಿ ಮತದಾರರ ಪಟ್ಟಿಯಿಂದ ಯಾರೊಬ್ಬರು ಅಷ್ಟು ಸುಲಭವಾಗಿ ತಮ ಹೆಸರುಗಳನ್ನು ತೆಗೆದು ಹಾಕುವುದಾಗಲಿ ಇಲ್ಲವೇ ಸೇರ್ಪಡೆ ಮಾಡಲು ಅವಕಾಶ ಇರುವುದಿಲ್ಲ. ಹೊಸದಾಗಿ ಮತದಾರರಪಟ್ಟಿಗೆ ಸೇರ್ಪಡೆಯಾಗುವವರು ತಮ ಹೆಸರುಗಳನ್ನು ನೊಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸುವವರು ತಮ ಆಧಾರ್‌ಲಿಂಕ್ ಮಾಡಲಾದ ಫೋನ್ ಸಂಖ್ಯೆಗಳನ್ನು ಬಳಸಿಕೊಂಡು ತಮ್ಮ ಗುರುತನ್ನು ಬಳಸಬೇಕಾಗುತ್ತದೆ.

ಈ ಹಿಂದೆ ಅರ್ಜಿದಾರರು ಯಾವುದೇ ಪರಿಶೀಲನೆ ಇಲ್ಲದೆ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿತ್ತು. ಇದು ಮತದಾರರ ಗುರುತಿನಚೀಟಿಯ ದುರುಪಯೋಗವಾಗುವ ಸಾಧ್ಯತೆ ಇತ್ತು. ಇದನ್ನು ಮನಗಂಡೇ ಚುನಾವಣಾ ಆಯೋಗ ಇ-ಸೈನ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ.

ಸಾಮಾನ್ಯವಾಗಿ ಅರ್ಜಿದಾರರು ಚುನಾವಣಾ ಆಯೋಗದ ಅಪ್ಲಿಕೇಷನ್‌ಗಳು ಮತ್ತು ಪೋರ್ಟಲ್‌ನಲ್ಲಿ ಅಸ್ತಿತ್ವದಲ್ಲಿರುವ ಮತದಾರರ ಫೋಟೋ ಗುರುತಿನ ಚೀಟಿ(ಎಪಿಕ್) ಸಂಖ್ಯೆಯೊಂದಿಗೆ ಫೋನ್ ಸಂಖ್ಯೆಯನ್ನು ಲಿಂಕ್ ಮಾಡಿ ಅರ್ಜಿ ಹಾಕಿದ್ದರೆ ಸಾಕಿತ್ತು. ಇದನ್ನು ತಡೆಗಟ್ಟುವ ಉದ್ದೇಶದಿಂದಲೇ ಚುನಾವಣಾ ಆಯೋಗ ವಿನೂತನವಾದ ವ್ಯವಸ್ಥೆಯನ್ನು ಜಾರಿ ಮಾಡಿದ್ದು, ದುರುಪಯೋಗವನ್ನು ತಡೆಗಟ್ಟಲು ಸಾಧ್ಯತೆ ಇದೆ ಎಂದು ಆಯೋಗ ಹೇಳಿಕೊಂಡಿದೆ.

**ಇ-ಸೈನ್ ಹೇಗೆ ಕೆಲಸ ಮಾಡುತ್ತದೆ?:**

ಅರ್ಜಿದಾರರು ಫಾರ್ಮ್ 6, ಅಥವಾ ಫಾರ್ಮ್ 7 ಅಥವಾ ಫಾರ್ಮ್ 8 ಅನ್ನು ಭರ್ತಿ ಮಾಡುವ ಮೂಲಕ ಈಗ ಇ-ಸೈನ್ ಅಗತ್ಯವನ್ನು ತೆರವುಗೊಳಿಸಬೇಕಾಗುತ್ತದೆ.

ಇದರರ್ಥ ಅರ್ಜಿದಾರರು ತಮ ಅರ್ಜಿಗಾಗಿ ಬಳಸುತ್ತಿರುವ ಮತದಾರರ ಕಾರ್ಡ್‌ನಲ್ಲಿರುವ ಹೆಸರು ಅವರ ಆಧಾರ್‌ನಲ್ಲಿರುವ ಹೆಸರಿಗೆ ಸಮನಾಗಿದೆ ಮತ್ತು ಅವರು ಬಳಸುತ್ತಿರುವ ಮೊಬೈಲ್ ಸಂಖ್ಯೆಯು ಆಧಾರ್‌ಗೆ ಲಿಂಕ್ ಆಗಿದೆಯೇ ಎಂದು ಖಚಿತಪಡಿಸಿಕೊಳ್ಳುವಂತೆ ಪೋರ್ಟಲ್ ಎಚ್ಚರಿಸುತ್ತದೆ.

## ವಿಶ್ವಸಂಸ್ಥೆಯಲ್ಲಿ ಕಾಶ್ಮೀರದ ವಿಷಯ ಪ್ರಸ್ತಾಪಿಸಿದ ಟರ್ಕಿ ಅಧ್ಯಕ್ಷ

**ವಿಶ್ವಸಂಸ್ಥೆ:** ಟರ್ಕಿ ಅಧ್ಯಕ್ಷ ತಯ್ಯಿಪ್ ಎರ್ಡೊಗನ್ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಕಾಶ್ಮೀರ ಸಮಸ್ಯೆಯನ್ನು ಉಲ್ಲೇಖಿಸಿ, ಈ ವರ್ಷದ ಆರಂಭದಲ್ಲಿ ನಡೆದ ಸಂಘರ್ಷದ ನಂತರ ಭಾರತ ಮತ್ತು ಪಾಕಿಸ್ತಾನದ ನಡುವಿನ ಕದನ ವಿರಾಮದಿಂದ ತಮ್ಮ ರಾಷ್ಟ್ರವು ತೃಪ್ತಿಗೊಂಡಿದೆ ಎಂದು ಹೇಳಿದರು. ಭಯೋತ್ಪಾದನೆ ನಿಗ್ರಹದ ಕುರಿತು ಭಾರತ ಮತ್ತು ಪಾಕಿಸ್ತಾನದ ನಡುವಿನ ಸಹಕಾರವನ್ನು ನೋಡುವುದು ಮುಖ್ಯ ಎಂದು ಅವರು ಹೇಳಿದರು. ಕಾಶ್ಮೀರದ ನಮ್ಮ ಸಹೋದರ ಸಹೋದರಿಯರಿಗೆ ಉತ್ತಮವಾಗುವಂತೆ ವಿಶ್ವಸಂಸ್ಥೆಯ ನಿರ್ಣಯಗಳ ಆಧಾರದ ಮೇಲೆ ಕಾಶ್ಮೀರದ ಸಮಸ್ಯೆಯನ್ನು ಪರಿಹರಿಸಬೇಕು, ಮಾತುಕತೆಯ ಮೂಲಕ ನಾವು ಆಶಿಸುತ್ತೇವೆ ಎಂದು ಅವರು ಹೇಳಿದರು. ದಕ್ಷಿಣ ಏಷ್ಯಾದಲ್ಲಿ, ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡುವುದು ಅತ್ಯಂತ ಮುಖ್ಯವೆಂದು ನಾವು ಪರಿಗಣಿಸುತ್ತೇವೆ. ಕಳೆದ ಏ.ನಲ್ಲಿ ಪಾಕಿಸ್ತಾನ, ಭಾರತ ನಡುವಿನ ಉದ್ವಿಗ್ನತೆಯ ನಂತರ ಸಾಧಿಸಲಾದ ಕದನ ವಿರಾಮದಿಂದ ನಾವು ಸಂತೋಷಪಟ್ಟಿದ್ದೇವೆ, ಈ ಉದ್ವಿಗ್ನತೆಯು ಸಂಘರ್ಷಕ್ಕೆ ಕಾರಣವಾಯಿತು ಎಂದು ಎರ್ಡೊಗನ್ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 80ನೇ ಅಧಿವೇಶನದಲ್ಲಿ ಸಾಮಾನ್ಯ ಚರ್ಚೆಯಲ್ಲಿ ತಮ್ಮ ಭಾಷಣದಲ್ಲಿ ಹೇಳಿದರು.



ಇತ್ತೀಚಿನ ವರ್ಷಗಳಲ್ಲಿ, ಟರ್ಕಿಯ ನಾಯಕ ಉನ್ನತ ಮಟ್ಟದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ವಿಶ್ವ ನಾಯಕರನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಕಾಶ್ಮೀರದ ವಿಷಯವನ್ನು ಉಲ್ಲೇಖಿಸಿದ್ದಾರೆ.

26 ಜನರ ಸಾವಿಗೆ ಕಾರಣವಾದ ಪೆಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ, ಭಾರತವು ಮೇ 7 ರಂದು ಪಾಕಿಸ್ತಾನ ನಿಯಂತ್ರಣದಲ್ಲಿರುವ ಪ್ರದೇಶಗಳಲ್ಲಿನ ಭಯೋತ್ಪಾದಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ಆಪರೇಷನ್ ಸಿಂಧೂರ್ ಅನ್ನು ಪ್ರಾರಂಭಿಸಿತು.

ಈ ದಾಳಿಗಳು ನಾಲ್ಕು ದಿನಗಳ ತೀವ್ರ ಘರ್ಷಣೆ ಗಳಿಗೆ ಕಾರಣವಾಯಿತು, ಇದು ಮೇ 10 ರಂದು ಮಿಲಿಟರಿ ಕಾರ್ಯಾಚರಣೆಯನ್ನು ನಿಲ್ಲಿಸುವ ಬಗ್ಗೆ ಒಪ್ಪಂದದೊಂದಿಗೆ ಕೊನೆಗೊಂಡಿತು.

## ಮಿನಿ ನ್ಯೂಸ್

### ರಾಗಸ ಚಂಡಮಾರುತದ ಅಬ್ಬರ: 14 ಮಂದಿ ಸಾವು, 18 ಜನರಿಗೆ ಗಾಯ

**ಹಾಂಗ್ ಕಾಂಗ್:** ತೈವಾನ್‌ನಲ್ಲಿ ರಾಗಸ ಚಂಡಮಾರುತ ಅವಾಂತರ ಸೃಷ್ಟಿಸಿದೆ. ಸರೋವರದ ತಡೆಗೋಡೆ ಒಡೆದು 14 ಮಂದಿ ಮೃತಪಟ್ಟಿದ್ದು, 18 ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಚಂಡಮಾರುತದ ಪರಿಣಾಮ ದಕ್ಷಿಣ ತೈವಾನ್‌ನಲ್ಲಿ ಭಾರಿ ಮಳೆ ಸುರಿಯುತ್ತಿದ್ದು, ಕಡಲತೀರದಲ್ಲಿ ಪ್ರವಾಹದಿಂದಾಗಿ ನೂರಾರು ಮರಗಳು ಧರೆಗುರುಳಿವೆ. ಹಲವು ಕಟ್ಟಡಗಳಿಗೆ ಹಾನಿಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಗಸ ಚಂಡಮಾರುತ ದಕ್ಷಿಣ ಚೀನಾಕ್ಕೆ ಅಪ್ಪಳಿಸಿದೆ. ಇದರಿಂದಾಗಿ ಹಲವೆಡೆ ವ್ಯಾಪಕ ಮಳೆ ಸುರಿಯುತ್ತಿದೆ. ಚಂಡಮಾರುತ ಬುಧವಾರ ಹಾಂಗ್ ಕಾಂಗ್ ಕರಾವಳಿಗೆ ಅಪ್ಪಳಿಸುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಎಚ್ಚರಿಕೆ ವಹಿಸುವಂತೆ ಅಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ವಿವಿಧೆಡೆ ಪ್ರವಾಹ ಪರಿಸ್ಥಿತಿ ನಿರ್ಮಾಣ ಮತ್ತು ಭೂಕುಸಿತ ಸಂಭವಿಸುವ ಸಾಧ್ಯತೆ ಇದೆ ಎಂದೂ ಹವಾಮಾನ ಇಲಾಖೆಯ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಚೀನಾದ ದಕ್ಷಿಣ ಭಾಗದ ಕನಿಷ್ಠ 10 ನಗರಗಳಲ್ಲಿ ಕಚೇರಿಗಳು ಮತ್ತು ಶಾಲೆಗಳನ್ನು ಮುಚ್ಚುವಂತೆ ಅಧಿಕಾರಿಗಳು ಆದೇಶಿಸಿದ್ದಾರೆ. ಇದರಿಂದಾಗಿ ವಿದ್ಯಾರ್ಥಿಗಳು ಸೇರಿದಂತೆ ಲಕ್ಷಾಂತರ ಜನರ ಮೇಲೆ ಪರಿಣಾಮ ಬೀರಿದೆ ಎಂದು ಮೂಲಗಳು ತಿಳಿಸಿವೆ.

### ಭಾರತೀಯ ಸೇನೆಯ ಬೆನ್ನೆಲುಬಾಗಿದ್ದ ಎಂಐಜಿ-21 ವಿಮಾನಕ್ಕೆ ಬೀಳ್ಕೊಡುಗೆ




**ಚಂಡೀಗಢ:** ಭಾರತದ ಕೀರ್ತಿಯನ್ನು ಬಾನೆತ್ತರದಲ್ಲಿ ಹಾರಿಸಿದ. ದೇಶದ ವಾಯುಸೇನೆಯ ಸಾಮರ್ಥ್ಯವನ್ನು ಜಗತ್ತಿಗೆ ಸಾರಿದ ರಷ್ಯಾ ನಿರ್ಮಿತ ಮಿಗ್-21 ಯುದ್ಧ ವಿಮಾನವು ಇದೇ 26ರಿಂದ ನಿವೃತ್ತಿ ಪಡೆಯಲಿದೆ. ಚಂಡೀಗಢದ ವಾಯುನೆಲೆಯಲ್ಲಿ 23 ಸ್ಕ್ಯಾಡ್ರನ್‌ಗೆ ಸೇರಿದ ಪ್ಯಾಂಥರ್ಸ್ ಹೆಸರಿನ ಮಿಗ್-21 ಯುದ್ಧ ವಿಮಾನಕ್ಕೆ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಗಿದೆ.

ರಕ್ಷಣಾ ಸಚಿವ ರಾಜನಾಥ ಸಿಂಗ್, ಸೇನಾಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್, ಸೇನೆಯ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ, ಏರ್ ಚೀಫ್ ಮಾರ್ಷಲ್ ಎ.ಪಿ.ಸಿಂಗ್, ನೌಕಾಪಡೆಯ ಮುಖಸ್ಥ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಮತ್ತಿತರರು ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಭಾರತೀಯ ವಾಯುಪಡೆಯ ವಾಯುನೆಲೆಯಲ್ಲಿ ಬುಧವಾರ ಸಮವಸ್ತ್ರ ಧರಿಸಿ ತಾಲೀಮು ನಡೆಸಲಾಯಿತು. ಆರು ದಶಕ ಭಾರತೀಯ ಸೇನೆಯ ಬೆನ್ನೆಲುಬಾಗಿದ್ದ ಮಿಗ್-21 ಯುದ್ಧ ವಿಮಾನಗಳು ಪಾಕಿಸ್ತಾನದೊಂದಿಗಿನ 1965 ಮತ್ತು 1971ರ ಯುದ್ಧದಲ್ಲಿ ಹಾಗೂ 1999ರ ಕಾರ್ಗಿಲ್ ಯುದ್ಧದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದವು. 2019ರ ಬಾಲಾಕೋಟ್ ವಾಯುದಾಳಿಯಲ್ಲಿಯೂ ಮಹತ್ವದ ಮಾತ್ರ ವಹಿಸಿದ್ದವು.

### ಹಿಂಸಾಚಾರ; ಉಪವಾಸ ಸತ್ಯಾಗ್ರಹ ಮೊಟಕುಗೊಳಿಸಿದ ವಾಂಗ್‌ಚುಕ್

**ಲಡಾಖ್:** ಲಡಾಖ್‌ಗೆ ರಾಜ್ಯ ಸ್ಥಾನಮಾನ ನೀಡಬೇಕು ಎಂದು ಆಗ್ರಹಿಸಿ ನಡೆಸುತ್ತಿದ್ದ ಚಳುವಳಿ ಹಿಂಸೆಗೆ ತಿರುಗಿದ್ದರಿಂದ ಪರಿಸರ ಕಾರ್ಯಕರ್ತ ಸೋನಮ್ ವಾಂಗ್‌ಚುಕ್ ತಮ್ಮ ಉಪವಾಸ ಸತ್ಯಾಗ್ರಹವನ್ನು 15 ದಿನಕ್ಕೆ ಮೊಟಕುಗೊಳಿಸಿದ್ದಾರೆ. ಬೀದಿಗಿಳಿದ ಸಾವಿರಾರು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಬಿಜೆಪಿ ಕಚೇರಿ ಹಾಗೂ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ.



ಯುವಕರು ಶಾಂತಿಯಿಂದ ಇರಬೇಕು ಎಂದು ಮನವಿ ಮಾಡಿದ ವಾಂಗ್‌ಚುಕ್, ಹಿಂಸಾಚಾರವನ್ನು ನಿಲ್ಲಿಸುವಂತೆ ಕೋರಿದ್ದಾರೆ.

ಲಡಾಖ್‌ನ ಯುವಕರು ತಕ್ಷಣವೇ ಹಿಂಸಾಚಾರ ನಿಲ್ಲಿಸಬೇಕೆಂದು ನಾನು ವಿನಂತಿಸುತ್ತೇನೆ, ಇದು ನಮ್ಮ ಉದ್ದೇಶಕ್ಕೆ ಹಾನಿಯನ್ನುಂಟುಮಾಡುತ್ತದೆ. ಅಲ್ಲದೆ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸುತ್ತದೆ. ಲಡಾಖ್ ಮತ್ತು ದೇಶದಲ್ಲಿ ಅಸ್ಥಿರತೆಯನ್ನು ಉಂಟು ಮಾಡಲು ನಾವು ಬಯಸುವುದಿಲ್ಲ ಎಂದು ವಾಂಗ್‌ಚುಕ್ ಮುಷ್ಕರದ ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಹೇಳಿದ್ದಾರೆ. ಸೋನಮ್ ವಾಂಗ್‌ಚುಕ್ ನಡೆಸುತ್ತಿರುವ ಉಪವಾಸ ಸತ್ಯಾಗ್ರಹದ ಸಮಯದಲ್ಲಿ ಅವರ ಇಬ್ಬರು ಬೆಂಬಲಿಗರ ಆರೋಗ್ಯ ಸ್ಥಿತಿ ಹದಗೆಟ್ಟ ನಂತರ ಲಡಾಖ್‌ನ ಲೇಹ್‌ನಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ನಡೆದವು.

# ಲಡಾಖ್‌ನಲ್ಲಿ ಭುಗಿಲೆದ್ದ ಹಿಂಸಾಚಾರಕ್ಕೆ 4 ಸಾವು

## ಲಡಾಖ್‌ಗೆ ಪ್ರತ್ಯೇಕ ರಾಜ್ಯ ಸ್ಥಾನಮಾನ ನೀಡಬೇಕೆಂದು ಆಗ್ರಹಿಸಿ ಲೇಹ್ ನಗರದಲ್ಲಿ ಚಳುವಳಿ, ಭದ್ರತಾ ಸಿಬ್ಬಂದಿ ಮೇಲೆ ಕಲ್ಲು ತೂರಾಟ

**ಕಾಶ್ಮೀರ:** ಲಡಾಖ್‌ಗೆ ಪ್ರತ್ಯೇಕ ರಾಜ್ಯ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿ ನಡೆಯುತ್ತಿರುವ ಚಳುವಳಿ ಬುಧವಾರ ಹಿಂಸಾರೂಪಕ್ಕೆ ತಿರುಗಿದೆ. ಲೇಹ್ ನಗರದಲ್ಲಿ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ತೀವ್ರ ಘರ್ಷಣೆ ನಡೆದಿದ್ದು, ಕನಿಷ್ಠ 4 ಜನರು ಸಾವನ್ನಪ್ಪಿದ್ದಾರೆ. ಆಕ್ರೋಶಗೊಂಡ ಗುಂಪು ಪೊಲೀಸ್ ವಾಹನವೊಂದಕ್ಕೆ ಬೆಂಕಿ ಹಚ್ಚಿ, ಭದ್ರತಾ ಸಿಬ್ಬಂದಿ ಮೇಲೆ ಕಲ್ಲು ತೂರಾಟವನ್ನು ನಡೆಸಿದೆ. ರಾಜ್ಯ ಸ್ಥಾನಮಾನ ಮತ್ತು ಸಂವಿಧಾನದ ಆರನೇ ಪರಿಚ್ಛೇದದಡಿ ವಿಶೇಷ ರಕ್ಷಣೆಗಾಗಿ ಆಗ್ರಹಿಸಿ ಬುಧವಾರ ಲೇಹ್‌ನಲ್ಲಿ ನೂರಾರು ಜನರು ಬೀದಿಗೆ ಇಳಿದಿದ್ದರು. ಈ ಚಳುವಳಿಯ ಭಾಗವಾಗಿ ಸಂಪೂರ್ಣ ಬಂದ್‌ಗೆ ಕರೆಯನ್ನು ನೀಡಲಾಗಿತ್ತು. ಪ್ರತಿಭಟನೆ ತೀವ್ರ ಸ್ವರೂಪ ಪಡೆದಾಗ, ಗುಂಪೊಂದು ಸ್ಥಳೀಯ ಬಿಜೆಪಿ ಕಚೇರಿಗೆ ಬೆಂಕಿಯನ್ನು ಹಚ್ಚಿ, ಪೊಲೀಸರತ್ತ ಕಲ್ಲು ತೂರಲು ಆರಂಭಿಸಿತು. ಈ ವೇಳೆ ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಾಠಿ ಚಾರ್ಜ್ ನಡೆಸಿದ್ದು, ಅಶ್ರುವಾಯು ಪ್ರಯೋಗಿಸಿದ್ದಾರೆ. ಈ ವೇಳೆ ಪೊಲೀಸರ ವಾಹನಕ್ಕೂ ಪ್ರತಿಭಟನಾಕಾರರು ಬೆಂಕಿ ಹಚ್ಚಿದ್ದಾರೆ.

**ಪೊಲೀಸರ ನಡುವೆ ತೀವ್ರ ಘರ್ಷಣೆ**



**ಉಪವಾಸ ಸತ್ಯಾಗ್ರಹ**

**ಲಡಾಖ್ ರಾಜ್ಯ ಸ್ಥಾನಮಾನಕ್ಕಾಗಿ ಲೇಹ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆ ಹಿಂಸಾಚಾರಕ್ಕೆ ತಿರುಗಿದೆ. ಪ್ರತಿಭಟನೆಯಲ್ಲಿ ಕನಿಷ್ಠ 4 ಜನರು ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದೆ. ಪ್ರತಿಭಟನಾಕಾರರು ಪೊಲೀಸ್ ವಾಹನಕ್ಕೆ ಬೆಂಕಿ ಹಚ್ಚಿ, ಕಲ್ಲು ತೂರಾಟವನ್ನು ನಡೆಸಿದ್ದಾರೆ. ಅಲ್ಲದೆ ಲಡಾಖ್‌ನ ಬಿಜೆಪಿ ಕೇಂದ್ರ ಕಚೇರಿಗೂ ಬೆಂಕಿ ಇಟ್ಟಿದ್ದಾರೆ. ಇನ್ನೊಂದೆಡೆ ರಾಜ್ಯ ಸ್ಥಾನಮಾನಕ್ಕೆ ಆಗ್ರಹಿಸಿ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಎರಡು ವಾರದಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ.**

**ಹೋರಾಟದ ಹಿನ್ನೆಲೆ:** ಕಳೆದ ಎರಡು ವಾರಗಳಿಂದ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರು ಲಡಾಖ್‌ಗೆ ಪ್ರತ್ಯೇಕ ರಾಜ್ಯ ಸ್ಥಾನಮಾನ ನೀಡಬೇಕು ಎಂದು ಒತ್ತಾಯಿಸಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಲಡಾಖ್‌ನ ಭೂಮಿ, ಸಂಸ್ಕೃತಿ, ಸಂಪನ್ಮೂಲಗಳನ್ನು ರಕ್ಷಿಸಲು ಸಾಂವಿಧಾನಿಕ ರಕ್ಷಣೆ ಅಗತ್ಯ ಎಂದು ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಪ್ರತಿಭಟನೆಗಳು ನಡೆಯುತ್ತಿವೆ. 2019ರ ಆ.ನಲ್ಲಿ ಜಮ್ಮು ಮತ್ತು ಕಾಶ್ಮೀರದಿಂದ ಲಡಾಖ್ ಅನ್ನು ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶವಾಗಿ ರಚಿಸಲಾಗಿತ್ತು. ಆರಂಭದಲ್ಲಿ ಈ ನಿರ್ಧಾರವನ್ನು ಸ್ವಾಗತಿಸಿದ್ದ ಸ್ಥಳೀಯರು, ನಂತರ ಲೆಫ್ಟಿನೆಂಟ್ ಗವರ್ನರ್ ಆಡಳಿತದಲ್ಲಿ ತಮ್ಮ ರಾಜಕೀಯ ಹಕ್ಕುಗಳು ಕಳೆದು ಹೋಗಿವೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಲು ಆರಂಭಿಸಿದ್ದರು. ಇದೇ ಕಾರಣಕ್ಕೆ, ಬೌದ್ಧ ಬಹುಸಂಖ್ಯಾತ ಲೇಹ್ ಮತ್ತು ಮುಸ್ಲಿಂ ಬಹುಸಂಖ್ಯಾತ ಕಾರ್ಗಿಲ್‌ನ ರಾಜಕೀಯ, ಧಾರ್ಮಿಕ ಸಂಘಟನೆಗಳು ಇದೇ ಮೊದಲ ಬಾರಿಗೆ ಒಟ್ಟಾಗಿ ಹೋರಾಟವನ್ನು ನಡೆಸುತ್ತಿವೆ.

**ಮಾತುಕತೆಗಳು ವಿಫಲ:** ಈ ಸಂಬಂಧ ಈ ಹಿಂದೆ ಕೇಂದ್ರ ಸರ್ಕಾರದೊಂದಿಗೆ ಹಲವು ಸುತ್ತಿನ ಮಾತುಕತೆಗಳು ನಡೆದಿದ್ದರೂ, ಅವು ವಿಫಲಗೊಂಡಿದ್ದವು. ಮಾರ್ಚ್‌ನಲ್ಲಿಯೂ ಸಹ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಸಭೆ ನಡೆದಿತ್ತು. ಈ ಸಭೆಯ ನಂತರ, ತಮ್ಮ ಪ್ರಮುಖ ಬೇಡಿಕೆಗಳನ್ನು ಸರ್ಕಾರ ತಿರಸ್ಕರಿಸಿದೆ ಎಂದು ಸ್ಥಳೀಯ ನಾಯಕರು ಆರೋಪಿಸಿದ್ದರು.

ಈ ಎಲ್ಲಾ ಬೆಳವಣಿಗೆಗಳ ನಡುವೆ, ಅ. 6 ರಂದು ಲಡಾಖ್ ಪ್ರತಿನಿಧಿಗಳೊಂದಿಗೆ ಮತ್ತೊಂದು ಸುತ್ತಿನ ಮಾತುಕತೆಯನ್ನು ನಡೆಸಲು ಕೇಂದ್ರ ಸರ್ಕಾರ ದಿನಾಂಕವನ್ನು ನಿಗದಿಪಡಿಸಿದೆ. ಈ ಸಭೆಯು ಚಳುವಳಿಯ ಮುಂದಿನ ದಿಕ್ಕನ್ನು ನಿರ್ಧರಿಸುವ ಸಾಧ್ಯತೆ ಇದೆ. ಇದರ ನಡುವೆ ಈ ಹಿಂಸಾಚಾರ ವರದಿಯಾಗಿದೆ.



## ಪವನ್ ಕಲ್ಯಾಣ್ ಮುಂದೆ ಅಬ್ಬರಿಸಲಿದ್ದಾರೆ ಲೋಕಿ

ಸೌರವ್ ಲೋಕೇಶ್ ಹೀಗಂದ್ರೆ, ಎಷ್ಟೋ ಜನಕ್ಕೆ ಗೊತ್ತಾಗ್ಲಿಕ್ಕಿಲ್ಲ. ಭಜರಂಗಿ ಲೋಕಿ ಅಂದ್ರೆ ಎಲ್ಲರಿಗೂ ಗೊತ್ತು. ಭಜರಂಗಿ ಸಿನಿಮಾ ಮೂಲಕ ಯಾರಪ್ಪ ಈ ನಟ ಅಂತ ಇಡೀ ಇಂಡಸ್ಟ್ರೀ ಒಮ್ಮೆಲೆ ತಿರುಗಿ ನೋಡುವಂತೆ ಮಾಡಿದ ಕಲಾವಿದ. ತನ್ನ ಅಮೋಘ ಅಭಿನಯದ ಮೂಲಕವೇ ಪ್ರೇಕ್ಷಕರ ಗಮನ ಸೆಳೆದ ಸೌರವ್ ಲೋಕೇಶ್ ಭಜರಂಗಿ ಸಿನಿಮಾ ನಂತರ ಭಜರಂಗಿ ಲೋಕಿ ಎಂದೇ ಫೇಮಸ್ ಅಂತ ಆದರು. ಈಗ ತೆಲುಗಿನ ಒಜಿ ಸಿನಿಮಾದಲ್ಲಿ ಪವನ್ ಕಲ್ಯಾಣ್ ಮುಂದೆ ಅಬ್ಬರಿಸಿದ್ದಾರೆ.

ಭಜರಂಗಿ ಯಶಸ್ಸಿನ ನಂತರ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ನಟಿಸಿದ ಲೋಕಿ ಸದ್ಯ ಟಾಲಿವುಡ್ ಅಂಗಳದಲ್ಲಿ ಸದ್ದು ಮಾಡ್ತಿದ್ದಾರೆ. ಪ್ರಪಂಚದಾದ್ಯಂತ ತೆರೆಗೆ ಬರ್ತಿರೋ ಪವರ್ ಸ್ಟಾರ್ ಪವನ್ ಕಲ್ಯಾಣ್ ಅಭಿನಯದ ಓಜಿ ಸಿನಿಮಾದ ಪ್ರಮುಖ ಪಾತ್ರದಲ್ಲಿ ಭಜರಂಗಿ ಲೋಕಿ ಕೂಡ ಅಭಿನಯಿಸಿದ್ದಾರೆ. ಖಡಕ್ ಹಾಗೂ ಸ್ಟೈಲಿಷ್ ವಿಲನ್ ಆಗಿ ಲೋಕಿ ಪವನ್ ಕಲ್ಯಾಣ್ ಎದುರು ಕಾಣಿಸಿಕೊಳ್ತಿರೋದು ವಿಶೇಷ.

ಸದ್ಯ ಬಿಡುಗಡೆ ಆಗಿರೋ ಟ್ರೇಲರ್‌ನಲ್ಲಿ ಭಜರಂಗಿ ಲೋಕಿ ಲುಕ್ ನೋಡಿ ಕನ್ನಡಿಗರು ಮೆಚ್ಚಿಕೊಂಡಿದ್ದಾರೆ. ಆಂಧ್ರ ಡಿಸಿಎಂ ಪವರ್ ಸ್ಟಾರ್ ಪವನ್ ಕಲ್ಯಾಣ್ ಜೊತೆ ಸ್ಕ್ರೀನ್ ಶೇರ್ ಮಾಡಿರೋದಕ್ಕೆ ಲೋಕಿ ಸಂತಸ ವ್ಯಕ್ತ ಪಡಿಸಿದ್ದಾರೆ. ಅದಷ್ಟೇ ಅಲ್ಲದೆ ಓಜಿ ಸಿನಿಮಾದಲ್ಲಿ ಇಮ್ರಾನ್ ಹಶ್ಮಿ ಕೂಡ ಪ್ರಮುಖ ಪಾತ್ರವಹಿಸಿದ್ದು ಇಮ್ರಾನ್ ಹಶ್ಮಿ ಅವರ ಜೊತೆಯಲ್ಲಿಯೂ ಲೋಕಿ ಸ್ಕ್ರೀನ್ ಶೇರ್ ಮಾಡಿದ್ದಾರೆ.

ಓಜಿ 90 ರ ದಶಕದ ಮುಂಬೈ ಮಾಫಿಯಾ ಹಿನ್ನೆಲೆಯ ಕಥಾ ಹಂದರ ಹೊಂದಿದೆ. ಸಿನಿಮಾದಲ್ಲಿ ದೊಡ್ಡ ತಾರಾಗಣ ಇದೆ. ಬಾಲಿವುಡ್ ನಟ ಇಮ್ರಾನ್ ಹಷ್ಮಿ, ಸೌರವ್ ಲೋಕೇಶ್, ಪ್ರಿಯಾಂಕಾ ಮೋಹನ್, ಅರ್ಜುನ್ ದಾಸ್, ಪ್ರಕಾಶ್ ರಾಜ್, ರಾವ್ ರಮೇಶ್ ಮುಂತಾದವರು ಪಾತ್ರವರ್ಗದಲ್ಲಿ ಇದ್ದಾರೆ. ಥಮನ್ ಎಸ್. ಅವರು ಸಂಗೀತ ನೀಡಿದ್ದಾರೆ. ಸುಜೀತ್ ಅವರು ಈ ಸಿನಿಮಾಗೆ ನಿರ್ದೇಶನ ಮಾಡಿದ್ದಾರೆ.

## ಬಾಯ್‌ಫ್ರೆಂಡ್ ಜೊತೆ ರೆಡ್ ಹ್ಯಾಂಡ್ ಆಗಿ ಸಿಕ್ಕಿಬಿದ್ದ ಸಮಂತಾ!



**ದಪ್ಪ ಆಗಿದ್ದೀರಾ ಅಂದ್ರು ಫ್ಯಾನ್ಸ್**

ವಿಚ್ಛೇದನ ಪಡೆದು ಒಂಟಿಯಾಗಿದ್ದ ಸಮಂತಾ ಹೆಸರು ಇತ್ತೀಚೆಗೆ ನಿರ್ದೇಶಕ ರಾಜ್ ನಿಡಿಮೋರು ಜೊತೆ ಥಳುಕು ಹಾಕಿಕೊಂಡಿತ್ತು. ದುಬೈನಲ್ಲಿ ಇಬ್ಬರೂ ಕೈ ಹಿಡಿದು ಓಡಾಡುವ ಫೋಟೋ ವೈರಲ್ ಆದ್ಮೇಲಂತೂ ಅಭಿಮಾನಿಗಳಲ್ಲಿ ಕುತೂಹಲ ಹೆಚ್ಚಾಗಿತ್ತು. ಇದೀಗ ಮುಂಬೈನ ಬಾಂದ್ರಾದಲ್ಲಿ ಒಟ್ಟಿಗೆ ಕಾಣಿಸ್ಕೊಂಡು ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದಾರೆ. ಇದೀಗ ಪ್ರೀತಿ ವದಂತಿಗೆ ಇನ್ನಷ್ಟು ರೆಕ್ಕೆ ಪುಕ್ಕ ಬಂದಂತಾಗಿದೆ.

ನಿರ್ದೇಶಕ ರಾಜ್ ನಿಡಿಮೋರು ಜೊತೆ ಸಮಂತಾ ಕೊಂಚ ಹೆಚ್ಚೇ ಅನ್ಯೋನ್ಯವಾಗಿರೋದು ಹಲವು ಬಾರಿ ಸುದ್ದಿಯಾಗಿತ್ತು. ಇಬ್ಬರೂ ಒಟ್ಟಿಗೆ ಫ್ಯಾಮಿಲಿ ಮ್ಯಾನ್ ಹಾಗೂ ಸಿಟಾಡೆಲ್ ವೆಬ್‌ಸಿರೀಸ್‌ಗಳನ್ನ ಮಾಡುವಾಗ ಹೆಚ್ಚಿನ ಒಡನಾಟ ಸಾಮಾನ್ಯ. ಆದರೂ ಅದಕ್ಕೂ ಮೀರಿ ಇಬ್ಬರ ನಡುವಿನ ಸ್ನೇಹ, ಪ್ರೀತಿಗೆ ತಿರುಗಿದೆ ಎನ್ನಲಾಗಿತ್ತು. ಇದೀಗ ಆ ವದಂತಿಗೆ ಬಲವಾದ ಸಾಕ್ಷ್ಯ ಸಿಕ್ಕಂತಾಗಿದೆ. ಇನ್ಮೇಲೆ ಯಾಕೆ ಮುಚ್ಚುಮರೆ ಎಂಬಂತೆ ಒಟ್ಟಿಗೆ ಕಾಣಿಸ್ಕೊಂಡಿದೆ ಈ ಜೋಡಿ.

ರೆಗ್ಯುಲರ್ ಆಗಿ ಮುಂಬೈನಲ್ಲಿ ಸಮಂತಾ ಜಿಮ್ ಮುಗಿಸಿ ವಾಪಸ್ ಬರುವಾಗ ಪಾಪರಾಜಿಗಳ ಕ್ಯಾಮೆರಾದಲ್ಲಿ ಸೆರೆಯಾಗುತ್ತಾರೆ. ಈ ಬಾರಿ ವಿಶೇಷ ಅಂದ್ರೆ, ಸಮಂತಾ ಜೊತೆ ರಾಜ್ ಕೂಡ ಕಾಣಿಸ್ಕೊಂಡಿದ್ದಾರೆ. ಮೊದಲು ರಾಜ್ ಹೊರಬಂದು ಕಾರಿನೊಳಗೆ ಕುಳಿತ್ರು. ಬಳಿಕ ಒಂದೇ ನಿಮಿಷದಲ್ಲಿ ಸಮಂತಾ ಹೊರಬಂದು ಅದೇ ಕಾರಿನಲ್ಲಿ ಕುಳಿತು ಜೊತೆಯಾಗಿ ತೆರಳಿದ್ದಾರೆ. ಪ್ರಸ್ತುತ ಈ ಬೆಳವಣಿಗೆ ಇಬ್ಬರ ನಡುವೆ ಪ್ರೀತಿ ಚಿಗುರಿರೋ ಸುದ್ದಿಗೆ ಸೀಲ್ ಹೊಡೆದಂತಾಗಿದೆ. ಈ ಬಗ್ಗೆ ಸಮಂತಾ ಯಾವ ರೀತಿ ಪ್ರತಿಕ್ರಿಯೆ ಕೊಡ್ತಾರೋ ಕಾದು ನೋಡ್ಬೇಕು.

## ಟ್ರೋಲ್ ಆದ ಸಾಯಿಪಲ್ಲವಿ



**ತಂಗಿ ಮಾಡಿರೋ ತಪ್ಪಿಗೆ**

ಉಡುಗೆ ತೊಡುಗೆ ವಿಚಾರದಲ್ಲಿ ನಟಿ ಸಾಯಿಪಲ್ಲವಿ ಸಾಮಾನ್ಯರಲ್ಲಿ ಸಾಮಾನ್ಯ ಹುಡುಗಿಯಂತೆ ಇರೋದು ವಾಡಿಕೆ. ನೋ ಮೇಕಪ್, ನೋ ಗ್ಲ್ಯಾಮರ್ ಡ್ರೆಸ್ ಅನ್ನೋದು ಸಾಯಿಪಲ್ಲವಿ ಪಾಲಿಸಿ. ಆದರೆ ಇದೀಗ ತಂಗಿ ಮಾಡಿರೋ ಯಡವಟ್ಟಿನಿಂದ ಸಾಯಿಪಲ್ಲವಿ ಬಟ್ಟೆ ವಿಚಾರದಲ್ಲಿ ಟ್ರೋಲ್ ಆಗಿದ್ದಾರೆ. ಸಾಯಿಪಲ್ಲವಿ ಸ್ವಿಮ್‌ಸೂಟ್ ಧರಿಸಿರುವ ಫೋಟೋ ಇದೀಗ ಸೋಶಿಯಲ್ ಮೀಡಿಯಾದಲ್ಲಿ ಟ್ರೋಲ್ ಆಗುತ್ತಿದೆ.

ಅನೇಕರು ಉದ್ದೇಶಪೂರ್ವಕವಾಗಿ ಸ್ವಿಮ್‌ಸೂಟ್ ಧರಿಸಿ ಫೋಟೋ ಪೋಸ್ಟ್ ಮಾಡುವಂತೆ ಸಾಯಿಪಲ್ಲವಿ ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಹಾಕಿಲ್ಲ. ಸಾಯಿಪಲ್ಲವಿ ತಂಗಿ ಪೂಜಾ ಕಣ್ಣನ್ ಹಾಕಿರುವ ಪೋಸ್ಟ್ ಸಾಯಿಪಲ್ಲವಿಯನ್ನ ಇಣುಕಿ ನೋಡುವಂತೆ ಮಾಡಿದೆ. ಬೀಚ್‌ನಲ್ಲಿ ಅಕ್ಕ ಸಾಯಿಪಲ್ಲವಿ ತಂಗಿ ಪೂಜಾ ವೆಕೇಷನ್ ಎಂಜಾಯ್ ಮಾಡಿದ್ದು, ಇದರ ಕ್ಲೋಸ್‌ಅಪ್ ಫೋಟೋಗಳನ್ನ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ.

ಫೋಟೋಗಳಲ್ಲಿ ಎಲ್ಲಿಯೂ ಸಾಯಿಪಲ್ಲವಿ ಮೈಕಾಣುವಂತೆ ಪೋಸ್ ನೀಡಿಲ್ಲ. ಇಷ್ಟಾದ್ರೂ ಟ್ರೋಲ್ ಆಗೋಕೆ ಕಾರಣ ಸಾಯಿಪಲ್ಲವಿ ಬೀಚ್ ವೇರ್ ಅಥವಾ ಸ್ವಿಮ್‌ಸೂಟ್ ಧರಿಸಿದ್ದಾರೆ ಅನ್ನೋದು. ಗ್ಲ್ಯಾಮರ್ ಬಟ್ಟೆ ಇರಲಿ ಕೊನೆ ಪಕ್ಷ ಸ್ಲೀವ್‌ಲೆಸ್ ಡ್ರೆಸ್‌ನಲ್ಲೂ ಸಾಯಿಪಲ್ಲವಿ ಕಾಣಿಸಿಕೊಳ್ಳೋದು ವಿರಳ. ಆದರೆ ಬೀಚ್‌ನಲ್ಲಿ ಎಂಥಹ ಉಡುಗೆ ಧರಿಸಬೇಕೋ ಅಂಥಹ ಉಡುಗೆ ಧರಿಸಿದ್ದಾರೆ ಸಾಯಿಪಲ್ಲವಿ.




## ಮೋಹನ್‌ಲಾಲ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ

ಮಲಯಾಳಂ ಖ್ಯಾತ ನಟ ಮೋಹನ್‌ಲಾಲ್ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಿ, ಗೌರವಿಸಿದರು. ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಸಮಾರಂಭದಲ್ಲಿ ಮಲಯಾಳಂ ಖ್ಯಾತ ನಟ ಮೋಹನ್ ಲಾಲ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ತೆಗೆದುಕೊಂಡ ನನಗೆ ಜವಾಬ್ದಾರಿ ಹೆಚ್ಚಾಗಿದೆ. ಈ ಪ್ರಶಸ್ತಿಯನ್ನು ಮಲಯಾಳಂ ಚಿತ್ರರಂಗಕ್ಕೆ ಅರ್ಪಿಸುತ್ತೇನೆ ಎಂದು ತಿಳಿಸಿದರು.

ಇದೇ ವೇಳೆ ಜವಾನ್ ಸಿನಿಮಾದ ನಟನೆಗಾಗಿ ಶಾರುಖ್ ಖಾನ್ ಹಾಗೂ 12ನೇ ಫೇಲ್ ಸಿನಿಮಾದ ನಟನೆಗಾಗಿ ವಿಕ್ರಾಂತ್ ಮ್ಯಾಸ್ಸೆ ಅವರಿಗೆ ಅತ್ಯುತ್ತಮ ನಟ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮಿಸಸ್ ಚಟರ್ಜಿ ವರ್ಸಸ್ ನಾರ್ವೆ ಚಿತ್ರದ ನಟನೆಗಾಗಿ ರಾಣಿ ಮುಖರ್ಜಿ ಅತ್ಯುತ್ತಮ ನಟಿ ಪ್ರಶಸ್ತಿ ಸ್ವೀಕರಿಸಿದರು. ಕನ್ನಡದ ಕಂದೀಲು ಚಿತ್ರಕ್ಕೆ ಅತ್ಯುತ್ತಮ ಪ್ರಾದೇಶಿಕ ಕನ್ನಡ ಚಿತ್ರ ಪ್ರಶಸ್ತಿ ಪ್ರದಾನ ಮಾಡಲಾಯಿತು.

## ನಟ ದುಲ್ಕರ್ ಸಲ್ಮಾನ್‌ಗೆ ಸಮನ್ಸ್ ಜಾರಿ



**ಐಷಾರಾಮಿ ಕಾರುಗಳ ತೆರಿಗೆ ವಂಚನೆ ಆರೋಪ**

ಮಲಯಾಳಂ ಸ್ಟಾರ್ ನಟ ದುಲ್ಕರ್ ಸಲ್ಮಾನ್ ನಿವಾಸದ ಮೇಲೆ ಕಸ್ಟಮ್ ಅಧಿಕಾರಿಗಳು ದಾಳಿ ಮಾಡಿ 2 ಐಷಾರಾಮಿ ಕಾರುಗಳನ್ನು ವಶಕ್ಕೆ ಪಡೆದಿದ್ದಾರೆ. ಅಲ್ಲದೇ ದಾಖಲೆಗಳನ್ನು ಹಾಜರುಪಡಿಸುವಂತೆ ಸಮನ್ಸ್ ನೀಡಿದ್ದಾರೆ.

ದುಲ್ಕರ್ ಸಲ್ಮಾನ್ ಅವರು ಕಾರ್‌ಗಳ ಕ್ರೇಜ್ ಹೊಂದಿದ್ದ ನಟರಲ್ಲಿ ಒಬ್ಬರಾಗಿದ್ದಾರೆ. ಇವರು ಹಲವಾರು ವಿದೇಶಿ ಬ್ರ್ಯಾಂಡ್‌ನ ಐಷಾರಾಮಿ ಕಾರುಗಳನ್ನು ಹೊಂದಿದ್ದಾರೆ. ಅಲ್ಲದೇ ವಿದೇಶಗಳಿಂದ ಲಿಮಿಟೆಡ್ ಎಡಿಷನ್‌ನ ಕಾರುಗಳನ್ನು ಖರೀದಿಸಿದ್ದಾರೆ.

ಡಿಕ್ಯೂ ಮನೆಗೆ ಕಸ್ಟಮ್ಸ್ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಈ ವೇಳೆ ಎರಡು ಕಾರುಗಳನ್ನು ಸೀಜ್ ಮಾಡಿದ್ದಾರೆ. ಅಲ್ಲದೇ ಸಮನ್ಸ್ ಜಾರಿ ಮಾಡಿದ್ದು, ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದ್ದಾರೆ.

ಕೇರಳದ ಕೊಚ್ಚಿಯ ತೇವರದಲ್ಲಿರುವ ನಟ ಪೃಥ್ವಿರಾಜ್ ಸುಕುಮಾರನ್ ಮನೆ ಮೇಲೂ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಆದರೆ ಅಲ್ಲಿ ಯಾವುದೇ ವಿದೇಶಿ ವಾಹನ ಪತ್ತೆಯಾಗಿಲ್ಲ ಎನ್ನಲಾಗಿದೆ. ನಟರು ಮಾತ್ರವಲ್ಲದೆ ಕೆಲವು ಉದ್ಯಮಿಗಳ ಮನೆಗಳ ಮೇಲೂ ಸಹ ಕಸ್ಟಮ್ಸ್ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಈ ದಾಳಿಗೆ 'ನುಮ್ಖೂರ್' ಎಂದು ಹೆಸರಿಡಲಾಗಿದೆ. ವಾಹನಗಳನ್ನು ಮಲಯಾಳಂನಲ್ಲಿ ನುಮ್ಖೂರ್ ಎನ್ನಲಾಗುತ್ತದೆ.

# ಭಾರತದ ಎದುರು ಮಂಡಿಯೂರಿದ ಬಾಂಗ್ಲಾ

## ಫೈನಲ್‌ಗೇರಿದ ಸೂರ್ಯ ಪಡೆ




**ಅಭಿಷೇಕ್ ದಾಖಲೆ ಭಾರತಕ್ಕೆ ವಿಜಯಮಾಲೆ**

ಏಷ್ಯಾಕಪ್ ಸೂಪರ್ 4 ರ ಎರಡನೇ ಪಂದ್ಯದಲ್ಲಿ ಭಾರತ ಬಾಂಗ್ಲಾದೇಶವನ್ನು ಸೋಲಿಸಿ ಫೈನಲ್ ಪ್ರವೇಶಿಸಿದೆ. ಅಭಿಷೇಕ್ ಶರ್ಮಾ ಮತ್ತು ಶುಭ್‌ಮನ್ ಗಿಲ್ ಅವರ ಅರ್ಧಶತಕದ ಸಹಾಯದಿಂದ ಭಾರತ 168 ರನ್ ಗಳಿಸಿತು. ಬಾಂಗ್ಲಾದೇಶದ ಬ್ಯಾಟಿಂಗ್ ವಿಫಲವಾಗಿ 41 ರನ್‌ಗಳಿಂದ ಸೋಲೊಪ್ಪಿಕೊಂಡರು. ಈ ಗೆಲುವಿನೊಂದಿಗೆ ಭಾರತ ಅಜೇಯವಾಗಿ ಫೈನಲ್‌ಗೆ ತಲುಪಿದೆ. ಏಷ್ಯಾಕಪ್ ಸೂಪರ್ 4 ಸುತ್ತಿನ ತನ್ನ ಎರಡನೇ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಮಣಿಸಿದ ಟೀಂ ಇಂಡಿಯಾ ಅಜೇಯ ತಂಡವಾಗಿ ಫೈನಲ್‌ಗೇರಿದೆ. ಈ ಸುತ್ತಿನಲ್ಲಿ ಟೀಂ ಇಂಡಿಯಾಕ್ಕೆ ಇನ್ನೊಂದು ಬಾಕಿ ಉಳಿದಿದ್ದು, ಆ ಪಂದ್ಯಕ್ಕೂ ಮುನ್ನ ಟೀಂ ಇಂಡಿಯಾ ಫೈನಲ್‌ನಲ್ಲಿ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿದೆ. ಈ ಪಂದ್ಯದಲ್ಲಿ ಟಾಸ್ ಗೆದ್ದ ಬಾಂಗ್ಲಾದೇಶ ನಾಯಕ ಜಾಕಿರ್ ಅಲಿ ಭಾರತವನ್ನು ಮೊದಲು ಬ್ಯಾಟಿಂಗ್ ಮಾಡಲು ಆಹ್ವಾನಿಸಿದರು. ಅದರಂತೆ ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ 20 ಓವರ್‌ಗಳಲ್ಲಿ 168 ರನ್ ಕಲೆಹಾಕಿತು. ಈ ಗುರಿ ಬೆನ್ನಟ್ಟಿದ ಬಾಂಗ್ಲಾದೇಶ ತಂಡ ನಿಯಮಿತ ಅಂತರದಲ್ಲಿ ವಿಕೆಟ್ ಕಳೆದುಕೊಂಡು 41 ರನ್‌ಗಳಿಂದ ಸೋಲೊಪ್ಪಿಕೊಂಡಿತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾಕ್ಕೆ ಅಭಿಷೇಕ್ ಶರ್ಮಾ ಮತ್ತು ಶುಭ್‌ಮನ್ ಗಿಲ್ ಉತ್ತಮ ಆರಂಭ ನೀಡಿದರು. ಇಬ್ಬರ ನಡುವೆ ಮೊದಲ ವಿಕೆಟ್‌ಗೆ 77 ರನ್‌ಗಳ ಪಾಲುದಾರಿಕೆ ಇತ್ತು. ಆದರೆ ಇವರಿಬ್ಬರ ಹೊರತುಪಡಿಸಿ ಭಾರತದ ಬ್ಯಾಟಿಂಗ್ ಕ್ರಮಾಂಕಕ್ಕೆ ವಿಶೇಷವಾದದ್ದನ್ನು ಮಾಡಲು ಸಾಧ್ಯವಾಗಲಿಲ್ಲ. 37 ಎಸೆತಗಳಲ್ಲಿ 75 ರನ್ ಗಳಿಸಿದ ನಂತರ ಅಭಿಷೇಕ್ ಔಟಾದರು. ಇತ್ತ ಶುಭ್‌ಮನ್ ಗಿಲ್ 29 ರನ್ ಗಳಿಸಿ ಪೆವಿಲಿಯನ್‌ಗೆ ಮರಳಿದರು. ಮತ್ತೊಂದೆಡೆ, ಹಾರ್ದಿಕ್ ಪಾಂಡ್ಯ 29 ಎಸೆತಗಳಲ್ಲಿ 38 ರನ್ ಗಳಿಸಿದರು. ಬಾಂಗ್ಲಾದೇಶ ಪರ ರಿಷಾದ್ ಹುಸೇನ್ ಎರಡು ವಿಕೆಟ್ ಪಡೆದರೆ, ತಂಜಿಹ್ ಹಸನ್ ಸಕಿಬ್, ಮುಸ್ತಾಫಿಜುರ್ ರೆಹಮಾನ್ ಮತ್ತು ಮೊಹಮ್ಮದ್ ಸೈಫುದ್ದೀನ್ ತಲಾ ಒಂದು ವಿಕೆಟ್ ಪಡೆದರು.

### ಮೊದಲ ಸ್ಥಾನದಲ್ಲಿ ಅಭಿಷೇಕ್

**ಅಭಿಷೇಕ್ ಶರ್ಮಾ ಬ್ಯಾಟಿಂಗ್ ಮಾಡುವುದು ನೋಡುತ್ತಿದ್ದರೆ ಆತ ಹುಟ್ಟಿರುವುದೇ ಸಿಕ್ಸರ್ ಬಾರಿಸಲಿಕ್ಕೋ ಎಂಬಂತಿದೆ. ಬುಧವಾರ ಬಾಂಗ್ಲಾದೇಶದ ವಿರುದ್ಧ 5 ಸಿಕ್ಸರ್‌ಗಳನ್ನು ಸಿಡಿಸಿದ ಅವರು ಒಂದೇ ದಿನದಲ್ಲಿ ಸನತ್ ಜಯಸೂರ್ಯ ಮತ್ತು ರೋಹಿತ್ ಶರ್ಮಾ ಅವರ ಅಪರೂಪದ ಏಷ್ಯಾ ಕಪ್ ದಾಖಲೆಗಳನ್ನು ತಮ್ಮ ಹೆಸರಿಗೆ ಬರಿಸಿಕೊಂಡರು. ರೋಹಿತ್ ಶರ್ಮಾ ಅವರು ಏಷ್ಯಾಕಪ್ ನ ಒಂದು ಆವೃತ್ತಿಯಲ್ಲಿ 13 ಮತ್ತು ಜಯಸೂರ್ಯ 14 ಸಿಕ್ಸರ್ ಗಳನ್ನು ಚಚ್ಚಿದ್ದರು. ಇದೀಗ 17 ಸಿಕ್ಸರ್‌ಗಳನ್ನು ಹೊಡೆದಿರುವ ಅಭಿಷೇಕ್ ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ನಿಂತಿದ್ದಾರೆ.**

## ಪಾಕ್ ಆಟಗಾರನ ಅಹಂಕಾರಕ್ಕೆ ಹಸರಂಗ ಅಬ್ರಾರ್‌ದ್ದೇ ಶೈಲಿಯಲ್ಲಿ ಉತ್ತರ..




**ಅಬ್ರಾರ್ ಮುಖಕ್ಕೆ ಮಂಗಳಾರತಿ**

ಹಸರಂಗ ಔಟ್ ಆದಾಗ, ಅಬ್ರಾರ್‌ಗೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಔಟ್ ಆಗ್ತಿದ್ದಂತೆಯೇ ಬೇಸರದಿಂದ ಪೆವಿಲಿಯನ್‌ಗೆ ಬಂದರು. ಬೆನ್ನಲ್ಲೇ ಆ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಗಿತ್ತು. ಆ ಸಮಯದಲ್ಲಿ ಹಸರಂಗ ಏನನ್ನೂ ಹೇಳದಿದ್ದರೂ, ಸಮಯ ಬಂದಾಗ ಸೇಡು ತೀರಿಸಿಕೊಂಡರು. ಏಷ್ಯಾಕಪ್‌ನಲ್ಲಿ ನಿನ್ನೆ ಪಾಕಿಸ್ತಾನ ಹಾಗೂ ಶ್ರೀಲಂಕಾ ನಡುವೆ ಪಂದ್ಯ ನಡೆಯಿತು. ಪಾಕ್ ಆಟಗಾರ ಅಬ್ರಾರ್ ಅಹ್ಮದ್ ಬೌಲಿಂಗ್‌ನಲ್ಲಿ ವನಿಂದು ಹಸರಂಗ ಬೌಲ್ಡ್ ಆದರು. ವಿಕೆಟ್ ಪಡೆದ ನಂತರ ಅಬ್ರಾರ್, ಹಸರಂಗ ಅವರ ವಿಕೆಟ್ ಸೆಲೆಬ್ರೇಷನ್ ಅನುಕರಿಸಿದ. ಔಟ್ ಆಗ್ತಿದ್ದಂತೆಯೇ 'ಹಸರಂಗ ಟ್ರೇಡ್ ಮಾರ್ಕ್ ಸೆಲೆಬ್ರೇಷನ್' ನಕಲಿ ಮಾಡಿ ಗೇಲಿ ಮಾಡಿದ್ದ ಪಾಕಿಸ್ತಾನಿ ಅಬ್ರಾರ್ ಅಹ್ಮದ್. ಪಾಕಿಸ್ತಾನಿಯ ಈ ಅಹಂಕಾರಕ್ಕೆ ಹಸರಂಗ ಅವರ ಭಾಷೆಯಲ್ಲೇ ಉತ್ತರ ಕೊಟ್ಟಿದ್ದಾರೆ. ಇದು ಅಬ್ರಾರ್ ಅಹ್ಮದ್‌ಗೆ ಮಾತ್ರವಲ್ಲ, ಇಡೀ ಪಾಕಿಸ್ತಾನಿ ತಂಡಕ್ಕೇ ಭಾರೀ ಮುಖಭಂಗವಾಗಿದೆ.

ಆಯಕ್ಷನ್ ಹಾಗೂ ರಿಯಾಕ್ಷನ್ ಸಖತ್ತಾಗಿದ್ದು ಸೋಶಿಯಲ್ ಮೀಡಿಯಾದಲ್ಲಿ ಟ್ರೆಂಡ್ ಆಗಿದೆ. ಹಸರಂಗ ಔಟ್ ಆದಾಗ, ಅಬ್ರಾರ್‌ಗೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಔಟ್ ಆಗ್ತಿದ್ದಂತೆಯೇ ಬೇಸರದಿಂದ ಪೆವಿಲಿಯನ್‌ಗೆ ಬಂದರು. ಬೆನ್ನಲ್ಲೇ ಆ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಗಿತ್ತು. ಆ ಸಮಯದಲ್ಲಿ ಹಸರಂಗ ಏನನ್ನೂ ಹೇಳದಿದ್ದರೂ, ಸಮಯ ಬಂದಾಗ ಸೇಡು ತೀರಿಸಿಕೊಂಡರು. ಹಸರಂಗ ಬೌಲಿಂಗ್ ಮೂಲಕ ಪ್ರತೀಕಾರ ತೀರಿಸಿಕೊಂಡರು. ಫಖರ್ ಜಮಾನ್ ಅವರ ಅದ್ಭುತ ಕ್ಯಾಚ್ ಹಿಡಿದು ಪೆವಿಲಿಯನ್‌ಗೆ ಕಳುಹಿಸಿದರು. ಜೊತೆಗೆ ಸೈಮ್ ಅಯೂಬ್ ಮತ್ತು ಸಲ್ಮಾನ್ ಅಲಿ ಅಘಾ ವಿಕೆಟ್ ಪಡೆದರು. ಈ ಮೂರು ಬಾರಿಯೂ ಅಬ್ರಾರ್ ವಿಕೆಟ್ ಸೆಲೆಬ್ರೇಷನ್ ಅನ್ನು ನಕಲಿಸಿದ್ದಾರೆ. ಆಗ ಕ್ಯಾಮೆರಾ ನೇರವಾಗಿ ಅಬ್ರಾರ್ ಅವರ ಮುಖಕ್ಕೆ ತಿರುಗಿಸಲಾಗಿದೆ. ಅದರ ಹೊರತಾಗಿಯೂ ನಿನ್ನೆ ಶ್ರೀಲಂಕಾ ಸೋಲುವ ಮೂಲಕ, ಏಷ್ಯಾಕಪ್ ಫೈನಲ್ ಕನಸನ್ನು ಕೈಬಿಟ್ಟಿದೆ. ಆದರೆ ಅಧಿಕೃತವಾಗಿ ಹೊರಬಿದ್ದಿಲ್ಲ. ಕಳೆದ ಭಾನುವಾರ ಪಾಕಿಸ್ತಾನಿ ಆಟಗಾರರು ಮೈದಾನದಲ್ಲಿ ಭಾರತದ ವಿರುದ್ಧ ಕೆಟ್ಟದಾಗಿ ವರ್ತಿಸಿದರು. ತಮ್ಮ ಬಾಲೀಶ ಆಟವನ್ನು ಶ್ರೀಲಂಕ ವಿರುದ್ಧವೂ ಮುಂದುವರಿಸಿದರು.

## ಬಿಸಿಸಿಐಗೆ ಅಯ್ಯರ್ ಶಾಕ್; ನಾಯಕತ್ವಕ್ಕೆ ರಾಜೀನಾಮೆ



ಮಹತ್ವದ ಬೆಳವಣಿಗೆಯಲ್ಲಿ ಟೀಂ ಇಂಡಿಯಾದ ಸ್ಟಾರ್ ಆಟಗಾರ ಶ್ರೇಯಸ್ ಅಯ್ಯರ್ ನಾಯಕತ್ವಕ್ಕೆ ರಾಜಿನಾಮೆ ನೀಡಿದ್ದು, ಈ ಸಂಬಂಧ ಬಿಸಿಸಿಐಗೂ ಪತ್ರ ಬರೆದಿದ್ದಾರೆ. ಶ್ರೇಯಸ್ ಅಯ್ಯರ್ ದಿಢೀರ್ ರಾಜೀನಾಮೆಗೆ ಕಾರಣ ಏನು ಎಂಬ ಚರ್ಚೆ ಶುರುವಾಗಿದೆ. ಮಹತ್ವದ ಬೆಳವಣಿಗೆಯಲ್ಲಿ ಟೀಂ ಇಂಡಿಯಾದ ಸ್ಟಾರ್ ಆಟಗಾರ ಶ್ರೇಯಸ್ ಅಯ್ಯರ್ ನಾಯಕತ್ವಕ್ಕೆ ರಾಜಿನಾಮೆ ನೀಡಿದ್ದು, ಈ ಸಂಬಂಧ ಬಿಸಿಸಿಐಗೂ ಪತ್ರ ಬರೆದಿದ್ದಾರೆ. ಶ್ರೇಯಸ್ ಅಯ್ಯರ್ ಇಂಡಿಯಾ ಎ ತಂಡದ ನಾಯಕತ್ವಕ್ಕೆ ರಾಜೀನಾಮೆ ನೀಡಿದ್ದು, ತಂಡದಿಂದಲೂ ಸಂಪೂರ್ಣವಾಗಿ ಹೊರನಡೆದಿದ್ದಾರೆ. ತಮ್ಮ ಈ ದಿಢೀರ್ ನಿರ್ಧಾರಕ್ಕೆ ವೈಯಕ್ತಿಕ ಕಾರಣಗಳನ್ನ ನೀಡಿರುವ ಅವರು, ಇಂಡಿಯಾ ಎ ತಂಡದ ಭಾಗವಾಗಿರುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಆಸ್ಟ್ರೇಲಿಯಾ ಎ ವಿರುದ್ಧದ ಪಂದ್ಯಕ್ಕೋ ಮೊದಲೇ ಈ ಅಚ್ಚರಿಯ ಬೆಳವಣಿಗೆ ನಡೆದಿರುವುದು, ಭಾರತೀಯ ಕ್ರೀಡಾಭಿಮಾನಿಗಳಿಗೆ ಶಾಕ್ ನೀಡಿದೆ. ಶ್ರೇಯಸ್ ಅಯ್ಯರ್ ದಿಢೀರ್ ರಾಜೀನಾಮೆಗೆ ಕಾರಣ ಏನು ಎಂಬ ಚರ್ಚೆ ಶುರುವಾಗಿದೆ.




## ಟಿ20 ರ್‍ಯಾಂಕಿಂಗ್‌ನಲ್ಲಿ ದಾಖಲೆ ನಿರ್ಮಿಸಿದ ಅಭಿಷೇಕ್

ಏಷ್ಯಾಕಪ್‌ನಲ್ಲಿ ಅದ್ಭುತ ಪ್ರದರ್ಶನ ನೀಡುತ್ತಿರುವ ಅಭಿಷೇಕ್ ಶರ್ಮಾ ಐಸಿಸಿ ಟಿ20 ಶ್ರೇಯಾಂಕದಲ್ಲಿ 900 ರೇಟಿಂಗ್ ಅಂಕಗಳನ್ನು ದಾಟಿದ್ದಾರೆ.

ಈ ಮೂಲಕ 900 ಅಂಕಗಳನ್ನು ದಾಟಿದ ಮೂರನೇ ಭಾರತೀಯ ಬ್ಯಾಟ್ಸ್‌ಮನ್ ಎಂಬ ದೊಡ್ಡ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅವರು ನಂ. 1 ಸ್ಥಾನದಲ್ಲಿದ್ದು, ಕ್ರಿಕೆಟ್ ಇತಿಹಾಸದಲ್ಲೇ ಅತಿ ಹೆಚ್ಚು ರೇಟಿಂಗ್ ಪಡೆದ ಟಿ20 ಬ್ಯಾಟ್ಸ್‌ಮನ್ ಆಗುವ ಸಾಧ್ಯತೆಯಿದೆ

ಏಷ್ಯಾಕಪ್‌ನಲ್ಲಿ ರನ್‌ಗಳ ಮಳೆ ಹರಿಸುತ್ತಿರುವ ಟೀಂ ಇಂಡಿಯಾದ ಯುವ ಆರಂಭಿಕ ಬ್ಯಾಟ್ಸ್‌ಮನ್ ಅಭಿಷೇಕ್ ಶರ್ಮಾರು ಐಸಿಸಿ ಟಿ20 ಶ್ರೇಯಾಂಕದಲ್ಲಿ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಅಭಿಷೇಕ್ ತಮ್ಮ ನಂಬರ್ 1 ಸ್ಥಾನವನ್ನು ಉಳಿಸಿಕೊಂಡಿದ್ದು ಮಾತ್ರವಲ್ಲದೆ ಈಗ ರೇಟಿಂಗ್ ಪಾಯಿಂಟ್‌ಗಳಲ್ಲಿ 900 ಅಂಕಗಳನ್ನು ದಾಟಿದ್ದಾರೆ.

ಈ ಮೂಲಕ ಅಭಿಷೇಕ್ ಶರ್ಮಾ 900 ಅಂಕಗಳನ್ನು ದಾಟಿದ ಮೂರನೇ ಭಾರತೀಯ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ. ಇನ್ನು ಭಾರತದ ಪರ ಟಿ20ಯಲ್ಲಿ ಸೂರ್ಯಕುಮಾರ್ ಯಾದವ್ 912 ರೇಟಿಂಗ್ ಪಾಯಿಂಟ್‌ಗಳೊಂದಿಗೆ ಅತಿ ಹೆಚ್ಚು ರೇಟಿಂಗ್ ಪಾಯಿಂಟ್‌ಗಳ ದಾಖಲೆಯನ್ನು ಹೊಂದಿದ್ದಾರೆ.

ವಿರಾಟ್ ಕೊಹ್ಲಿ ಕೂಡ 909 ರೇಟಿಂಗ್ ಪಾಯಿಂಟ್ ಹೊಂದಿದ್ದರು. ಇದೀಗ ಅಭಿಷೇಕ್ 907 ರೇಟಿಂಗ್ ಪಾಯಿಂಟ್ ಕಲೆಹಾಕಿದ್ದಾರೆ. ಇದು ಮಾತ್ರವಲ್ಲದೆ ಅಭಿಷೇಕ್ ಶರ್ಮಾ ಐಸಿಸಿ ಟಿ20 ಶ್ರೇಯಾಂಕದಲ್ಲಿ ಅತಿ ಹೆಚ್ಚು ರೇಟಿಂಗ್ ಅಂಕಗಳನ್ನು ಪಡೆದ ಎಡಗೈ ಭಾರತೀಯ ಬ್ಯಾಟ್ಸ್‌ಮನ್ ಆಗಿದ್ದಾರೆ. ಅವರು ಇನ್ನೂ 13 ರೇಟಿಂಗ್ ಅಂಕಗಳನ್ನು ಗಳಿಸಿದರೆ ಕ್ರಿಕೆಟ್ ಇತಿಹಾಸದಲ್ಲಿ ಅತಿ ಹೆಚ್ಚು ರೇಟಿಂಗ್ ಪಾಯಿಂಟ್ ಪಡೆದ ಟಿ20 ಬ್ಯಾಟ್ಸ್‌ಮನ್ ಎನಿಸಿಕೊಳ್ಳಲಿದ್ದಾರೆ. ಈ ಹಿಂದೆ ಇಂಗ್ಲೆಂಡ್‌ನ ಡೇವಿಡ್ ಮಲನ್ 2020 ರಲ್ಲಿ 919 ರೇಟಿಂಗ್ ಪಾಯಿಂಟ್ ಪಡೆದು ದಾಖಲೆ ಬರೆದಿದ್ದರು. ಇದೀಗ ಅಭಿಷೇಕ್‌ಗೆ ಆ ದಾಖಲೆ ಮುರಿಯುವ ಅವಕಾಶವಿದೆ. ಅಭಿಷೇಕ್ ಶರ್ಮಾ ಏಷ್ಯಾಕಪ್‌ನಲ್ಲಿ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ. ಆಡಿರುವ ನಾಲ್ಕು ಪಂದ್ಯಗಳಲ್ಲಿ 173 ರನ್‌ಗಳೊಂದಿಗೆ ಅತಿ ಹೆಚ್ಚು ರನ್ ಗಳಿಸಿದ ಆಟಗಾರ ಎನಿಸಿಕೊಂಡಿದ್ದಾರೆ.

ಇಲ್ಲಿಯವರೆಗೆ 12 ಸಿಕ್ಸರ್‌ಗಳು ಮತ್ತು 17 ಬೌಂಡರಿಗಳನ್ನು ಬಾರಿಸಿದ್ದಾರೆ. ಈ ಫಾರ್ಮ್ ಅನ್ನು ಹೀಗೇ ಮುಂದುವರಿಸಿದರೆ ಅತ್ಯಧಿಕ ರೇಟಿಂಗ್ ಪಾಯಿಂಟ್ ಪಡೆದ ದಾಖಲೆ ಬರೆಯಲಿದ್ದಾರೆ. ಟಿ20 ಶ್ರೇಯಾಂಕದಲ್ಲಿ ಭಾರತ ತಂಡದ ಆಟಗಾರರು ಪಾರುಪತ್ಯ ಮುಂದುವರೆದಿದ್ದು, ಅಭಿಷೇಕ್ ಶರ್ಮಾ ನಂ. 1 ಸ್ಥಾನದಲ್ಲಿದ್ದರೆ, ತಿಲಕ್ ವರ್ಮಾ 3ನೇ ಸ್ಥಾನಕ್ಕೆ ಏರಿದ್ದಾರೆ. ಬೌಲಿಂಗ್‌ನಲ್ಲಿ ವರುಣ್ ಚಕ್ರವರ್ತಿ ನಂ. 1 ಸ್ಥಾನದಲ್ಲಿದ್ದಾರೆ. ಆಲ್‌ರೌಂಡರ್‌ಗಳಲ್ಲಿ ಹಾರ್ದಿಕ್ ಪಾಂಡ್ಯ ನಂ. 1 ಸ್ಥಾನವನ್ನು ಕಾಯ್ದುಕೊಂಡಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966